# ಬಿ-ರೈಡ್

ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ
ಅಭಿವೃದ್ಧಿ ಉದ್ಯಮ ನಿಯಮಿತ (ಬಿ-ರೈಡ್)




4ನೇ
## ವಾರ್ಷಿಕ ವರದಿ
## 2024-25

## ಬೈಯ್ಯಪ್ಪನಹಳ್ಳಿ– ಚಿಕ್ಕಬಾಣಾವರ ಮಲ್ಲಿಗೆ ಮಾರ್ಗದ ಕಾರಿಡಾರ್–2 ರ ಕಾಮಗಾರಿ ಪ್ರಗತಿ





ಬಾಣಸವಾಡಿಯಲ್ಲಿ ರಾಫ್ಟ್ ನಿರ್ಮಾಣ ಕಾರ್ಯಗಳು, ಪಿ7 ಗಾಗಿ ಪಿಯರ್ ಶಟರ್ ಅನ್ನು ಸರಿಪಡಿಸುವುದು ಮತ್ತು ಪೋರ್ಟಲ್ ಬೀಮ್ ಕ್ರಿಬ್‌ಅನ್ನು ಸರಿಪಡಿಸುವುದು ಮತ್ತು ಮಲ್ಲಿಗೆ ಮಾರ್ಗದ ಕಸ್ತೂರಿ ನಗರದಲ್ಲಿ ಪಿ2 ಮತ್ತು ಪಿ3 ಕಾರ್ಯಗಳಿಗೆ ಸ್ಟ್ಯಾಗ್ಗಿಂಗ್ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ.

## SEMU- ಕಾರಿಡಾರ್–2 ಮತ್ತು ಕಾರಿಡಾರ್–4ರ ಕಾಮಗಾರಿ ಪ್ರಗತಿ







ಪರಿಹಾರ ಅರಣ್ಯೀಕರಣದ ಮೂಲಕ ಬೆಂಗಳೂರನ್ನು ಹಸಿರೀಕರಣಗೊಳಿಸುವುದು ಬಿಡಿಎ ಮತ್ತು ಬಿಬಿಎಂಪಿಯೊಂದಿಗೆ 1:10 ನೆಡುತೋಪು ಅನುಪಾತದ ಅಡಿಯಲ್ಲಿ ಜಿಕೆವಿಕೆ ಮತ್ತು ಎನ್‌ಪಿಎಕೆಎಲ್‌ನಲ್ಲಿ 87,000 ಸಸಿಗಳನ್ನು ನೆಡಲಾಗಿದೆ,
ಇದು ಕೆ–ರೈಡ್‌ನ ಸುಸ್ಥಿರ ನಗರ ಮೂಲಸೌಕರ್ಯಕ್ಕೆ ಕೊಡುಗೆಯ ನೋಟ.

## ದ್ವಿಪಥೀಕರಣ ಯೋಜನೆಯ ಕಾಮಗಾರಿ ಪ್ರಗತಿ
## ಬೈಯ್ಯಪ್ಪನಹಳ್ಳಿ – ಹೊಸೂರು (48 ಕಿ.ಮೀ) ಕೆಲಸದ ಪ್ರಗತಿ





ಬೆಂಗಳೂರು ಬೆಳ್ಳಂದೂರು ರಸ್ತೆ ನಿಲ್ದಾಣದಲ್ಲಿ ತಾತ್ಕಾಲಿಕ ಹಳಿ ತಿರುವುಗಾಗಿ ಪ್ಲಾಟ್‌ಫಾರ್ಮ್ (ಜಗಲಿ/ವೇದಿಕೆ) ಕಾಮಗಾರಿಗಳು ಪೂರ್ಣಗೊಂಡಿವೆ.
ಸಂಖ್ಯೆ 474 (ಪ್ರಮುಖ ಸೇತುವೆ), ಆನೇಕಲ್ ನಿಲ್ದಾಣದ ಕಟ್ಟಡ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿವೆ.

# ಬಿ–ರೈಡ್

## 4ನೇ ವಾರ್ಷಿಕ ವರದಿ 2024–25

### ವಿಷಯಗಳು


| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1. | ನಿರ್ದೇಶಕರ ಮಂಡಳಿ | 4 |
| 2. | 4ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ | 5 |
| 3. | ಹಣಕಾಸು ವರ್ಷ 2024–25ರ ನಿರ್ದೇಶಕರ ವರದಿ | 9 - 15 |
| 4. | ಹಣಕಾಸು ವರ್ಷ 2024–25 ರ ಸ್ವತಂತ್ರ ಲೆಕ್ಕಪರಿಶೋಧಕರ ವರದಿ | 16 - 27 |
| 5. | 31.03.2025 ಆಯವ್ಯಯ ಪಟ್ಟಿ (ಬ್ಯಾಲೆನ್ಸ್ ಶೀಟ್) | 28 |
| 6. | 31.03.2025 ರಂತೆ ಲಾಭ ಮತ್ತು ನಷ್ಟ ಲೆಕ್ಕಗಳ ಹೇಳಿಕೆ | 29 |
| 7. | 31.03.2025 ರಂತೆ ನಗದು ಹರಿವು ಹೇಳಿಕೆ | 31 |
| 8. | 31.03.2025 ರ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು ಹಾಗೂ ಗಮನಾರ್ಹ ಲೆಕ್ಕಪತ್ರ ನೀತಿಗಳ ಕುರಿತ ಟಿಪ್ಪಣಿಗಳು | 32- 48 |
| 9. | ಹಣಕಾಸು ವರ್ಷ 2024–25 ರ ಸಿ & ಎಜಿ (ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲಕರು) ರವರ ಅಭಿಪ್ರಾಯಗಳು | 52 |


### ನೋಂದಾಯಿತ ಕಚೇರಿ:

**ಸಂಪರ್ಕ ಸೌಧ, 1 ನೇ ಮಹಡಿ, ಸರ್ವೆ ನಂ. 8, (ಬಿ.ಇ.ಪಿ. ಆವರಣ),**
**ಓರಿಯನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು – 560010**

# ಬಿ–ರೈಡ್

## ಮಂಡಳಿಯ ನಿರ್ದೇಶಕರು

| | |
|---|---|
| ಡಾ. ಶಾಲಿನಿ ರಜನೀಶ್, ಐಎಎಸ್ | ಅಧ್ಯಕ್ಷರು |
| ಶ್ರೀ. ತುಷಾರ್ ಗಿರಿನಾಥ್, ಐಎಎಸ್ | ನಾಮನಿರ್ದೇಶಿತ ನಿರ್ದೇಶಕರು, ಜಿಒಕೆ |
| ಶ್ರೀ. ಲಕ್ಷ್ಮಣ್ ಸಿಂಗ್, ಐಆರ್‌ಎಸ್‌ಎಇ | ವ್ಯವಸ್ಥಾಪಕ ನಿರ್ದೇಶಕರು, ಬಿ–ರೈಡ್ |
| ಡಾ. ವಿಶಾಲ್ ಆರ್, ಐಎಎಸ್ | ನಾಮನಿರ್ದೇಶಿತ ನಿರ್ದೇಶಕರು, ಜಿಒಕೆ |
| ಶ್ರೀ. ಸಂಜೀವ್ ಕುಮಾರ್ ಗಾರ್ಗ್, ಐಆರ್‌ಎಸ್‌ಇ | ನಾಮನಿರ್ದೇಶಿತ ನಿರ್ದೇಶಕರು, ಎಂಒಆರ್ |
| ಶ್ರೀ. ಸಿ.ಎಂ. ರಂಗನಾಥ್, ಐಆರ್‌ಎಎಸ್‌ಇ | ನಾಮನಿರ್ದೇಶಿತ ನಿರ್ದೇಶಕರು, ಎಂಒಆರ್ |
| ಶ್ರೀಮತಿ. ಕುಸುಮಾ ಹರಿ ಪ್ರಸಾದ್, ಐಆರ್‌ಎಎಸ್ | ನಾಮನಿರ್ದೇಶಿತ ನಿರ್ದೇಶಕರು, ಎಂಒಆರ್ |
| ಶ್ರೀಮತಿ. ಅಡಿವೆಪ್ಪ ಪಾವಟೆ ಅಪರ್ಣಾ, ಕೆಎಎಸ್ | ನಾಮನಿರ್ದೇಶಿತ ನಿರ್ದೇಶಕರು, ಜಿಒಕೆ |
| ಶ್ರೀ. ರಾಜೇಶ್ ಕುಮಾರ್ ಸಿಂಗ್, ಐಆರ್‌ಎಸ್‌ಇ | ಪೂರ್ಣಾವಧಿ ನಿರ್ದೇಶಕರು |
| ಶ್ರೀ. ಅವಧೇಶ್ ಮೆಹ್ತಾ, ಸಿಎ. ಐಸಿಡಬ್ಲ್ಯೂಎ, ಸಿಪಿಎ | ಪೂರ್ಣಾವಧಿ ನಿರ್ದೇಶಕರು |

## ಲೆಕ್ಕಪರಿಶೋಧಕರು

| | |
|---|---|
| ಶಾಸನಬದ್ಧ ಲೆಕ್ಕಪರಿಶೋಧಕರು | ಬಿ. ಎನ್. ಪೈ & ಕಂ., ಬೆಂಗಳೂರು |

## ಬ್ಯಾಂಕರ್‌ಗಳು

| | |
|---|---|
| ಕೆನರಾ ಬ್ಯಾಂಕ್<br>ಬೆಂಗಳೂರು ಪ್ರೈಮ್<br>ಕಾರ್ಪೊರೇಟ್ ಶಾಖೆ,<br>ಬೆಂಗಳೂರು–560001 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ<br>ಓವರ್‌ಸೀಸ್ ಶಾಖೆ,<br>ನಂ.65, ಸೇಂಟ್ ಮಾರ್ಕ್ಸ್ ರಸ್ತೆ,<br>ಬೆಂಗಳೂರು–560001 |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಷೇರುದಾರರಿಗೆ ಸೂಚನೆ

ಮೆಸರ್ಸ್ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತದ ಷೇರುದಾರರ 4ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 20, 2025 ರಂದು ಮಧ್ಯಾಹ್ನ 12:30 ಕ್ಕೆ ಕೊಠಡಿ ಸಂಖ್ಯೆ 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 560001 ಇಲ್ಲಿ ಈ ಕೆಳಕಂಡ ವ್ಯವಹಾರಗಳನ್ನು ನಡೆಸುವ ಸಲುವಾಗಿ ಜಾರಿಮಾಡುತ್ತಿರುವ ಸೂಚನಾ ಪತ್ರ.

**ಸಾಮಾನ್ಯ ವ್ಯವಹಾರಗಳು**

1. **ಹಣಕಾಸು ಹೇಳಿಕೆಗಳ ಅಳವಡಿಕೆ:** ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಹಣಕಾಸು ಹೇಳಿಕೆಗಳು ಮತ್ತು ನಿರ್ದೇಶಕರ ಮಂಡಳಿಯ (ಮಂಡಳಿ) ಮತ್ತು ಲೆಕ್ಕಪರಿಶೋಧಕರ ವರದಿಗಳು ಮತ್ತು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 143 ರ ಅಡಿಯಲ್ಲಿ ಸಿ & ಎಜಿಯಿಂದ ಸ್ವೀಕರಿಸಿದ ಟಿಪ್ಪಣಿಗಳೊಂದಿಗೆ ಕೆಳಗಿನ ನಿರ್ಣಯಗಳನ್ನು ಸಾಮಾನ್ಯ ನಿರ್ಣಯವಾಗಿ ಪರಿಗಣಿಸಲು ಮತ್ತು ಸೂಕ್ತವೆಂದು ಭಾವಿಸಿದರೆ, ಮಾರ್ಪಾಡುಗಳೊಂದಿಗೆ ಅಥವಾ ಇಲ್ಲದೆ ಅಂಗೀಕರಿಸಲು:

   **ನಿರ್ಣಯವಾಗುವುದೆಂದರೆ:** ಏಪ್ರಿಲ್ 1, 2024 ರಿಂದ ಮಾರ್ಚ್ 31, 2025 ರವರೆಗಿನ ಅವಧಿಗೆ ಕಂಪನಿಯ ಹಣಕಾಸು ಹೇಳಿಕೆಗಳು, ಅದಕ್ಕೆ ಲಗತ್ತಿಸಲಾದ ಎಲ್ಲಾ ಶೆಡ್ಯೂಲ್‌ಗಳು, ಟಿಪ್ಪಣಿಗಳೊಂದಿಗೆ ಈ ಸಭೆಯಲ್ಲಿ ಮಂಡಿಸಲಾಗಿದೆ ಮತ್ತು ಅನುಮೋದಿಸಲಾಗಿದೆ.

   ನಿರ್ದೇಶಕರ ಮಂಡಳಿಯ ಮತ್ತು ಲೆಕ್ಕಪರಿಶೋಧಕರ ವರದಿಗಳು ಮತ್ತು ಸಿಎಜಿ (ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲಕರು) ಪ್ರಮಾಣಪತ್ರವನ್ನು ಇಲ್ಲಿ ಅಂಗೀಕರಿಸಲಾಗಿದೆ ಎಂದು ನಿರ್ಧರಿಸಲಾಗಿದೆ.

2. **2025–26ರ ಹಣಕಾಸು ವರ್ಷಕ್ಕೆ ಭಾರತದ ಸಿ&ಎಜಿ ನೇಮಿಸಿದ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ವರ್ಷದಲ್ಲಿ ಪಾವತಿಸುವ ಸಂಭಾವನೆಯನ್ನು ನಿಗದಿಪಡಿಸುವ ಕುರಿತು:** ವಿತ್ತೀಯ ವರ್ಷದ ಸಂಭಾವನೆಯನ್ನು ನಿಗದಿಪಡಿಸುವುದನ್ನು ವಿವೇಚಿಸಲು ಮತ್ತು ಸರಿಯೆನಿಸಿದಲ್ಲಿ ಮಾರ್ಪಾಡು ರಹಿತವಾಗಿ ಅಥವಾ ಸಹಿತವಾಗಿ, ಈ ಕೆಳಕಂಡ ನಿರ್ಣಯಗಳನ್ನು ಒಂದು ಸಾಮಾನ್ಯ ನಿರ್ಣಯವಾಗಿ ಜಾರಿಗೆ ತರುವುದು.

   **ನಿರ್ಣಯವಾಗುವುದೆಂದರೆ:** ಕಂಪನಿಗಳ ಕಾಯ್ದೆ 213ರ ಸೆಕ್ಷನ್ 139(7) ಮತ್ತು 142 ಹಾಗೂ ಅನ್ವಯಿಸುವ ಇತರ ಎಲ್ಲಾ ವಿಧಿಗಳು ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾದ ನಿಯಮಗಳು, ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಹಾಗೂ ಕಂಪನಿಗಳ (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ಪ್ರಕಾರ ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲಕರವರಿಂದ (ಸಿ&ಎಜಿ) CA.V/COY/ಕರ್ನಾಟಕ, ಬಿ–ರೈಡ್ (1)/871 ದಿನಾಂಕ: 11.09.2025 ರ ಪ್ರಕಾರ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಗೊಂಡ ಮೆಸ್ಸರ್ಸ್ ಬಿ ಎನ್ ಪೈ & ಕೋ.,. ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು [ಸಂಸ್ಥೆ ನೋಂದಣಿ ಸಂಖ್ಯೆ 008851S) ಗೆ ಅಗತ್ಯವಿರುವ ಇತರ ಅನುಮತಿಗಳ ಪ್ರಕಾರ, ವಾರ್ಷಿಕ ರೂ. 15,000/– (ಹದಿನೈದು ಸಾವಿರ ರೂಪಾಯಿ ಮಾತ್ರ) ಸಂಭಾವನೆಯನ್ನು ಹಾಗೂ ಇತರೆ ಅನ್ವಯವಾಗುವ ಶಾಸನಬದ್ಧ ತೆರಿಗೆಗಳೆಂದರೆ, ಕಂಪನಿಯು 1ನೇ ಏಪ್ರಿಲ್ 2025 ರಿಂದ 31ನೇ ಮಾರ್ಚ್ 2026 ರವರೆಗಿನ ಅವಧಿಯಲ್ಲಿ ಪಾವತಿಸಲು ಸಭೆಯಲ್ಲಿ ಅನುಮೋದಿಸಲಾಗಿದೆ.

**ಮಂಡಳಿಯ ಆದೇಶದ ಮೇರೆಗೆ**
**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ**
ಉದ್ಯಮ ನಿಯಮಿತ (ಬಿ–ರೈಡ್)

**ಸಹಿ/–**
**ಅವಧೇಶ್ ಮೆಹ್ತಾ**
ನಿರ್ದೇಶಕರು / ಬಿಡಿ&ಎಫ್

ಸ್ಥಳ: ಬೆಂಗಳೂರು
ದಿನಾಂಕ: 20.12.2025

**ಟಿಪ್ಪಣಿಗಳು:**

- ಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸಲು ಹಕ್ಕು ಇರುವ ಸದಸ್ಯರಿಗೆ ತನ್ನ ಪರವಾಗಿ ಪ್ರತಿನಿಧಿಯೊಬ್ಬನನ್ನು ನೇಮಿಸುವ ಹಕ್ಕು ಇರುತ್ತದೆ. ಪ್ರತಿನಿಧಿಯು ಕಂಪನಿಯ ಸದಸ್ಯರಾಗಿರಬೇಕೆಂದೇನಿಲ್ಲ. ಲಗತ್ತಿಸಲಾದ ಪ್ರತಿನಿಧಿ ಪತ್ರವನ್ನು ಕಂಪನಿಯ ನೊಂದಾಯಿತ ಕಚೇರಿಗೆ ವಾರ್ಷಿಕ ಸರ್ವಸದಸ್ಯರ ಸಭೆಗಿಂತ ಕನಿಷ್ಠ 48 ಗಂಟೆಗಳ ಮೊದಲು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು.
- ಮಾರ್ಗಸೂಚಿ ನಕ್ಷೆಯನ್ನು ಲಗತ್ತಿಸಲಾಗಿದೆ.
- ಕಂಪನಿ ಕಾಯ್ದೆ, 2013 ರ ಪರಿಚ್ಛೇದ 170 ರ ಅಡಿಯಲ್ಲಿ ನಿರ್ವಹಿಸಲಾಗುವ ನಿರ್ದೇಶಕರು ಮತ್ತು ಪ್ರಮುಖ ಸಿಬ್ಬಂದಿ ಮತ್ತು ಅವರ ಷೇರು ಹಿಡುವಳಿಗಳನ್ನೊಳಗೊಂಡ ಕಡತವು (ರಿಜಿಸ್ಟರ್) ಸರ್ವ ಸದಸ್ಯರ ಸಭೆಯ ಸದಸ್ಯರ ಅವಗಾಹನೆಗಾಗಿ ಲಭ್ಯವಿರುತ್ತದೆ.

# ಹಾಜರಾತಿ ಪತ್ರ

**4ನೇ ವಾರ್ಷಿಕ ಸಾಮಾನ್ಯ ಸಭೆಯು ಡಿಸೆಂಬರ್ 20, 2025 ರಂದು (ಶನಿವಾರ) ನಡೆಯಿತು.**

**ಹೆಸರು:**

**ವಿಳಾಸ:**

ನಾನು ಮೆಸರ್ಸ್ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಉದ್ಯಮ ನಿಯಮಿತ (ಬಿ–ರೈಡ್) ದ ನೋಂದಾಯಿತ ಷೇರುದಾರ/ಪ್ರತಿನಿಧಿ ಎಂದು ಪ್ರಮಾಣೀಕರಿಸಿ, ಡಿಸೆಂಬರ್ 20, 2025 ರಂದು (ಶನಿವಾರ) ಮಧ್ಯಾಹ್ನ 12.30 ಕ್ಕೆ ಕಮಿಟಿ ಕೊಠಡಿ ಸಂಖ್ಯೆ 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು–560001 ಇಲ್ಲಿ ನಡೆದ 4ನೇ ವಾರ್ಷಿಕ ಸಭೆಯಲ್ಲಿ ನನ್ನ ಉಪಸ್ಥಿತಿಯನ್ನು ಈ ಮೂಲಕ ದೃಢೀಕರಿಸುತ್ತಿದ್ದೇನೆ.

**ಮೊದಲ/ಸೋಲ್ ಹೋಲ್ಡರ್/ಪ್ರತಿನಿಧಿ** **ಎರಡನೇ ಹೂಡಿಕೆದಾರ/ಪ್ರತಿನಿಧಿ**

**ಟಿಪ್ಪಣಿ:** ದಯವಿಟ್ಟು ಹೆಸರು, ವಿಳಾಸವನ್ನು ಬರೆದು ಹಾಜರಾತಿ ಚೀಟಿಗೆ ಸಹಿ ಮಾಡಿದ ಬಳಿಕ ಸಭೆಗೆ ಹಾಜರಾಗುವ ಮೊದಲು ಪ್ರವೇಶದ್ವಾರದಲ್ಲಿ ನೀಡಬೇಕು.

# ನಮೂನೆ ಸಂಖ್ಯೆ ಎಂಜಿಟಿ–11

## ಪ್ರತಿನಿಧಿ ನಮೂನೆ

ಕಂಪನಿ ಕಾಯ್ದೆ–2013ರ ಪರಿಚ್ಛೇದ 105(6) ಹಾಗೂ
ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ಅನುಸಾರ

**CIN: U60230KA2021SGC142876**

**ಕಂಪನಿಯ ಹೆಸರು** : **ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ**

**ನೋಂದಾಯಿತ ಕಚೇರಿ** : ಸಂಪರ್ಕ ಸೌಧ, ಮೊದಲನೇ ಮಹಡಿ, ಸರ್ವೇ ನಂ. 8 (ಬಿಇಪಿ ಕಟ್ಟಡ), ಒರಿಯಾನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560 010

| | |
|---|---|
| **ಸದಸ್ಯರ ಹೆಸರು** | : |
| **ನೋಂದಾಯಿತ ವಿಳಾಸ** | : |
| **ಇ–ಮೇಲ್ ವಿಳಾಸ** | : |
| **ಫೋಲಿಯೊ ಸಂಖ್ಯೆ/ಕ್ಲೈಂಟ್ ಐಡಿ** | : |
| **ಡಿಪಿ ಐಡಿ** | : |

ನಾನು, ಮೇಲೆ ಹೆಸರಿಸಲಾದ ಕಂಪನಿಯ ______ ಈಕ್ವಿಟಿ ಷೇರಿನ ಸದಸ್ಯನಾಗಿದ್ದು, ಕೆಳಕಂಡವರನ್ನು ನನ್ನ ಪರವಾಗಿ ಪ್ರತಿನಿಧಿಯಾಗಿ ಈ ಮೂಲಕ ನೇಮಿಸುತ್ತೇನೆ...

1. ಹೆಸರು : ..............................................................
   ವಿಳಾಸ : ............................................................
   ಇ–ಮೇಲ್ ವಿಳಾಸ : ..........................................................

   ಸಹಿ: ................................ ಅಥವಾ ಅವರು ಹಾಜರಾಗದಿದ್ದಲ್ಲಿ

2. ಹೆಸರು : ..............................................................
   ವಿಳಾಸ : ............................................................
   ಇ–ಮೇಲ್ ವಿಳಾಸ : ..........................................................

   ಸಹಿ: ................................ ಅಥವಾ ಅವರು ಹಾಜರಾಗದಿದ್ದಲ್ಲಿ

3. ಹೆಸರು : ..............................................................
   ವಿಳಾಸ : ............................................................
   ಇ–ಮೇಲ್ ವಿಳಾಸ : ..........................................................

   ಸಹಿ: ................................ಅಥವಾ ಅವರು ಹಾಜರಾಗದಿದ್ದಲ್ಲಿ

ದಿನಾಂಕ: 20.12.2025 ರಂದು ಮಧ್ಯಾಹ್ನ 12.30ಕ್ಕೆ ಕೊಠಡಿ ಸಂಖ್ಯೆ 313, 3ನೇ ಮಹಡಿ ವಿಧಾನಸೌಧ, ಬೆಂಗಳೂರು–560001 ಇಲ್ಲಿ ನಡೆಯಲಿರುವ ಕಂಪನಿಯ 4ನೇ ವಾರ್ಷಿಕ ಸಾಮಾನ್ಯ ಸಭೆಗೆ ಹಾಗೂ ಅದರ ಯಾವುದೇ ಮುಂದೂಡಲಾದ ಸಭೆಗೆ ಸೂಚಿಸಲಾದ ನಿರ್ಣಯಗಳಿಗೆ ಸಂಬಂಧಿಸಿ ಕೆಳಕಂಡವರನ್ನು ನನ್ನ ಪರವಾಗಿ ಹಾಜರಾಗಲು ಮತ್ತು ಮತ ಚಲಾಯಿಸಲು (ವೋಟ್ ಮೂಲಕ) ಪ್ರತಿನಿಧಿಯಾಗಿ ನೇಮಿಸುತ್ತೇನೆ.

ನಿರ್ಣಯ ಸಂಖ್ಯೆ **1** ರಿಂದ **2**

ಈ...... ದಿನಾಂಕ 20....

| |
|---|
| **ರೆವಿನ್ಯೂ ಸ್ಟ್ಯಾಂಪ್ ಅಂಟಿಸುವುದು** |

**ಷೇರುದಾರರ ಸಹಿ** **ಪ್ರತಿನಿಧಿ ಹೊಂದಿರುವವರ ಸಹಿ**

**ಟಿಪ್ಪಣಿ:**

ಈ ಪ್ರತಿನಿಧಿ ನಮೂನೆಯು ಪರಿಣಾಮಕಾರಿಯಾಗಲು, ಅದನ್ನು ಸರಿಯಾಗಿ ಭರ್ತಿ ಮಾಡಿ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಸಭೆಯು ಆರಂಭವಾಗುವ 48 ಗಂಟೆಗಳ ಮೊದಲು ಸಲ್ಲಿಸಬೇಕು.

---

## ಸಭೆ ನಡೆಯುವ ಸ್ಥಳಕ್ಕೆ ಮಾರ್ಗ ನಕ್ಷೆ




**ವಿಳಾಸ: ಕೊಠಡಿ ಸಂಖ್ಯೆ. 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 560 001**

**ಸ್ಥಳ: ವಿಕಾಸಸೌಧ ಪಕ್ಕ.**

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಷೇರುದಾರರಿಗೆ ನಿರ್ದೇಶಕರ ವರದಿ

**ಇವರಿಗೆ,**

**ಸದಸ್ಯರು**

**ಬಿ–ರೈಡ್**

[ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು 2014 ರೊಂದಿಗೆ ಓದಲಾದ 2013 ರ ಕಂಪನಿಗಳ ಕಾಯ್ದೆಯ ಪರಿಚ್ಛೇದ 134 ರ ಪ್ರಕಾರ]

ಮಾರ್ಚ್ 31, 2025 ಕ್ಕೆ ಅಂತ್ಯಗೊಂಡ ವರ್ಷದ ಲಾಭ ಮತ್ತು ನಷ್ಟದ ಲೆಕ್ಕಪರಿಶೋಧಿತ ಹೇಳಿಕೆ ಹಾಗೂ ಆ ದಿನಾಂಕದಂದು ಇದ್ದ ಆಯ–ವ್ಯಯ ಪಟ್ಟಿ ಮತ್ತು ನಗದು ಹರಿವಿನ ಹೇಳಿಕೆ ಹಾಗೂ ಅವುಗಳಿಗೆ ಸಂಬಂಧಿಸಿದ ಲೆಕ್ಕಪರಿಶೋಧಕರ ಹಣಕಾಸು ಹೇಳಿಕೆಗಳ ವರದಿಗಳನ್ನು ನಿಮ್ಮ ನಿರ್ದೇಶಕರು ತಮ್ಮ 4ನೇ ವಾರ್ಷಿಕ ವರದಿಯಲ್ಲಿ ಸಂತೋಷದಿಂದ ಮಂಡಿಸುತ್ತಿದ್ದಾರೆ.

**1. ಹಣಕಾಸು ಫಲಿತಾಂಶಗಳು:**

ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಮುಖ್ಯಾಂಶಗಳ ಸಂಕ್ಷಿಪ್ತ ಮಾಹಿತಿಯು ಕೆಳಕಂಡಂತಿದೆ.

(₹ ಸಾವಿರಗಳಲ್ಲಿ)

| ವಿವರಗಳು | ಪ್ರಸ್ತುತ ವರ್ಷ 31.03.2025 | ಹಿಂದಿನ ವರ್ಷ 31.03.2024 |
|---|---|---|
| ಕಾರ್ಯಾಚರಣೆಗಳಿಂದ ಬಂದ ಆದಾಯ | 0.00 | 0.00 |
| ಕಾರ್ಯಾಚರಣೆಗಳಿಂದ ಬಂದ ಆದಾಯ | 0.00 | 0.00 |
| **ಇತರ ಆದಾಯ:**<br>ಬ್ಯಾಂಕ್ ಠೇವಣಿಗಳಿಂದ ಬರುವ ಬಡ್ಡಿ<br>ಆದಾಯ ತೆರಿಗೆ ಮರುಪಾವತಿಯ ಮೇಲಿನ ಬಡ್ಡಿ<br>ಇತರ ವಿವಿಧ ಆದಾಯ | 0.00 | 0.00 |
| **ಒಟ್ಟು ಆದಾಯ** | **0.00** | **0.00** |
| **ಕಡಿಮೆ:** ಒಟ್ಟು ವೆಚ್ಚಗಳು:<br>ಹಿಂದಿನ ಅವಧಿಯ ಬಾಬ್ತುಗಳು | 424.64 | 138.95 |
| ತೆರಿಗೆಗೆ ಮುಂಚಿನ ಲಾಭ/ನಷ್ಟ | (424.64) | (138.95) |
| **ಕಡಿಮೆ:** ತೆರಿಗೆಗೆ ನಿಬಂಧನೆ | 0.00 | 0.00 |
| ತೆರಿಗೆ ನಂತರದ ಲಾಭ / (ನಷ್ಟ) | (424.64) | (138.95) |
| **ಸೇರಿಸಿ:** ಮುಂದಿನ ಲಾಭಾಂಶ | (424.64) | (138.95) |
| **ಸೇರಿಸಿ:** ಹಿಂದಿನ ಅವಧಿಯ ಹೊಂದಾಣಿಕೆಗಳು | 0.00 | 0.00 |
| ಆಯ–ವ್ಯಯ ಪಟ್ಟಿಗೆ ವರ್ಗಾಯಿಸಲಾದ ಲಾಭ/ನಷ್ಟ | (424.64) | (138.95) |

**2. ಕಂಪನಿಯ ಕುರಿತು ಸಾಮಾನ್ಯ ಮಾಹಿತಿ:**

ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ('ಕಂಪನಿ' ಎಂದು ಉಲ್ಲೇಖಿಸಲಾಗುತ್ತದೆ) ಭಾರತದ ಕರ್ನಾಟಕ ರಾಜ್ಯದಲ್ಲಿ ಕಂಪನಿಗಳ ಕಾಯ್ದೆ, 2013 ರ ಪ್ರಕಾರ ಇದನ್ನು ಜನವರಿ 6, 2021 ರಂದು ಕಂಪನಿ ಎಂದು ಪರಿಗಣಿಸಲಾಗಿದೆ. ಕಂಪನಿಯ ನೋಂದಾಯಿತ ಕಚೇರಿ ಬೆಂಗಳೂರಿನಲ್ಲಿದೆ.

ಕಂಪನಿಯು ಸಂಪೂರ್ಣವಾಗಿ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಕೆ–ರೈಡ್‌ನ ಸ್ವಾಮ್ಯಕ್ಕೆ ಒಳಪಡುತ್ತದೆ. ಕೆ–ರೈಡ್ ಒಂದು ಪ್ರಮುಖ ಸಂಸ್ಥೆಯಾಗಿದ್ದು, ಇದು ರೈಲ್ವೆ ಯೋಜನೆಗಳ ಸಮರ್ಪಕ ಜಾರಿ, ಸಮನ್ವಯ ಸಾಧಿಸುವುದು, ಯೋಜನೆಗಳ ಅನುಷ್ಠಾನವನ್ನು ದೃಢಪಡಿಸಿಕೊಂಡು ಕರ್ನಾಟಕ ಸರ್ಕಾರಕ್ಕೆ ವರದಿ ಸಲ್ಲಿಸುವ ಜವಾಬ್ದಾರಿಯನ್ನು ನಿಭಾಯಿಸುತ್ತದೆ.

ಕರ್ನಾಟಕದ ಬೆಂಗಳೂರಿನಲ್ಲಿ ಬೆಂಗಳೂರು ಸಬ್–ಅರ್ಬನ್ ರೈಲು ಯೋಜನೆಯನ್ನು ಕೈಗೊಳ್ಳಲು ಕಂಪನಿಯನ್ನು ಕ–ರೈಡ್ (ನೋಡಲ್ ಏಜೆನ್ಸಿ) ಎಸ್‌ಪಿವಿ ಎಂಬುದಾಗಿ ಗುರುತಿಸಲಾಗಿದ್ದು, ಬೆಂಗಳೂರು ಉಪನಗರ ರೈಲು ಯೋಜನೆಗಳನ್ನು ಜಾರಿಗೊಳಿಸುವ ದಿಸೆಯಲ್ಲಿ ಸ್ಥಾಪಿಸಲಾಗಿದೆ.

**3. ಹಣಕಾಸು ಪ್ರಕಟಣೆಯ ದಿನಾಂಕದ ನಂತರದ ಚಟುವಟಿಕೆಗಳು, ಯಾವುದಾದರೂ ಇದ್ದರೆ:**

ಹಣಕಾಸು ಪ್ರಕಟಣೆಯ ದಿನಾಂಕದ ನಂತರ ಕಂಪನಿಯು ಯಾವುದೇ ಚಟುವಟಿಕೆಗಳನ್ನು ಕೈಗೊಂಡಿರುವುದಿಲ್ಲ.

**4. ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದಾದರೂ ಬದಲಾವಣೆ ಆಗಿದ್ದರೆ:**

ಕಂಪನಿಯು ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) ಕೈಗೊಳ್ಳಲು ಮೆಸರ್ಸ್ ರೈಲು ಸಂಯೋಜಿತ ಅಭಿವೃದ್ಧಿ ಉದ್ಯಮ ಕಂಪನಿ (ಕರ್ನಾಟಕ) ಲಿಮಿಟೆಡ್ ಅಡಿಯಲ್ಲಿ ಎಸ್‌ಪಿವಿ (ವಿಶೇಷ ಉದ್ದೇಶಕ ವಾಹನ) ಆಗಿದೆ. ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳಿಲ್ಲ.

**5. ಲಾಭಾಂಶ:**

ಕಂಪನಿಯು ಇನ್ನೂ ತನ್ನ ಕಾರ್ಯಾಚರಣೆಯನ್ನು ಆರಂಭಿಸದ ಕಾರಣ, ಮಂಡಳಿಯ ನಿರ್ದೇಶಕರು ಯಾವುದೇ ಲಾಭಾಂಶವನ್ನು ಶಿಫಾರಸ್ಸು ಮಾಡಿಲ್ಲ.

**6. ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 134(3)(ರಿ) ರ ಪ್ರಕಾರ ಮೀಸಲು ಹಣದ ವರ್ಗಾವಣೆ**

ಕಂಪನಿಯು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿಲ್ಲ ಮತ್ತು ಲಾಭ ಗಳಿಸಿಲ್ಲದ ಕಾರಣ, ಮಾರ್ಚ್ 31, 2025 ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಯಾವುದೇ ಮೊತ್ತವನ್ನು ಸಾಮಾನ್ಯ ಮೀಸಲು ಖಾತೆಗೆ ವರ್ಗಾಯಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**7. ಬಂಡವಾಳ ರಚನೆ:**

- ಎ) **ಷೇರು ಬಂಡವಾಳ**
  ಕಂಪನಿಯ ಷೇರು ಬಂಡವಾಳವು ರೂ.10 ಲಕ್ಷಗಳಾಗಿದ್ದು, ಒಂದು ಷೇರಿಗೆ ತಲಾ ರೂ. 10/– ರಂತೆ 1,00,000 ಷೇರುಗಳನ್ನಾಗಿ ವಿಂಗಡಿಸಲಾಗಿದೆ.
- ಬಿ) **ವಿಭಿನ್ನ ಹಕ್ಕು (ಡಿಫ್ರೆನ್ಷಿಯಲ್ ರೈಟ್ಸ್) ಗಳೊಂದಿಗೆ ಈಕ್ವಿಟಿ ಷೇರುಗಳ ವಿತರಣೆಯ ಕುರಿತು ಬಹಿರಂಗಪಡಿಸುವಿಕೆ:**
  ಕಂಪನಿಯು ಹಣಕಾಸು ವರ್ಷದಲ್ಲಿ ವಿಭಿನ್ನ ಹಕ್ಕುಗಳೊಂದಿಗೆ ಯಾವುದೇ ಈಕ್ವಿಟಿ ಷೇರುಗಳನ್ನು ಹೊರಡಿಸಿಲ್ಲ.
- ಸಿ) **ಉದ್ಯೋಗಿ ಸ್ಟಾಕ್ ಆಪ್ಷನ್ಸ್ (ಆಯ್ಕೆಗಳ) ವಿತರಣೆಯ ಕುರಿತು ಬಹಿರಂಗಪಡಿಸುವಿಕೆ:**
  ಕಂಪನಿಯು ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆಯಡಿಯಲ್ಲಿ ಯಾವುದೇ ಷೇರುಗಳನ್ನು ಹೊರಡಿಸಿಲ್ಲ.
- ಡಿ) **ಸ್ವೆಟ್ ಈಕ್ವಿಟಿ ಷೇರುಗಳ ಕುರಿತಂತೆ ಮಾಹಿತಿ ಬಹಿರಂಗಪಡಿಸುವುದು:**
  ಕಂಪನಿಯು ಹಣಕಾಸು ವರ್ಷದಲ್ಲಿ ಯಾವುದೇ ಸ್ವೆಟ್ ಈಕ್ವಿಟಿ ಷೇರುಗಳನ್ನು ಹೊರಡಿಸಿಲ್ಲ.

**8. ವ್ಯವಹಾರದ ಪ್ರಕ್ರಿಯೆಯಲ್ಲಿ ಬದಲಾವಣೆಗಳು:**

ಮಾರ್ಚ್ 31, 2025ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಂಪನಿಯ ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

**9. ಠೇವಣಿಗಳು:**

ವರದಿ ಮಾಡಲಾದ ಹಣಕಾಸು ವರ್ಷದಲ್ಲಿ ಕಂಪನಿಯು ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ ಅಥವಾ ನವೀಕರಿಸಿಲ್ಲ.

**10. ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣಗಳಿಂದ ಪ್ರಮುಖ ಆರ್ಡರ್‌ಗಳ ಕುರಿತು ಮಾಹಿತಿ:**

ನಿಯಂತ್ರಕರು, ನ್ಯಾಯಾಲಯಗಳು ಅಥವಾ ನ್ಯಾಯಧೀಕರಣಗಳಿಂದ ಪ್ರಮುಖ ಭವಿಷ್ಯದಲ್ಲಿ ಕಂಪನಿಯ ನಿರಂತರ ಸ್ಥಿತಿ ಮತ್ತು ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರುವ ಯಾವುದೇ ಮಹತ್ವದ ಮತ್ತು ಪ್ರಮುಖ ಆದೇಶಗಳನ್ನು ಹೊರಡಿಸಿಲ್ಲ.

**11. ಆಂತರಿಕ ಹಣಕಾಸು ನಿಯಂತ್ರಣಗಳ ಕುರಿತು ಸಮರ್ಪಕತೆ:**

ಸಂಪನ್ಮೂಲಗಳ ಸದ್ಬಳಕೆ ಮತ್ತು ಸುರಕ್ಷತೆ, ಹಣಕಾಸು ಮತ್ತು ಕಾರ್ಯಾಚರಣೆಯ ಮಾಹಿತಿಯ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಹೆಚ್ಚಿನ ಮಟ್ಟದ ಭರವಸೆಯನ್ನು ಒದಗಿಸಲು ಕಂಪನಿಯು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ.

**12. ವಾರ್ಷಿಕ ಸಲ್ಲಿಕೆಗಳು (ರಿಟರ್ನ್ಸ್) ಕುರಿತು :**

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 92(3)ರ ಓದಲಾದ ಸೆಕ್ಷನ್ 134 ರ ನಿಬಂಧನೆಗಳ ಪ್ರಕಾರ; ಕಂಪನಿಯು ಫಾರ್ಮ್ ಎಂಜಿಟಿ-9 ಅನ್ನು ಸಿದ್ಧಪಡಿಸುವ ಅಗತ್ಯವಿಲ್ಲ. ಕಂಪನಿಯು ತನ್ನದೇ ಆದ ವೆಬ್‌ಸೈಟ್ ಹೊಂದಿಲ್ಲ ಆದ್ದರಿಂದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಿದ ನಂತರ ಹೋಲ್ಡಿಂಗ್ ಕಂಪನಿಯ ವೆಬ್‌ಸೈಟ್ ಅಂದರೆ KRIDE ನ https://kride.in/copy-of-annual-return-for-the-year-ended-31-3-2024/ ರಲ್ಲಿ ಅಪ್‌ಲೋಡ್ ಮಾಡಲಾಗಿದೆ. ಎಂಸಿಎಗೆ ಸಲ್ಲಿಸಲಾದ ವಾರ್ಷಿಕ ರಿಟರ್ನ್‌ಗಳ ಪ್ರತಿಗಳು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಲಭ್ಯವಿರುತ್ತವೆ.

**ನಿರ್ದೇಶಕರು ಮತ್ತು ಸಭೆಗಳು**

ಎ. ಮಂಡಳಿಯ ಸಭೆಗಳು ಹಾಗೂ ಪ್ರತಿಯೊಬ್ಬ ನಿರ್ದೇಶಕರು ಭಾಗವಹಿಸಿದ, ಸಮಿತಿ ಸಭೆಗಳು ನಡೆದ ಸಂಖ್ಯೆ ಮತ್ತು ದಿನಾಂಕಗಳ ವಿವರ ಕೆಳಗಿನಂತಿದೆ.

**ಮಂಡಳಿ ಸಭೆಗಳು, ನಿರ್ದೇಶಕರ ಸಮಿತಿಗಳು ನಡೆದ ವಿವರ:**

**ಎ) ಮಂಡಳಿಯ ಸಭೆಗಳು**

2024–25ರ ಹಣಕಾಸು ವರ್ಷದಲ್ಲಿ, ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 173 ರ ಪ್ರಕಾರ ನಿರ್ದೇಶಕರ ಮಂಡಳಿಯ ಮೂರು ಸಭೆಗಳನ್ನು ನಡೆಸಲಾಗಿದ್ದು, ಇದರ ವಿವರ ಕೆಳಗಿನಂತಿದೆ. ಎರಡು ಸಭೆಗಳು ನಡೆಯುವ ನಡುವಿನ ಅಂತರವನ್ನು ಕಾಪಾಡಿಕೊಳ್ಳಲಾಗಿದೆ.

| ಕ್ರ. ಸಂ. | ಸಭೆಯು ನಡೆದ ದಿನಾಂಕ | ಸಭೆಯ ದಿನಾಂಕದಂದು ಇದ್ದ ಒಟ್ಟು ನಿರ್ದೇಶಕರ ಸಂಖ್ಯೆ | ಹಾಜರಾತಿ | |
|---|---|---|---|---|
| | | | ಹಾಜರಾದ ನಿರ್ದೇಶಕರ ಸಂಖ್ಯೆ | ಹಾಜರಾತಿಯ ಶೇಕಡಾವಾರು |
| 1 | 31.08.2024 | 8 | 7 | 87.5 |
| 2 | 21.12.2024 | 9 | 9 | 100 |
| 3 | 17.03.2025 | 9 | 7 | 87.5 |

**ಸಭೆಯಲ್ಲಿ ಭಾಗವಹಿಸಿದ ಸದಸ್ಯರ ಹಾಜರಾತಿಯ ಕುರಿತು ವಿವರಗಳು ಈ ಕೆಳಗಿನಂತಿವೆ:**

| ಹೆಸರು | ಹುದ್ದೆ | ವರ್ಗ | 01.04.2024 ರಿಂದ 31.03.2025 ರ ಅವಧಿಯಲ್ಲಿ ನಡೆದ | |
|---|---|---|---|---|
| | | | ಸಭೆಗಳ ಸಂಖ್ಯೆ | ಹಾಜರಿದ್ದವರು |
| **ಡಾ. ಶಾಲಿನಿ ರಜನೀಶ್,** ಐಎಎಸ್ | ಅಧ್ಯಕ್ಷರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| ಡಾ. ಮಂಜುಳಾ ಎನ್, ಐಎಎಸ್ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀ. ಧನಂಜಯ ಸಿಂಗ್,** ಐಆರ್‌ಎಸ್ಇ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 1 | 1 |
| **ಶ್ರೀ. ಮಹೇಶ್ವರ ರಾವ್,** ಐಎಎಸ್ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀಮತಿ. ದೀಪಾ ಕೊಟ್ನಿಸ್,** ಐಆರ್‌ಎಸ್ಎ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀ. ಸಂಜೀವ್ ಕುಮಾರ್ ಗಾರ್ಗ್,** ಐಆರ್‌ಎಸ್ಇ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 1 |
| **ಶ್ರೀ. ಅಶುತೋಷ್ ಮಾಥುರ್,** ಐಆರ್‌ಎಸ್ಇ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀ. ರಾಜೇಶ್ ಕುಮಾರ್ ಸಿಂಗ್,** ಐಆರ್‌ಎಸ್ಇ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀ. ಅವಧೇಶ್ ಮೆಹ್ತಾ** | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| **ಶ್ರೀಮತಿ. ಅಪರ್ಣಾ ಪಾವಟೆ,** ಕೆಎಎಸ್ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 1 |

ಬಿ. ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ವರದಿಯ ಅವಧಿಯಲ್ಲಿ ಯಾವುದೇ ವ್ಯಕ್ತಿಯನ್ನು ಪ್ರಮುಖ ನಿರ್ವಹಣಾ ಅಧಿಕಾರಿ (ಕೆಎಂಪಿ)ಯಾಗಿ ನೇಮಕ ಮಾಡಿಲ್ಲ.

**ಸಿ. ನಿರ್ದೇಶಕರ ಬದಲಾವಣೆಯ ಕುರಿತು:**

ಮಂಡಳಿಯ ರಚನೆಯಲ್ಲಿ ಮಾಡಿದ ಬದಲಾವಣೆಯ ವಿವರಗಳು ಈ ಕೆಳಗಿನಂತಿದೆ:

| ಹೆಸರು | ಹುದ್ದೆ | ನೇಮಕಾತಿ/ಹುದ್ದೆ ತ್ಯಾಗ | ಜಾರಿಗೆ ಬರುವ ದಿನಾಂಕ |
|---|---|---|---|
| ಶಾಲಿನಿ ರಜನೀಶ್ | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 29/08/2024 |
| ರಜನೀಶ್ ಗೋಯೆಲ್ | ನಾಮನಿರ್ದೇಶಿತ ನಿರ್ದೇಶಕರು | ಹುದ್ದೆ ತ್ಯಾಗ (ಸೆಸೆಸ್ಸಿಯೇಶನ್) | 29/08/2024 |
| ಸಂಜೀವ್ ಕುಮಾರ್ ಗಾರ್ಗ್ | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 26/11/2024 |
| ಧನಂಜಯ್ ಸಿಂಗ್ | ನಾಮನಿರ್ದೇಶಿತ ನಿರ್ದೇಶಕರು | ಹುದ್ದೆ ತ್ಯಾಗ (ಸೆಸೆಸ್ಸಿಯೇಶನ್) | 26/11/2024 |
| ಅಡಿವೆಪ್ಪ ಪವಾಟೆ ಅಪರ್ಣಾ | ನಾಮನಿರ್ದೇಶಿತ ನಿರ್ದೇಶಕರು | ಹುದ್ದೆ ತ್ಯಾಗ (ಸೆಸೆಸ್ಸಿಯೇಶನ್) | 21/12/2024 |
| ಮೊಹಮ್ಮದ್ ಇಕ್ರಮುಲ್ಲಾ ಶರೀಫ್ | ನಾಮನಿರ್ದೇಶಿತ ನಿರ್ದೇಶಕರು | ಹುದ್ದೆ ತ್ಯಾಗ (ಸೆಸೆಸ್ಸಿಯೇಶನ್) | 21/12/2024 |

**ಡಿ. ಮಂಡಳಿಯ ಮೌಲ್ಯಮಾಪನ:**

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 134 ರ ಉಪವಿಭಾಗ (3) ರ ಷರತ್ತು (ಪಿ) ರ ನಿಬಂಧನೆಗಳು, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014 ರ ನಿಯಮ 8 ರ ಉಪ ನಿಯಮ 4 ರನ್ವಯ ಸರ್ಕಾರಿ ಕಂಪನಿಗಳಿಗೆ ಮಂಡಳಿಯ ಮೌಲ್ಯಮಾಪನದಿಂದ ವಿನಾಯಿತಿ ನೀಡಲಾಗಿದೆ.

**ಇ. ನಿರ್ದೇಶಕರ ಘೋಷಣೆ:**

ಹಣಕಾಸು ವರ್ಷದಲ್ಲಿ, ಎಲ್ಲಾ ಮಂಡಳಿಯ ಸಭೆಗಳ ಸೂಚನೆಗಳನ್ನು ಕಂಪನಿಯ ಎಲ್ಲಾ ನಿರ್ದೇಶಕರಿಗೆ ಸರಿಯಾಗಿ ನೀಡಲಾಗಿದೆ.

ಹಣಕಾಸು ವರ್ಷದಲ್ಲಿ, ಮಂಡಳಿಯ ಸಭೆಗಳನ್ನು ಸರಿಯಾಗಿ ಕರೆಯಲಾಗಿದೆ ಮತ್ತು ನಡೆಸಲಾಗಿದೆ ಹಾಗೂ ಮಂಡಳಿಯ ಸಭೆಗಳ ನಡವಳಿಗಳನ್ನು (ಮಿನಿಟ್ಸ್) ಕಂಪನಿಗಳ ಕಾಯ್ದೆ, 2013ರ ನಿಬಂಧನೆಗಳ ಪ್ರಕಾರ ಸಿದ್ಧಪಡಿಸಲಾಗಿದೆ ಮತ್ತು ನಿರ್ವಹಿಸಲಾಗಿದೆ.

ಕಂಪನಿಗಳ ಕಾಯ್ದೆ, 2013 ರ ನಿಬಂಧನೆಗಳ ಪ್ರಕಾರ ಕಂಪನಿಯು ಅನ್ವಯವಾಗುವ ಎಲ್ಲಾ ವಹಿಗಳು (ರಿಜಿಸ್ಟರ್‌ಗಳು) /ದಾಖಲೆಗಳನ್ನು ನಿರ್ವಹಿಸಿದೆ ಮತ್ತು ನಿಗದಿತ ಸಮಯದೊಳಗೆ ಅದರಲ್ಲಿ ನಮೂದುಗಳನ್ನು ಮಾಡಿದೆ.

**13. ಕಾರ್ಯದರ್ಶೀಯ ಮಾನದಂಡಗಳು:**

ಅನ್ವಯವಾಗುವ ಎಲ್ಲಾ ಕಾರ್ಯದರ್ಶೀಯ ಮಾನದಂಡಗಳ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕರು ಸರಿಯಾದ ವ್ಯವಸ್ಥೆಗಳನ್ನು ರೂಪಿಸಿದ್ದಾರೆ ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

**14. ಸದಸ್ಯರ ಸಭೆ:**

ಕಂಪನಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಡಿಸೆಂಬರ್ 21, 2024 ರಂದು ನಡೆಯಿತು.

**15. ನಿರ್ದೇಶಕರ ಜವಾಬ್ದಾರಿಯುತ ಹೇಳಿಕೆ:**

ಕಂಪನಿ ಕಾಯ್ದೆ, 2013 ರ ಸೆಕ್ಷನ್ 134(5) ರ ನಿಬಂಧನೆಗಳಿಗೆ ಅನುಸಾರವಾಗಿ, ನಿಮ್ಮ ನಿರ್ದೇಶಕರು ಹೀಗೆ ದೃಢೀಕರಿಸುತ್ತಾರೆ:

ಎ. ಮಾರ್ಚ್ 31, 2025ಕ್ಕೆ ಕೊನೆಗೊಂಡ ಹಣಕಾಸು ವರ್ಷದ ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ, ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸಲಾಗಿದೆ ಮತ್ತು ಗಮನಾರ್ಹವಾದ ನಿರ್ಗಮನಗಳಿಗೆ ಸಂಬಂಧಿಸಿದ ಸರಿಯಾದ ವಿವರಣೆಯನ್ನು ನೀಡಲಾಗಿದೆ;

ಬಿ. ನಿರ್ದೇಶಕರು ಅಂತಹ ಲೆಕ್ಕಪತ್ರ ನೀತಿಗಳನ್ನು ಆಯ್ಕೆ ಮಾಡಿದ್ದಾರೆ ಮತ್ತು ಅವುಗಳನ್ನು ಸ್ಥಿರವಾಗಿ ಅನ್ವಯಿಸಿದ್ದಾರೆ ಮತ್ತು ಹಣಕಾಸು ವರ್ಷದ ಕೊನೆಯಲ್ಲಿ ಕಂಪನಿಯ ವ್ಯವಹಾರಗಳ ಸ್ಥಿತಿ ಮತ್ತು ಆ ಅವಧಿಗೆ ಕಂಪನಿಯ ಲಾಭ ಮತ್ತು ನಷ್ಟದ ನಿಜವಾದ ಮತ್ತು ನ್ಯಾಯಯುತ ನೋಟವನ್ನು ನೀಡಲು ಸಮಂಜಸ ಮತ್ತು ವಿವೇಚನಾಯುಕ್ತ ತೀರ್ಪುಗಳು ಮತ್ತು ಅಂದಾಜುಗಳನ್ನು ಮಾಡಿದ್ದಾರೆ;

ಸಿ. ಕಂಪನಿಯ ಸ್ವತ್ತುಗಳನ್ನು ರಕ್ಷಿಸಲು ಮತ್ತು ವಂಚನೆ ಮತ್ತು ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಈ ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ಸಾಕಷ್ಟು ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗೆ ನಿರ್ದೇಶಕರು ಸರಿಯಾದ ಮತ್ತು ಸಾಕಷ್ಟು ಕಾಳಜಿ ವಹಿಸಿದ್ದಾರೆ;

ಡಿ. ನಿರ್ದೇಶಕರು ವಾರ್ಷಿಕ ಲೆಕ್ಕ ಪತ್ರಗಳನ್ನು ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆಯ ಕಾಳಜಿ ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ; ಮತ್ತು

ಇ. ಕಂಪನಿಯು ಪಟ್ಟಿ ಮಾಡದ (ನಾನ್‌ಲಿಸ್ಟಿಂಗ್) ಕಂಪನಿಯಾಗಿರುವುದರಿಂದ, ಆಂತರಿಕ ಹಣಕಾಸು ನಿಯಂತ್ರಣಗಳನ್ನು ವಿಧಿಸುವುದಕ್ಕೆ ಸಂಬಂಧಿಸಿದ ಕಾಯಿದೆಯ ಸೆಕ್ಷನ್ 134(5) ರ ಉಪ ಷರತ್ತು (ಇ) ಅನ್ವಯಿಸುವುದಿಲ್ಲ; ಮತ್ತು

ಎಫ್. ಅನ್ವಯವಾಗುವ ಎಲ್ಲಾ ಕಾನೂನುಗಳ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕರು ಸರಿಯಾದ ವ್ಯವಸ್ಥೆಗಳನ್ನು ರೂಪಿಸಿದ್ದಾರೆ ಅಲ್ಲದೆ, ಅಂತಹ ವ್ಯವಸ್ಥೆಗಳು ಸಮರ್ಪಕವಾಗಿರುತ್ತವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

**16. ಸೆಕ್ಷನ್ 186 ರ ಅಡಿಯಲ್ಲಿ ಸಾಲಗಳು, ಖಾತರಿಗಳು ಮತ್ತು ಹೂಡಿಕೆಗಳ ವಿವರಗಳು:**

ಹಣಕಾಸು ವರ್ಷದಲ್ಲಿ, ಸೆಕ್ಷನ್ 186 ರ ಅಡಿಯಲ್ಲಿ ಯಾವುದೇ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳನ್ನು ಮಾಡಲಾಗಿಲ್ಲ. ಆದ್ದರಿಂದ ಈ ವಿಭಾಗದ ಅಡಿಯಲ್ಲಿ ವಿವರಗಳನ್ನು ಒದಗಿಸಲಾಗಿಲ್ಲ.

**17. ಸಂಬಂಧಿತ ವ್ಯಕ್ತಿ/ಸಂಸ್ಥೆಗಳೊಂದಿಗೆ ಒಪ್ಪಂದಗಳು (ಗುತ್ತಿಗೆಗಳು) ಅಥವಾ ವ್ಯವಸ್ಥೆಗಳ ವಿವರಗಳು:**

ಹಣಕಾಸು ವರ್ಷದಲ್ಲಿ, ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 188(1) ರಲ್ಲಿ ಉಲ್ಲೇಖಿಸಲಾದ ಸಂಬಂಧಿತ ಸಂಘ/ಸಂಸ್ಥೆಗಳೊಂದಿಗೆ ಯಾವುದೇ ಒಪ್ಪಂದಗಳು (ಗುತ್ತಿಗೆಗಳು) ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

**18. ಬ್ಯಾಲೆನ್ಸ್ ಶೀಟ್‌ನ ದಿನಾಂಕ ಮತ್ತು ನಿರ್ದೇಶಕರ ವರದಿಯ ದಿನಾಂಕದ ನಡುವೆ ಯಾವುದೇ ಪ್ರಮುಖ ಬದಲಾವಣೆಗಳಿದ್ದರೆ ಇದ್ದರೆ;**

ಹಣಕಾಸು ವರ್ಷದ ಅಂತ್ಯ ಮತ್ತು ಈ ವರದಿಯ ದಿನಾಂಕದ ನಡುವೆ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಮಹತ್ವದ ಬದಲಾವಣೆಗಳನ್ನು ಮಾಡಿರುವುದಿಲ್ಲ.

**19. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ವೆಚ್ಚಗಳ ವಿವರ:**

ಕಂಪನಿಯು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸದ ಕಾರಣ, ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ವೆಚ್ಚಕ್ಕೆ ಸಂಬಂಧಿಸಿದ ಮಾಹಿತಿಯನ್ನು ಶೂನ್ಯವೆಂದು ಪರಿಗಣಿಸಬಹುದು.

**20. ಅಪಾಯ ನಿಯಂತ್ರಣ ಕಾರ್ಯ ನೀತಿ:**

ಪ್ರತಿಯೊಂದು ಉದ್ಯಮದಲ್ಲಿಯೂ ರೂಢಿಯಲ್ಲಿರುವ ಹಾನಿ ನಿಯಂತ್ರಣ ಕಡಿಮೆ ಮಾಡುವ ತತ್ವವನ್ನು ಬಹಳ ಹಿಂದಿನಿಂದಲೂ ಅನುಸರಿಸುತ್ತಿದ್ದರೂ, ಅದು ಈಗ ಕಡ್ಡಾಯವಾಗಿ ಮಾರ್ಪಟ್ಟಿದೆ.

ಸ್ಥಿರತೆಯೊಂದಿಗೆ ಸುಸ್ಥಿರ ವ್ಯವಹಾರ ಬೆಳವಣಿಗೆಯನ್ನು ಖಚಿತಪಡಿಸುವುದು ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಅಪಾಯಗಳನ್ನು ವರದಿ ಮಾಡುವುದು, ಮೌಲ್ಯಮಾಪನ ಮಾಡುವುದು ಮತ್ತು ಪರಿಹರಿಸುವಲ್ಲಿ ಸಕ್ರಿಯ ವಿಧಾನವನ್ನು ಉತ್ತೇಜಿಸುವುದು ಮುಖ್ಯ ಉದ್ದೇಶವಾಗಿದೆ.

**ಸಾಮಾನ್ಯ ಅಪಾಯಗಳೆಂದರೆ:** ನಿಯಮಗಳು, ಸ್ಪರ್ಧೆ, ವ್ಯವಹಾರ ಅಪಾಯ, ತಂತ್ರಜ್ಞಾನ ಬಳಕೆಯಲ್ಲಿಲ್ಲದಿರುವುದು, ಹೂಡಿಕೆಗಳು, ವ್ಯವಹಾರ ಅಪಾಯ, ಮತ್ತಷ್ಟು ಆರ್ಥಿಕ ಅಪಾಯ, ರಾಜಕೀಯ ಅಪಾಯ, ನಿಷ್ಠೆಯ ಅಪಾಯ, ಕಾನೂನು ಅಪಾಯಗಳನ್ನು ಒಳಗೊಂಡಿರುತ್ತವೆ.

ನೀತಿಯ ವಿಷಯವಾಗಿ, ಈ ಅಪಾಯಗಳನ್ನು ನಿರ್ಣಯಿಸಲಾಗುತ್ತದೆ ಮತ್ತು ಅವುಗಳನ್ನು ತಗ್ಗಿಸಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

**21. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಸಮಿತಿ ಮತ್ತು ಅದರ ನೀತಿ:**

ಹಣಕಾಸು ವರದಿಯ ವರ್ಷಕ್ಕೆ ಸಂಬಂಧಿಸಿದಂತೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗಳನ್ನು ಕುರಿತಾದ ಉಪಬಂಧಗಳು ಕಂಪನಿಗೆ ಅನ್ವಯಿಸುವುದಿಲ್ಲ.

**22. ಜಾಗೃತ ಕಾರ್ಯ ವಿಧಾನದ ಸ್ಥಾಪನೆಯ ಕುರಿತು ಬಹಿರಂಗಪಡಿಸುವಿಕೆ:**

ಜಾಗೃತ ವಿಧಾನದ ನೀತಿಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಮಾಹಿತಿ ಬಹಿರಂಗ ಪಡಿಸುವ (ವಿಜಿಲ್ ಬ್ಲೋವರ್) ನೀತಿಗೆ ಸಂಬಂಧಿಸಿದ ನಿಬಂಧನೆಗಳು ಈ ಕಂಪನಿಗೆ ಅನ್ವಯಿಸುವುದಿಲ್ಲ.

**23. ಲೆಕ್ಕಪರಿಶೋಧಕರು ಮತ್ತು ಅವರ ವರದಿ:**

**ಎ. ಶಾಸನಬದ್ಧ ಲೆಕ್ಕಪರಿಶೋಧಕರು**

ಕಂಪನಿಯು 2013 ರ ಕಂಪನಿಗಳ ಕಾಯ್ದೆಯ ಸೆಕ್ಷನ್ 2(45) ರ ಅಡಿಯಲ್ಲಿ ಸರ್ಕಾರಿ ಕಂಪನಿಯಾಗಿರುವುದರಿಂದ, 2013 ರ ಕಂಪನಿಗಳ ಕಾಯ್ದೆಯ ಸೆಕ್ಷನ್ 139 (5) ರ ಅಡಿಯಲ್ಲಿ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೋಧಿಸಲು 2025–26 ನೇ ಸಾಲಿಗೆ ಸಿಎಜಿ ಬೆಂಗಳೂರಿನ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಮೆಸ್ಸರ್ಸ್ ಬಿ.ಎನ್. ಪೈ ಅವರನ್ನು ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಿಸಿರುತ್ತಾರೆ. ಸಿ&ಎಜಿ ನೇಮಿಸಿದ ಶಾಸನಬದ್ಧ ಲೆಕ್ಕಪರಿಶೋಧಕರು ಸಂಬಂಧಿಸಿದ ಹಣಕಾಸು ವರ್ಷದ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯವರೆಗೆ ಆಯಾ ಹಣಕಾಸು ವರ್ಷಕ್ಕೆ ಅಧಿಕಾರದಲ್ಲಿರುತ್ತಾರೆ.

**2024–25ನೇ ಹಣಕಾಸು ವರ್ಷದ ಲೆಕ್ಕಪರಿಶೋಧಕರ ವರದಿ:**

ಮಾರ್ಚ್ 31, 2025 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ವರದಿಯಲ್ಲಿ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿದ ಕೆಲವು ಅರ್ಹತೆಗಳು, ಮೀಸಲಾತಿ, ಪ್ರತಿಕೂಲ ಹೇಳಿಕೆಗಳು ಅಥವಾ ಹಕ್ಕು ನಿರಾಕರಣೆಗಳು ಕಾರ್ಯವಿಧಾನದ ಪ್ರಕ್ರಿಯೆಯಾಗಿದೆ. ಆದ್ದರಿಂದ, ಅವರು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 134 (3) (ಎಫ್) ಪ್ರಕಾರ ಯಾವುದೇ ಹೆಚ್ಚಿನ ವಿವರಣೆ ಅಥವಾ ಟಿಪ್ಪಣಿ (ಕಾಮೆಂಟ್)ಗಳನ್ನು ಕೇಳುವುದಿಲ್ಲ. ಸ್ವತಂತ್ರ ಶಾಸನಬದ್ಧ ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು **ಅನುಬಂಧ – I** ಎಂದು ಲಗತ್ತಿಸಲಾಗಿದೆ.

## 31–ಮಾರ್ಚ್–2025ಕ್ಕೆ ಅಂತ್ಯಗೊಂಡ ವರ್ಷದ ಬಿ–ರೈಡ್‌ನ ಹಣಕಾಸು ಹೇಳಿಕೆಯ ಕುರಿತು ಶಾಸನಬದ್ಧ ಲೆಕ್ಕಪರಿಶೋಧಕರ ಅವಲೋಕನಗಳಿಗೆ ಆಡಳಿತ ಮಂಡಳಿಯ ಪ್ರತ್ಯುತ್ತರಗಳು

| ಕ್ರ.ಸಂ. | ಅರ್ಹತಾ ಅಭಿಪ್ರಾಯದಲ್ಲಿನ ಅಂಶಗಳು | ಮಂಡಳಿಯ ಪ್ರತ್ಯುತ್ತರಗಳು |
|---|---|---|
| 1 | Ind AS- 101 ರ ಪ್ರಕಾರ–Ind AS ಪ್ಯಾರಾಗ್ರಾಫ್ 23 ಅನ್ನು ಮೊದಲ ಬಾರಿಗೆ ಅಳವಡಿಸಿಕೊಳ್ಳುವುದು– ಹಿಂದಿನ GAAP ನಿಂದ Ind AS ಗಳಿಗೆ ಪರಿವರ್ತನೆಯು ಅದರ ವರದಿ ಮಾಡಲಾದ ಬ್ಯಾಲೆನ್ಸ್ ಶೀಟ್, ಹಣಕಾಸು ಕಾರ್ಯಕ್ಷಮತೆ ಮತ್ತು ನಗದು ಹರಿವಿನ ಮೇಲೆ ಹೇಗೆ ಪರಿಣಾಮ ಬೀರಿತು ಎಂಬುದನ್ನು ಒಂದು ಸಂಸ್ಥೆಯು ವಿವರಿಸಬೇಕು. ಕಂಡಿಕೆ 24 ರ ಪ್ರಕಾರ –ಕಂಡಿಕೆ 23 ಅನ್ನು ಅಳವಡಿಸಲು ಒಂದು ಸಂಸ್ಥೆಯು ಮೊದಲ Ind AS ಹಣಕಾಸು ಹೇಳಿಕೆಗಳು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:<br>(ಎ) Ind AS 101 ರ ಪ್ರಕಾರ ವರದಿ ಮಾಡಲಾದ ಅದರ ಇಕ್ವಿಟಿಯ ಸಮನ್ವಯಗಳು, ಈ ಕೆಳಗಿನ ಎರಡೂ ದಿನಾಂಕಗಳಿಗೆ Ind AS ಗಳಿಗೆ ಅನುಗುಣವಾಗಿ ಹಿಂದಿನ GAAP ನ ಭಾರತೀಯ ಲೆಕ್ಕಪತ್ರ ಮಾನದಂಡಗಳ ಮೊದಲ ಬಾರಿಗೆ ಅದರ ಇಕ್ವಿಟಿಗೆ ಅಳವಡಿಕೆ:<br>(1) Ind AS ಗಳಿಗೆ ಪರಿವರ್ತನೆಯ ದಿನಾಂಕ; ಮತ್ತು<br>(2) ಹಿಂದಿನ GAAP ಗೆ ಅನುಗುಣವಾಗಿ ಘಟಕದ ಇತ್ತೀಚಿನ ವಾರ್ಷಿಕ ಹಣಕಾಸು ಹೇಳಿಕೆಗಳಲ್ಲಿ ಪ್ರಸ್ತುತಪಡಿಸಲಾದ ಇತ್ತೀಚಿನ ಮುಕ್ತಾಯದ ಅವಧಿ.<br>(ಬಿ) ಸಂಸ್ಥೆಯ ಇತ್ತೀಚಿನ ವಾರ್ಷಿಕ ಹಣಕಾಸು ಹೇಳಿಕೆಗಳಲ್ಲಿ ಇತ್ತೀಚಿನ ಅವಧಿಗೆ Ind AS ಗಳಿಗೆ ಅನುಗುಣವಾಗಿ ಅದರ ಒಟ್ಟು ಸಮಗ್ರ ಆದಾಯಕ್ಕೆ ಸಮನ್ವಯ. ಆ ಸಮನ್ವಯದ ಆರಂಭಿಕ ಹಂತವು ಒಟ್ಟು ಸಮಗ್ರ ಆದಾಯವಾಗಿರಬೇಕು ಹಿಂದಿನ GAAP ಯೊಂದಿಗೆ ಅದೇ ಅವಧಿಗೆ ಅಥವಾ ಹಿಂದಿನ GAAP ಅಡಿಯಲ್ಲಿ ಒಂದು ಸಂಸ್ಥೆಯು ಅಂತಹ ಒಟ್ಟು ಲಾಭ ಅಥವಾ ನಷ್ಟವನ್ನು ವರದಿ ಮಾಡದಿದ್ದರೆ.<br>ಇದಲ್ಲದೆ, ಕಂಡಿಕೆ 27ಎಎ ಪ್ರಕಾರ– ಪ್ಯಾರಾಗ್ರಾಫ್ ಡಿ7ಎಎ ಗೆ ಅನುಗುಣವಾಗಿ ಒದಗಿಸಲಾದ ಮೊದಲ ಬಾರಿಗೆ ವಿನಾಯಿತಿ ಆಯ್ಕೆಯನ್ನು ಒಂದು ಸಂಸ್ಥೆಯು ಅಳವಡಿಸಿಕೊಂಡರೆ, ಸಂಗತಿ ಮತ್ತು ಲೆಕ್ಕಪತ್ರ ನೀತಿಯನ್ನು ಸಂಸ್ಥೆಯು ಬಹಿರಂಗಪಡಿಸುತ್ತದೆ. ಮೊದಲ ಬಾರಿಗೆ ಪಡೆದ ವಿನಾಯಿತಿಯನ್ನು 2024–25ನೇ ಸಾಲಿನ ಹಣಕಾಸು ಹೇಳಿಕೆಗಳಲ್ಲಿ ಬಹಿರಂಗಪಡಿಸಲಾಗಿಲ್ಲ.<br>ಮೇಲೆ ಅಗತ್ಯವಿರುವಂತೆ ಬಹಿರಂಗಪಡಿಸುವಿಕೆಯನ್ನು ಹಣಕಾಸು ಹೇಳಿಕೆಗಳಲ್ಲಿ ಮಾಡಲಾಗಿಲ್ಲ, ಇದರ ಪರಿಣಾಮವಾಗಿ Ind AS-101 ಅನ್ನು ಅಳವಡಿಸಲು ಸಾಧ್ಯವಾಗಿರುವುದಿಲ್ಲ. | ಈ ಬಹಿರಂಗಪಡಿಸುವಿಕೆಯನ್ನು ನವೀಕರಿಸಲಾಗಿದೆ ಮತ್ತು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ. |

**ಬಿ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೇಖಪಾಲಕರು (ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್)**

ಕಂಪನಿಗಳ ಕಾಯ್ದೆ 2013 ರ ಅನ್ವಯವಾಗುವ ನಿಬಂಧನೆಗಳ ಪ್ರಕಾರ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿಯ ಮುಂದೆ ಇಡಬೇಕಾದ ಪ್ರತಿಯೊಂದು ಹಣಕಾಸು ಹೇಳಿಕೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೇಖಪಾಲಕರು (ಸಿ & ಎಜಿ) ಹೊರಡಿಸಿದ ಕಂಪನಿಯ ಹಣಕಾಸು ಹೇಳಿಕೆಗಳ ಮೇಲಿನ ಕಾಮೆಂಟ್‌ಗಳನ್ನು ಕಂಪನಿಯು ತೆಗೆದುಕೊಳ್ಳಬೇಕಾಗುತ್ತದೆ. ಪೂರಕ ಲೆಕ್ಕಪರಿಶೋಧನೆ ಪೂರ್ಣಗೊಂಡ ನಂತರ, ಸಿ & ಎಜಿ ತನ್ನ ಕಾಮೆಂಟ್‌ಗಳನ್ನು ಮತ್ತು ಸೆಕ್ಷನ್ 143(6) (ಬಿ) ಅಡಿಯಲ್ಲಿ ಅಗತ್ಯವಿರುವಂತೆ ಯಾವುದೇ ವರದಿಯನ್ನು ಕಂಪನಿಗೆ ನೀಡಿದೆ ಮತ್ತು ಕಂಪನಿಯ ಸದಸ್ಯರ ದಯೆಯಿಂದ ಗಮನಿಸಲು ಕಂಪನಿಯ 4 ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇದನ್ನು ಇರಿಸಲಾಗಿದೆ. ಸಿಎಜಿಯ ಪೂರಕ ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು **ಅನುಬಂಧ – II** ಎಂದು ಲಗತ್ತಿಸಲಾಗಿದೆ.

**ಸಿ. ವೆಚ್ಚ ದಾಖಲೆಗಳು ಮತ್ತು ವೆಚ್ಚ ಲೆಕ್ಕಪರಿಶೋಧನೆಯ ನಿರ್ವಹಣೆ**

ಕಂಪನಿಯ ವ್ಯವಹಾರ ಚಟುವಟಿಕೆಗಳನ್ನು ಪರಿಗಣಿಸಿ ಮತ್ತು ಹಿಂದಿನ ಹಣಕಾಸು ವರ್ಷದ ವಹಿವಾಟಿನ ಆಧಾರದ ಮೇಲೆ, ಸೆಕ್ಷನ್ 148 ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ವಿವರಗಳನ್ನು ನೀಡಲಾಗುವುದಿಲ್ಲ.

**ಡಿ. ಕಾರ್ಯದರ್ಶೀಯ ಲೆಕ್ಕಪರಿಶೋಧಕ**

ಸೆಕ್ಷನ್ 204 ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ವಿವರಗಳನ್ನು ನೀಡಲಾಗುರುವುದಿಲ್ಲ.

**ಇ. ವೆಚ್ಚ ಲೆಕ್ಕಪರಿಶೋಧಕ, ವೆಚ್ಚ ದಾಖಲೆಗಳ ನಿರ್ವಹಣೆ ಮತ್ತು ವೆಚ್ಚ ಲೆಕ್ಕಪರಿಶೋಧನೆ**

ಸೆಕ್ಷನ್ 148(3) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ವಿವರಗಳನ್ನು ನೀಡಲಾಗುರುವುದಿಲ್ಲ.

**ಎಫ್. ಲೆಕ್ಕಪರಿಶೋಧಕರಿಂದ ವರದಿ ಮಾಡಲಾದ ವಂಚನೆಗಳು**

ಕಾಯಿದೆಯ ಸೆಕ್ಷನ್ 143 ರ ಉಪವಿಭಾಗ (12) ರ ಪ್ರಕಾರ, ಲೆಕ್ಕಪರಿಶೋಧಕರು ಹಣಕಾಸು ವರ್ಷದಲ್ಲಿ ಯಾವುದೇ ವಂಚನೆಗಳನ್ನು ವರದಿ ಮಾಡಿರುವುದಿಲ್ಲ.

**24. ಉದ್ಯೋಗಿಗಳ ವಿವರಗಳು:**

ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ರ ನಿಯಮಗಳು 5(2) ಮತ್ತು 5(3) ರ ನಿಬಂಧನೆಗಳೊಂದಿಗೆ ಓದಲಾದ ಸೆಕ್ಷನ್.197 ರ ಪ್ರಕಾರ ನಿಗದಿತ ಮಿತಿಯನ್ನು ಮೀರಿ ಸಂಭಾವನೆ ಪಡೆಯುವ ಯಾವುದೇ ಉದ್ಯೋಗಿಗಳು ಕಂಪನಿಯಲ್ಲಿ ಇರುವುದಿಲ್ಲ.

**25. ಅಂಗಸಂಸ್ಥೆಗಳು/ಜಂಟಿ ಉದ್ಯಮಗಳು/ಸಹವರ್ತಿ (ಅಸೋಸಿಯೇಟ್) ಕಂಪನಿಗಳ ವಿವರಗಳು:**

ಕಂಪನಿಯು ವಿಶೇಷ ಉದ್ದೇಶದ ವಾಹನವಾಗಿದ್ದು, ಮೆಸರ್ಸ್ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ (ಕರ್ನಾಟಕ) ನಿಯಮಿತದ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾಗಿದೆ. ಈ ಕಂಪನಿಯು ಯಾವುದೇ ಅಂಗಸಂಸ್ಥೆ/ಜೆವಿ/ಅಸೋಸಿಯೇಟ್ ಕಂಪನಿಯನ್ನು ಹೊಂದಿಲ್ಲ.

**26. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013 ರ ಅಡಿಯಲ್ಲಿ ಬಹಿರಂಗಪಡಿಸುವಿಕೆಗಳು:**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013 ರ ಪ್ರಕಾರ, ಸೆಕ್ಷನ್ 4 (1)ರಲ್ಲಿನ ರೀತ್ಯಾ "ಕೆಲಸದ ಸ್ಥಳದಲ್ಲಿ ಪ್ರತಿಯೊಬ್ಬ ಉದ್ಯೋಗದಾತರು ಲಿಖಿತ ಆದೇಶದ ಮೂಲಕ "ಆಂತರಿಕ ದೂರು ಸಮಿತಿ" ಎಂದು ಕರೆಯಲ್ಪಡುವ ಸಮಿತಿಯನ್ನು ರಚಿಸಬೇಕು. ಕಂಪನಿಯು ವಿಶಾಖಾ ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಗೌರವಿಸುತ್ತದೆ ಮತ್ತು ಅದನ್ನೇ ಅನುಸರಿಸುತ್ತದೆ. ಮಾರ್ಚ್ 31, 2025 ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದಲ್ಲಿ ಈ ಕುರಿತು ಯಾವುದೇ ದೂರುಗಳು ದಾಖಲಾಗಿಲ್ಲ. ಕಂಪನಿಯು POSH ಕಾಯ್ದೆಯ ಎಲ್ಲಾ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳನ್ನು ಪಾಲಿಸಿದೆ.

**27. ಮಾತೃತ್ವ ಪ್ರಯೋಜನ ಕಾಯ್ದೆ, 1961 ರ ಅಳವಡಿಕೆ:**

ಮಾತೃತ್ವ ಪ್ರಯೋಜನ ಕಾಯ್ದೆ, 1961 ರ ಎಲ್ಲಾ ನಿಬಂಧನೆಗಳು ವರದಿ ಮಾಡುವ ಅವಧಿಯಲ್ಲಿ ಕಂಪನಿಗೆ ಅನ್ವಯಿಸುವುದಿಲ್ಲ ಎಂದು ಕಂಪನಿಯು ದೃಢಪಡಿಸುತ್ತದೆ. ಮತ್ತು ವರ್ಷದಲ್ಲಿ ಅರ್ಹ ಮಹಿಳಾ ಉದ್ಯೋಗಿಗಳಿಗೆ ಎಲ್ಲಾ ಶಾಸನಬದ್ಧ ಪ್ರಯೋಜನಗಳನ್ನು ವಿಸ್ತರಿಸಿದೆ.

**28. ಹಣಕಾಸು ವರ್ಷದ ಅಂತ್ಯದ ವೇಳೆಗೆ ಉದ್ಯೋಗಿಗಳ ಸಂಖ್ಯೆ: – ಶೂನ್ಯ**

**29. ಸಾಮಾನ್ಯ ಬಹಿರಂಗಪಡಿಸುವಿಕೆಗಳು:**

ಈ ಕೆಳಗಿನ ಅಂಶಗಳ ಕುರಿತು ಯಾವುದೇ ವಹಿವಾಟುಗಳು ನಡೆದಿಲ್ಲವಾದ್ದರಿಂದ, ಈ ಕೆಳಗಿನ ಅಂಶಗಳ ಕುರಿತು ಯಾವುದೇ ಬಹಿರಂಗಪಡಿಸುವಿಕೆ ಅಥವಾ ವರದಿ ಮಾಡುವ ಅಗತ್ಯವಿಲ್ಲ ಎಂದು ನಿಮ್ಮ ನಿರ್ದೇಶಕರು ಹೇಳುತ್ತಾರೆ:

ಎ. ಲಾಭಾಂಶ, ಮತದಾನ ಅಥವಾ ಇತರ ರೀತಿಯ ವಿಭಿನ್ನ ಹಕ್ಕುಗಳೊಂದಿಗೆ ಈಕ್ವಿಟಿ ಷೇರುಗಳ ವಿತರಣೆ.

ಬಿ. ಯಾವುದೇ ಯೋಜನೆಯಡಿಯಲ್ಲಿ ಕಂಪನಿಯ ಉದ್ಯೋಗಿಗಳಿಗೆ ಷೇರುಗಳ ವಿತರಣೆ (ಸ್ವೆಟ್ ಈಕ್ವಿಟಿ ಷೇರುಗಳು ಸೇರಿದಂತೆ) ಇಲ್ಲ.

ಸಿ. ಉದ್ಯೋಗಿಗಳ ಪ್ರಯೋಜನಕ್ಕಾಗಿ ಉದ್ಯೋಗಿಗಳು ಅಥವಾ ಟ್ರಸ್ಟಿಗಳು ತನ್ನದೇ ಆದ ಷೇರುಗಳನ್ನು ಖರೀದಿಸಲು ಹಣವನ್ನು ಒದಗಿಸುವ ಯಾವುದೇ ಯೋಜನೆಯನ್ನು ಕಂಪನಿಯು ಹೊಂದಿಲ್ಲ.

ಡಿ. ವರ್ಷದಲ್ಲಿ ದಿವಾಳಿತನ ಮತ್ತು ದಿವಾಳಿತನ ಸಂಹಿತೆ, 2016 ರ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಲಾಗಿಲ್ಲ ಅಥವಾ ಯಾವುದೇ ಪ್ರಕ್ರಿಯೆ ಬಾಕಿ ಉಳಿದಿಲ್ಲ.

ಇ. ವರ್ಷದ ಕೊನೆಯಲ್ಲಿ ಕಂಪನಿಯು ಯಾವುದೇ ಅಂಗಸಂಸ್ಥೆ, ಜಂಟಿ ಉದ್ಯಮ ಮತ್ತು ಸಹಾಯಕ ಕಂಪನಿಗಳನ್ನು ಹೊಂದಿಲ್ಲ.

ಎಫ್. ಸ್ವತಂತ್ರ ನಿರ್ದೇಶಕರಿಂದ ಘೋಷಣೆ ಅನ್ವಯಿಸುವುದಿಲ್ಲ ಏಕೆಂದರೆ ಕಂಪನಿಯು ಸ್ವತಂತ್ರ ನಿರ್ದೇಶಕರನ್ನು ನೇಮಿಸುವ ಅಗತ್ಯವಿಲ್ಲ

ಜಿ. ಕಂಪನಿಯು ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಒಂದು ಬಾರಿ ಇತ್ಯರ್ಥಪಡಿಸಿಲ್ಲ, ಆದ್ದರಿಂದ ಒಂದು ಬಾರಿ ಇತ್ಯರ್ಥಪಡಿಸುವ ಸಮಯದಲ್ಲಿ ಮಾಡಿದ ಮೌಲ್ಯಮಾಪನದ ಮೊತ್ತ ಮತ್ತು ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳುವಾಗ ಮಾಡಿದ ಮೌಲ್ಯಮಾಪನದ ನಡುವಿನ ವ್ಯತ್ಯಾಸದ ವಿವರಗಳು ಮತ್ತು ಅದಕ್ಕೆ ಕಾರಣಗಳು ಅನ್ವಯಿಸುವುದಿಲ್ಲ.

**30. ಕೃತಜ್ಞತೆಗಳು**

ಬಿ–ರೈಡ್ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ನಗರ ಭೂ ಸಾರಿಗೆ ನಿರ್ದೇಶನಾಲಯ (DULT), ಹಣಕಾಸು ಇಲಾಖೆ/ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ, ಭಾರತ ಸರ್ಕಾರ, ನೈಋತ್ಯ ರೈಲ್ವೆ ಇತ್ಯಾದಿಗಳೊಂದಿಗೆ ನಿಕಟ ಸಂಬಂಧವನ್ನು ಬೆಳೆಸಿಕೊಂಡಿದೆ. ನಿರ್ದೇಶಕರ ಮಂಡಳಿಯು ಅವರೆಲ್ಲರಿಂದ ಮತ್ತು ಇತರ ಪಾಲುದಾರರಿಂದ ಪಡೆದ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ಆಡಳಿತ ಮಂಡಳಿಯು ಕೃತಜ್ಞತೆ ಸಲ್ಲಿಸಲು ಬಯಸುತ್ತದೆ.

ಮಂಡಳಿಯ ಆದೇಶದ ಮೇರೆಗೆ
**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತದ ಪರವಾಗಿ,**

**ಸಹಿ/–**
**ಡಾ. ಶಾಲಿನಿ ರಜನೀಶ್, ಐಎಎಸ್**
ಅಧ್ಯಕ್ಷರು

ಸ್ಥಳ : ಬೆಂಗಳೂರು
ದಿನಾಂಕ : 20.12.2025

# ಸ್ವತಂತ್ರ ಲೆಕ್ಕಪರಿಶೋಧಕರ ವರದಿ

**ಇವರಿಂದ,**

**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ ಸದಸ್ಯರಿಗೆ**

**ಸ್ವತಂತ್ರ ಹಣಕಾಸು ಅಂಕಿಅಂಶಗಳ ಲೆಕ್ಕಪರಿಶೋಧನೆಯ ಕುರಿತು ವರದಿ**

**ಅರ್ಹವಾದ ಅಭಿಪ್ರಾಯ:**

ನಾವು ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ ("ಕಂಪನಿ") ದ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ಲೆಕ್ಕಪರಿಶೋಧಿಸಿದ್ದೇವೆ, ಇದರಲ್ಲಿ ಮಾರ್ಚ್ 31, 2025 ರಂತೆ ಕೊನೆಗೊಂಡಿರುವ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ವಿವರ, ಇಕ್ವಿಟಿಯಲ್ಲಿನ ಬದಲಾವಣೆಗಳ ವಿವರ, ಮತ್ತು ಹಣಕಾಸು ಹೇಳಿಕೆಗಳಿಗೆ ಸಂಬಂಧಿಸಿದ ಟಿಪ್ಪಣಿಗಳು, ಮುಖ್ಯ ಲೆಕ್ಕಪರಿಶೋಧನಾ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳು ಒಳಗೊಂಡಿವೆ. ಈ ವರದಿ 31 ಮಾರ್ಚ್, 2025 ರಂದು ಕೊನೆಗೊಂಡ ವರ್ಷಕ್ಕೆ ಕಂಪನಿಯ ಸ್ವತಂತ್ರ ಹಣಕಾಸು ಹೇಳಿಕೆಗಳ ಕುರಿತು 6 ಅಕ್ಟೋಬರ್, 2025 ರಲ್ಲಿ ಹೇಳಲಾದ ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯನ್ನು ಪರಿಷ್ಕರಿಸುತ್ತದೆ. ಇದರೊಂದಿಗೆ ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲರು (ಸಿ&ಎಜಿ) ರವರ ಲೆಕ್ಕ ಪರಿಶೋಧನೆಯಿಂದ ದೊರೆತ ಗಮನಾರ್ಹ ಟಿಪ್ಪಣಿಗಳನ್ನು ನೀಡಲಾಗಿದೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ನಮ್ಮ ವರದಿಯ ಅರ್ಹ ಅಭಿಪ್ರಾಯದ ಆಧಾರದಲ್ಲಿ ಉಲ್ಲೇಖಿಸಿದ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿದರೆ, ಮೇಲ್ಕಂಡ ಸ್ವತಂತ್ರ ಹಣಕಾಸು ಹೇಳಿಕೆಗಳು, ಕಂಪನಿಗಳ ಕಾಯ್ದೆ–2013 ಅವಶ್ಯಕತೆಗಳಿಗೆ ಅನುಗುಣವಾಗಿ ಮಾಹಿತಿ ನೀಡುತ್ತವೆ ಮತ್ತು ಸೆಕ್ಷನ್ 133ರ ಅಡಿಯಲ್ಲಿ ಕಂಪನಿಗಳ (ಭಾರತೀಯ ಲೆಕ್ಕ ಪರಿಶೋಧನಾ ನಿಯಮಗಳು) ನಿಯಮಾವಳಿಗಳ ಪಾಲನೆಯೊಂದಿಗೆ ಭಾರತೀಯ ಲೆಕ್ಕ ಪರಿಶೋಧನಾ ಮಾನದಂಡಗಳು (Ind AS) ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಮಾನ್ಯತೆ ಪಡೆದ ಇತರೆ ಲೆಕ್ಕ ಪರಿಶೋಧನಾ ಸಿದ್ಧಾಂತಗಳ ಅನುಸಾರ ಕಂಪನಿಗಳ ವ್ಯವಹಾರದ ಸ್ಥಿತಿ, 31ರ ಮಾರ್ಚ್ 2025 ರಂದು ಅದರ ನಷ್ಟ, ನಗದು ಹರಿವು ಮತ್ತು ಈಕ್ವಿಟಿಯಲ್ಲಿನ ಬದಲಾವಣೆಗಳ ನಿಜವಾದ ಹಾಗೂ ನ್ಯಾಯೋಚಿತತೆಯನ್ನು ತೋರಿಸುತ್ತದೆ.

**ಅರ್ಹ ಅಭಿಪ್ರಾಯಕ್ಕೆ ಆಧಾರ:**

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಕಾಯ್ದೆ–2013ರ ಸೆಕ್ಷನ್ 143(10) ಅಡಿಯಲ್ಲಿ ನಿರ್ಧಾರವಾದ ಲೆಕ್ಕ ಪರಿಶೋಧನಾ ಮಾನದಂಡಗಳ ಪ್ರಕಾರ ನಡೆಸಿದ್ದೇವೆ. ಆ ಮಾನದಂಡಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ವಿವರವಾಗಿ ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯ ವಿಭಾಗದಲ್ಲಿ ವಿವರಿಸಲಾಗಿದೆ.

ನಾವು ಕಂಪನಿಯಿಂದ ಸ್ವತಂತ್ರರಾಗಿದ್ದೇವೆ ಮತ್ತು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆ ಹೊರಡಿಸಿದ ನೈತಿಕ ಸಂಕೇತದ ಹಾಗೂ ಕಂಪನಿಗಳ ಕಾಯ್ದೆ 2013 ಮತ್ತು ಅದರ ಅಡಿ Ind AS ಹಣಕಾಸು ಹೇಳಿಕೆಗಳ ಪರಿಶೋಧನೆಗೆ ಸಂಬಂಧಿಸಿದ ನೈತಿಕ ಅಗತ್ಯಗಳನ್ನು ಪಾಲಿಸಿದ್ದೇವೆ. ಈ ನಿಯಮಗಳ ಪ್ರಕಾರ ಮತ್ತು ಐಸಿಎಐ ನ ನೀತಿ ಸಂಹಿತೆ ಅನುಸಾರ ಇತರೆ ನೈತಿಕ ಜವಾಬ್ದಾರಿಗಳನ್ನು ಕೂಡ ಪೂರೈಸಿದ್ದೇವೆ.

ನಾವು ಪಡೆದ ಲೆಕ್ಕ ಪರಿಶೋಧನಾ ಪುರಾವಣೆಗಳು ಸ್ವತಂತ್ರ ಹಣಕಾಸು ಹೇಳಿಕೆಗಳ ಮೇಲೆ ನಮ್ಮ ಅರ್ಹ ಅಭಿಪ್ರಾಯ ನೀಡಲು ಸಾಕಷ್ಟು ಸೂಕ್ತವಾಗಿದೆ ಎಂದು ನಂಬುತ್ತೇವೆ.

**ಅರ್ಹ ಅಭಿಪ್ರಾಯಕ್ಕೆ ಕಾರಣವಾಗುವ ನಿರ್ಣಯಗಳು:**

1. Ind AS- 101 ರ ಪ್ರಕಾರ – Ind AS ಕಂಡಿಕೆ 23 ರ ಮೊದಲ ಬಾರಿಗೆ ಅಳವಡಿಸಿಕೊಳ್ಳುವುದು – ಹಿಂದಿನ GAAP ನಿಂದ Ind AS ಗಳಿಗೆ ಪರಿವರ್ತನೆಯು ಅದರ ವರದಿ ಮಾಡಲಾದ ಬ್ಯಾಲೆನ್ಸ್ ಶೀಟ್, ಹಣಕಾಸು ಕಾರ್ಯಕ್ಷಮತೆ ಮತ್ತು ನಗದು ಹರಿವಿನ ಮೇಲೆ ಹೇಗೆ ಪರಿಣಾಮ ಬೀರಿತು ಎಂಬುದನ್ನು ಒಂದು ಸಂಸ್ಥೆಯು ವಿವರಿಸಬೇಕು. ಕಂಡಿಕೆ 24 ರ – 23 ರ ಪ್ರಕಾರ, ಒಂದು ಸಂಸ್ಥೆಯ ಮೊದಲ Ind AS ಹಣಕಾಸು ಹೇಳಿಕೆಗಳು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:

(ಎ) ಈ ಕೆಳಗಿನ ಎರಡೂ ಸಂದರ್ಭಗಳಲ್ಲಿ Ind AS ಗಳಿಗೆ ಅನುಗುಣವಾಗಿ Ind AS 101 ರ ಪ್ರಕಾರ ವರದಿ ಮಾಡಲಾದ ಅದರ ಇಕ್ವಿಟಿಯ ಸಮನ್ವಯಗಳು, ಹಿಂದಿನ GAAP ನ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಮೊದಲ ಬಾರಿಗೆ ಅನುಸರಿಸಿದೆ.

(i) Ind AS ಗಳಿಗೆ ಬದಲಾವಣೆಯ ದಿನಾಂಕ; ಮತ್ತು

(ii) ಹಿಂದಿನ GAAP ಗೆ ಅನುಗುಣವಾಗಿ ಸಂಸ್ಥೆಯು ವಾರ್ಷಿಕ ಹಣಕಾಸು ಹೇಳಿಕೆಗಳಲ್ಲಿ ಪ್ರಸ್ತುತಪಡಿಸಲಾದುದ್ದನ್ನು ಈ ಅವಧಿಗೆ ಮುಕ್ತಾಯಗೊಳಿಸಿದೆ.

(ಬಿ) ಇತ್ತೀಚಿನ ಅವಧಿಗೆ Ind AS ಗಳಿಗೆ ಅನುಗುಣವಾಗಿ ಅದರ ಒಟ್ಟು ಸಮಗ್ರ ಆದಾಯಕ್ಕೆ ಒಂದು ಸಂಸ್ಥೆಯು ಅಂತಹ ಒಟ್ಟು ಲಾಭ ಅಥವಾ ನಷ್ಟವನ್ನು ವರದಿ ಸಂಸ್ಥೆಯ ಇತ್ತೀಚಿನ ವಾರ್ಷಿಕ ಹಣಕಾಸು ಹೇಳಿಕೆಗಳಲ್ಲಿ ಮಾಡದಿದ್ದರೆ ಆ ಸಮನ್ವಯದ ಆರಂಭಿಕ ಹಂತವು ಅದೇ ಅವಧಿಗೆ ಹಿಂದಿನ GAAP ಗೆ ಅನುಗುಣವಾಗಿ ಒಟ್ಟು ಸಮಗ್ರ ಆದಾಯವಾಗಿರುತ್ತದೆ.

ಅಲ್ಲದೆ, ಕಂಡಿಕೆ 27ಎಎ ಪ್ರಕಾರ– ಕಂಡಿಕೆ ಡಿ7ಎಎ ಗೆ ಅನುಸಾರ ಒದಗಿಸಲಾದ ಮೊದಲ ಬಾರಿಗೆ ವಿನಾಯಿತಿ ಆಯ್ಕೆಯನ್ನು ಒಂದು ಸಂಸ್ಥೆಯು ಅಳವಡಿಸಿಕೊಂಡರೆ, ಅಂತಹ ವಿಷಯ ಮತ್ತು ಲೆಕ್ಕಪತ್ರ ನೀತಿಯನ್ನು ಸಂಸ್ಥೆಯು ಬಹಿರಂಗಪಡಿಸಬೇಕು. ಮೊದಲ ಬಾರಿಗೆ ಪಡೆದ ವಿನಾಯಿತಿಯನ್ನು 2024–25 ನೇ ಸಾಲಿನ ಹಣಕಾಸು ಹೇಳಿಕೆಗಳಲ್ಲಿ ಬಹಿರಂಗಪಡಿಸಲಾಗಿಲ್ಲ.

ಮೇಲೆ ತಿಳಿಸಿರುವಂತೆ ಅನಾನುಪಾಲನೆಯ ಕುರಿತು ಹಣಕಾಸು ಹೇಳಿಕೆಗಳಲ್ಲಿ ಬಹಿರಂಗಪಡಿಸಿರುವುದಿಲ್ಲ. ಇದರ ಪರಿಣಾಮವಾಗಿ Ind AS-101 ಅನ್ನು ಬದಲಾಯಿಸಲು ಸಾಧ್ಯವಾಗಿರುವುದಿಲ್ಲ.

**ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು:**

ಪ್ರಸ್ತುತ ಅವಧಿಯ ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ನಮ್ಮ ವೃತ್ತಿಪರ ತೀರ್ಮಾನವು ಅತ್ಯಂತ ಮಹತ್ವದ್ದಾಗಿರುವ ವಿಷಯಗಳ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳಾಗಿವೆ. ಈ ಅಂಶಗಳನ್ನು ಒಟ್ಟಾರೆಯಾಗಿ ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಮತ್ತು ಅದರ ರಚನೆಯಲ್ಲಿ ತಿಳಿಸಲಾಗಿದ್ದು, ನಾವು ಈ ವಿಷಯಗಳ ಬಗ್ಗೆ ಪ್ರತ್ಯೇಕ ಅಭಿಪ್ರಾಯವನ್ನು ನೀಡಿರುವುದಿಲ್ಲ.

ಕಂಪನಿಯು ಪಟ್ಟಿ ಮಾಡದ (ನಾನ್ ಲಿಸ್ಟೆಡ್) ಸಂಸ್ಥೆಯಲ್ಲಿರುವುದರಿಂದ ಪ್ರಮುಖ ಲೆಕ್ಕಪರಿಶೋಧನಾ SA 701 ರ ಪ್ರಕಾರ ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು ಅನ್ವಯಿಸುವುದಿಲ್ಲ.

**ಹಣಕಾಸು ಹೇಳಿಕೆಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಹೊರತುಪಡಿಸಿ ಇತರ ಮಾಹಿತಿ:**

ಕಂಪನಿಯ ನಿರ್ದೇಶಕರ ಮಂಡಳಿಯು ಇತರ ಮಾಹಿತಿಗಳ ವರದಿ ತಯಾರಿಕೆಗೆ ಜವಾಬ್ದಾರರಾಗಿರುತ್ತದೆ. ಇತರ ಮಾಹಿತಿಯಲ್ಲಿ ಅನುಬಂಧಗಳೂ ಸೇರಿದಂತೆ ವಾರ್ಷಿಕ ವರದಿಯಲ್ಲಿ ಒಳಗೊಂಡಿರುವ ಮಾಹಿತಿಯನ್ನು ಒಳಗೊಂಡಿದೆ. ಆದರೆ ಸ್ವತಂತ್ರ ಹಣಕಾಸು ಹೇಳಿಕೆಗಳು ಮತ್ತು ಅದರ ಬಗ್ಗೆ ನಮ್ಮ ಲೆಕ್ಕಪರಿಶೋಧಕರ ಮಾಹಿತಿಯನ್ನು ಒಳಗೊಂಡಿಲ್ಲ.

ಸ್ವತಂತ್ರ ಹಣಕಾಸು ಹೇಳಿಕೆಗಳ ಕುರಿತು ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಂಡಿರುವುದಿಲ್ಲ ಮತ್ತು ನಾವು ಅದರ ಬಗ್ಗೆ ಯಾವುದೇ ರೀತಿಯ ಭರವಸೆ ತೀರ್ಮಾನವನ್ನು ವ್ಯಕ್ತಪಡಿಸುವುದಿಲ್ಲ.

ಸ್ವತಂತ್ರ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಇತರ ಮಾಹಿತಿಯನ್ನು ಓದುವುದು ಮತ್ತು ಪರಿಗಣಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅಂತಹ ಇತರ ಮಾಹಿತಿಯು ಸ್ವತಂತ್ರ ಹಣಕಾಸು ಹೇಳಿಕೆಗಳೊಂದಿಗೆ ಅಥವಾ ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ಪಡೆದ ನಮ್ಮ ತಿಳುವಳಿಕೆಯೊಂದಿಗೆ ಗಣನೀಯವಾಗಿ ಹೊಂದಿಕೆಯಾಗುವುದಿಲ್ಲವೇ ಅಥವಾ ಗಣನೀಯವಾಗಿ ತಪ್ಪಾಗಿ ಹೇಳಲಾಗಿದೆಯೇ ಎಂದು ತೋರುತ್ತದೆ.

ನಾವು ನಿರ್ವಹಿಸಿದ ಕೆಲಸದ ಆಧಾರದ ಮೇಲೆ, ಈ ಇತರ ಮಾಹಿತಿಯ ಗಮನಾರ್ಹ ತಪ್ಪು ಹೇಳಿಕೆ ಇದೆ ಎಂದು ನಾವು ತೀರ್ಮಾನಿಸಿದರೆ, ಆ ಸಂಗತಿಯನ್ನು ನಾವು ವರದಿ ಮಾಡುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ನಮಗೆ ವರದಿ ಮಾಡಲು ಏನೂ ಇಲ್ಲ.

**ಸ್ವತಂತ್ರ ಹಣಕಾಸು ಹೇಳಿಕೆಗಳಿಗೆ ಮಂಡಳಿಯ ಜವಾಬ್ದಾರಿಗಳು:**

ಕಂಪನಿಯ ನಿರ್ದೇಶಕರ ಮಂಡಳಿಯು ಈ ಸ್ವತಂತ್ರ ಹಣಕಾಸು ಹೇಳಿಕೆಗಳ ತಯಾರಿಕೆಗೆ ಸಂಬಂಧಿಸಿದಂತೆ ಕಾಯಿದೆಯ ಸೆಕ್ಷನ್ 134(5) ರಲ್ಲಿ ಹೇಳಲಾದ ವಿಷಯಗಳಿಗೆ ಜವಾಬ್ದಾರರಾಗಿರುತ್ತದೆ. ಇದು ಹಣಕಾಸಿನ ಸ್ಥಿತಿ, ಆರ್ಥಿಕ ಕಾರ್ಯಕ್ಷಮತೆ, ನಗದು ಹರಿವುಗಳು ಮತ್ತು ಕಂಪನಿಯ ಇಕ್ವಿಟಿಯಲ್ಲಿನ ಬದಲಾವಣೆಗಳ ನಿಜವಾದ ಮತ್ತು ನ್ಯಾಯಯುತ ನೋಟವನ್ನು ನೀಡುತ್ತದೆ. ಇದು ಕಂಪನಿಗಳು (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015 ರ ತಿದ್ದುಪಡಿಯಂತೆ ಕಾಯ್ದೆಯ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಭಾರತೀಯ ಲೆಕ್ಕಪತ್ರ ಮಾನದಂಡಗಳು (Ind AS) ಸೇರಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿರುತ್ತದೆ.

ಈ ಜವಾಬ್ದಾರಿಯ ಜೊತೆಗೆ ಕಂಪನಿಯ ಆಸ್ತಿಗಳನ್ನು ರಕ್ಷಿಸಲು ಮತ್ತು ವಂಚನೆಗಳು ಮತ್ತು ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ಸಾಕಷ್ಟು ಲೆಕ್ಕಪತ್ರ ದಾಖಲೆಗಳನ್ನು ನಿರ್ವಹಿಸುವುದು; ಸೂಕ್ತವಾದ ಲೆಕ್ಕಪತ್ರ ನೀತಿಗಳ ಆಯ್ಕೆ ಮತ್ತು ಅನ್ವಯ; ಸಮಂಜಸ ಮತ್ತು ವಿವೇಚನಾಯುಕ್ತವಾದ ತೀರ್ಮಾನ ಮತ್ತು ಅಂದಾಜುಗಳನ್ನು ಮಾಡುವುದು; ನಿಜವಾದ ಮತ್ತು ನ್ಯಾಯಯುತ ನೋಟವನ್ನು ನೀಡುವ ಮತ್ತು ವಂಚನೆ ಅಥವಾ ದೋಷದಿಂದಾಗಿ ಗಮನಾರ್ಹ ವಸ್ತುನಿಷ್ಠ ಹೇಳಿಕೆಗಳಿಂದ ಮುಕ್ತವಾಗಿರುವ ಹಣಕಾಸು ಹೇಳಿಕೆಗಳ ತಯಾರಿಕೆ, ಲೆಕ್ಕಪತ್ರ ದಾಖಲೆಗಳ ನಿಖರತೆ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯನ್ನು ಸಹ ಒಳಗೊಂಡಿದೆ.

ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಾಗ, ಕಂಪನಿಯು ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆ ಆಗಿ ಮುಂದುವರೆಯಲು ಸಮರ್ಥವೋ ಅಲ್ಲವೋ ಎಂಬುದನ್ನು ನಿರ್ಧರಿಸುವ ಅಗತ್ಯಕ್ಕೆ ತಕ್ಕಂತೆ 'ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆ'ಯ ವಿಷಯಗಳನ್ನು ತಿಳಿಸುವ ಮತ್ತು ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆಯ ನೀತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳನ್ನು ತಯಾರಿಸುವ ಜವಾಬ್ದಾರಿಗಳನ್ನು ಆಡಳಿತ ಮಂಡಳಿಯು ಹೊಂದಿರುತ್ತದೆ. ಆಡಳಿತ ಮಂಡಳಿಯು ಕಂಪನಿಯನ್ನು ಮುಚ್ಚಲು ತೀರ್ಮಾನಿಸಿದರೆ ಅಥವಾ ಚಟುವಟಿಕೆಗಳನ್ನು ನಿಲ್ಲಿಸಿದರೆ ಅಥವಾ ಇವೆರಡೂ ಆಯ್ಕೆಗಳಲ್ಲೊಂದು ಕಂಪನಿಗೆ ಅನಿವಾರ್ಯವಾದರೆ ಮಾತ್ರ ಕಂಪನಿಗೆ ಮೇಲ್ಕಾಣಿಸಿದ ಜವಾಬ್ದಾರಿಗಳು ಇರುವುದಿಲ್ಲ. ಲೆಕ್ಕಪತ್ರಗಳ ವರದಿ ಸಲ್ಲಿಸುವ ಪ್ರಕ್ರಿಯೆಯ ಮೇಲ್ವಿಚಾರಣೆಗೂ ನಿರ್ದೇಶಕರ ಮಂಡಳಿ ಹೊಣೆಗಾರರಾಗಿರುತ್ತದೆ.

**ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರ ಜವಾಬ್ದಾರಿಗಳು:**

ನಮ್ಮ ಉದ್ದೇಶಗಳು ಒಟ್ಟಾರೆಯಾಗಿ ಹಣಕಾಸು ಹೇಳಿಕೆಗಳು ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಕುರಿತು ಸಮಂಜಸವಾದ ಭರವಸೆಯನ್ನು ಪಡೆಯುವುದು. ವಂಚನೆ ಅಥವಾ ದೋಷದಿಂದಾಗಿ ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದಾಗಿದೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದೆ, ಆದರೆ SA ಗಳಿಗೆ ಅನುಗುಣವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ಅದು ಅಸ್ತಿತ್ವದಲ್ಲಿದ್ದಾಗ ಯಾವಾಗಲೂ ವಸ್ತುತಪ್ಪು ಹೇಳಿಕೆಯನ್ನು ಪತ್ತೆ ಮಾಡುತ್ತದೆ ಎಂಬುದಕ್ಕೆ ಖಾತರಿಯಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ದೋಷದಿಂದ ಉದ್ಭವಿಸಬಹುದು ಮತ್ತು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ, ಈ ಸ್ವತಂತ್ರ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳನ್ನು ಸಮಂಜಸವಾಗಿ ಪ್ರಭಾವಿಸಬಹುದೆಂದು ನಿರೀಕ್ಷಿಸಬಹುದು.

**SA ಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯ ಭಾಗವಾಗಿ, ನಾವು ವೃತ್ತಿಪರ ತೀರ್ಪನ್ನು ನಿರ್ವಹಿಸುತ್ತೇವೆ ಮತ್ತು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ನಿರ್ವಹಿಸುತ್ತೇವೆ. ನಾವು ಸಹ:**

- ವಂಚನೆ ಅಥವಾ ದೋಷದಿಂದಾಗಿ ಸ್ವತಂತ್ರ ಹಣಕಾಸು ಹೇಳಿಕೆಗಳ ಗಮನಾರ್ಹ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸಿ ನಿರ್ಣಯಿಸಲಾಗುತ್ತದೆ. ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ, ನಿರ್ವಹಿಸಿ ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳಲಾಗುತ್ತದೆ. ವಂಚನೆ, ನಕಲಿ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣದ ಒಳಸಂಚನ್ನು ಒಳಗೊಂಡಿರುವುದರಿಂದ ವಂಚನೆಯಿಂದ ಉಂಟಾಗುವ ತಪ್ಪು ಹೇಳಿಕೆಯನ್ನು ಕಂಡುಹಿಡಿಯದಿರುವ ಅಪಾಯವು ದೋಷದಿಂದ ಉಂಟಾಗುವ ಒಂದಕ್ಕಿಂತ ಹೆಚ್ಚಾಗಿರುತ್ತದೆ.
- ಸಂದರ್ಭಕ್ಕೆ ಸೂಕ್ತವೆನಿಸುವ ಆಡಿಟ್ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಆಡಿಟ್‌ಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 143(3)(i) ಅಡಿಯಲ್ಲಿ, ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಾವು ಜವಾಬ್ದಾರರಾಗಿದ್ದೇವೆ.

- ಬಳಸಿದ ಲೆಕ್ಕಪತ್ರ ನೀತಿಗಳ ಸೂಕ್ತತೆ ಮತ್ತು ಲೆಕ್ಕಪತ್ರ ಅಂದಾಜುಗಳು ಸಮಂಜಸತೆ ಮತ್ತು ನಿರ್ವಹಣೆಯಿಂದ ಮಾಡಿದ ಅಂಶಗಳ ಬಹಿರಂಗಪಡಿಸುವಿಕೆಗಳನ್ನು ಮೌಲ್ಯಮಾಪನ ಮಾಡಿದ್ದೇವೆ.
- ಲೆಕ್ಕಪರಿಶೋಧನೆಯ ಆಧಾರದ ಮೇಲೆ ನಿರ್ವಹಣೆಯ ಬಳಕೆ ಸೂಕ್ತತೆಯ ಬಗ್ಗೆ ಮತ್ತು ಪಡೆದ ಆಡಿಟ್ ಪುರಾವೆಗಳ ಆಧಾರದ ಮೇಲೆ, ಸಂಸ್ಥೆಗಳು ಅಂತಹ ಪರಿಸ್ಥಿತಿಗಳಿಗೆ ಸಂಬಂಧಿಸಿದ ವಸ್ತು ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ, ಇದು ಕಂಪನಿಯು ಮುಂದುವರೆಯುವ ಕಾಳಜಿಯಾಗಿ ಮುಂದುವರೆಯುವ ಸಾಮರ್ಥ್ಯದ ಮೇಲೆ ಗಮನಾರ್ಹವಾದ ಅನುಮಾನವನ್ನು ಉಂಟುಮಾಡುತ್ತದೆ. ವಸ್ತು ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಹಣಕಾಸು ಹೇಳಿಕೆಗಳಲ್ಲಿನ ಸಂಬಂಧಿತ ಬಹಿರಂಗಪಡಿಸುವಿಕೆಗಳಿಗೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ನಾವು ಗಮನ ಸೆಳೆಯುವ ಅಗತ್ಯವಿದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ, ಭವಿಷ್ಯದ ಸಂದರ್ಭಗಳು ಅಥವಾ ಷರತ್ತುಗಳು ಕಂಪನಿಯು ನಡೆಯುತ್ತಿರುವ ಕಾಳಜಿಯಾಗಿ ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.
- ಬಹಿರಂಗಪಡಿಸುವಿಕೆಗಳನ್ನು ಒಳಗೊಂಡಂತೆ, ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಮತ್ತು ಹಣಕಾಸಿನ ಹೇಳಿಕೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆ.

ಇತರ ವಿಷಯಗಳ ಜೊತೆಗೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಗಮನಾರ್ಹ ಲೆಕ್ಕಪರಿಶೋಧನಾ ಸಂಶೋಧನೆಗಳ ಬಗ್ಗೆ, ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನತೆಗಳನ್ನು ಒಳಗೊಂಡಂತೆ, ಆಡಳಿತದ ಹೊಣೆ ಹೊತ್ತಿರುವವರೊಂದಿಗೆ ನಾವು ಸಂವಹನ ನಡೆಸುತ್ತೇವೆ.

ಆಡಳಿತದ ಹೊಣೆ ಹೊತ್ತಿರುವವರಿಗೆ ನಾವು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಸಂಬಂಧಿತ ನೈತಿಕ ಅವಶ್ಯಕತೆಗಳನ್ನು ಪಾಲಿಸಿದ್ದೇವೆ ಎಂಬ ಹೇಳಿಕೆಯನ್ನು ನೀಡುತ್ತೇವೆ ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ ಸಮಂಜಸವಾಗಿ ಪರಿಣಾಮ ಬೀರುವ ಎಲ್ಲಾ ಸಂಬಂಧಗಳು ಮತ್ತು ಇತರ ವಿಷಯಗಳನ್ನು ಮತ್ತು ಅನ್ವಯವಾಗುವಲ್ಲಿ, ಸಂಬಂಧಿತ ಸುರಕ್ಷತಾ ಕ್ರಮಗಳನ್ನು ಅವರಿಗೆ ತಿಳಿಸುತ್ತೇವೆ.

ಆಡಳಿತದ ಹೊಣೆ ಹೊತ್ತಿರುವವರಿಗೆ ತಿಳಿಸಲಾದ ವಿಷಯಗಳಿಂದ, ಪ್ರಸ್ತುತ ಅವಧಿಯ ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಮಹತ್ವದ್ದಾಗಿರುವ ವಿಷಯಗಳನ್ನು ನಾವು ನಿರ್ಧರಿಸುತ್ತೇವೆ ಮತ್ತು ಆದ್ದರಿಂದ ಅವು ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳಾಗಿವೆ. ಕಾನೂನು ಅಥವಾ ನಿಯಂತ್ರಣವು ವಿಷಯದ ಬಗ್ಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ತಡೆಯದ ಹೊರತು ಅಥವಾ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ನಮ್ಮ ವರದಿಯಲ್ಲಿ ಒಂದು ವಿಷಯವನ್ನು ತಿಳಿಸಬಾರದು ಎಂದು ನಾವು ನಿರ್ಧರಿಸಿದರೆ, ಹಾಗೆ ಮಾಡುವುದರಿಂದ ಉಂಟಾಗುವ ಪ್ರತಿಕೂಲ ಪರಿಣಾಮಗಳು ಅಂತಹ ಸಂವಹನದ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರಿಸುತ್ತದೆ ಎಂದು ನಾವು ನಿರ್ಧರಿಸಿದರೆ, ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ವಿವರಿಸುತ್ತೇವೆ.

**ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಕುರಿತು ವರದಿ:**

1. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 143 ರ ಉಪ–ವಿಭಾಗ (11) ರ ಅಡಿಯಲ್ಲಿ ಭಾರತ ಕೇಂದ್ರ ಸರ್ಕಾರ ಹೊರಡಿಸಿದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 ("ಆದೇಶ") ದ ಅಗತ್ಯವಿರುವಂತೆ, ನಾವು ಅನುಬಂಧ "ಎ" ನಲ್ಲಿ, ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಕುರಿತು ಅನ್ವಯವಾಗುವ ಮಟ್ಟಿಗೆ ಹೇಳಿಕೆಯನ್ನು ನೀಡುತ್ತೇವೆ.
2. ನಾವು ಸೂಕ್ತವೆಂದು ಪರಿಗಣಿಸುವ ಕಂಪನಿಯ ಪುಸ್ತಕಗಳು ಮತ್ತು ದಾಖಲೆಗಳ ಪರಿಶೀಲನೆಗಳ ಆಧಾರದ ಮೇಲೆ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲಕರು ಹೊರಡಿಸಿದ ನಿರ್ದೇಶನಗಳು ಮತ್ತು ಉಪ ನಿರ್ದೇಶನಗಳ ಕುರಿತು **'ಅನುಬಂಧ–ಬಿ'** ನಲ್ಲಿ ನಮ್ಮ ವರದಿಯನ್ನು ಲಗತ್ತಿಸುತ್ತಿದ್ದೇವೆ.
3. ಕಾಯಿದೆಯ ಸೆಕ್ಷನ್ 143(3) ರ ಪ್ರಕಾರ, ನಾವು ವರದಿ ಮಾಡುತ್ತೇವೆ:

(ಎ) ನಮ್ಮ ಆಡಿಟ್‌ನ ಉದ್ದೇಶಗಳಿಗಾಗಿ ನಮಗೆ ತಿಳಿದಿರುವ ಮತ್ತು ನಂಬುವ ಮಟ್ಟಿಗೆ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಹುಡುಕಿದ್ದೇವೆ ಮತ್ತು ಪಡೆದುಕೊಂಡಿದ್ದೇವೆ.

(ಬಿ) ನಮ್ಮ ಉದ್ದೇಶಗಳಿಗಾಗಿ ಕಂಪನಿಯ ಪ್ರಕಾರ ಅಗತ್ಯವಿರುವ ಸರಿಯಾದ ಲೆಕ್ಕಪತ್ರ ಪುಸ್ತಕಗಳನ್ನು ಕಂಪನಿಯು ಇಲ್ಲಿಯವರೆಗೆ ಇರಿಸಿಕೊಂಡಿದೆ ಎಂಬುದು ನಮ್ಮ ಪರಿಶೀಲನೆಯಿಂದ ಕಂಡುಬರುತ್ತದೆ.

(ಸಿ) ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಹೇಳಿಕೆ, ನಗದು ಹರಿವಿನ ಹೇಳಿಕೆ ಮತ್ತು ಬದಲಾವಣೆಗಳ ಹೇಳಿಕೆ ಈ ವರದಿಯಲ್ಲಿ ವ್ಯವಹರಿಸಲಾದ ಇಕ್ವಿಟಿ, ಖಾತೆಯ ಪುಸ್ತಕಗಳೊಂದಿಗೆ ಒಪ್ಪಿತವಾಗಿದೆ.

(ಡಿ) ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಲಾದ ಸ್ವತಂತ್ರ ಹಣಕಾಸು ಹೇಳಿಕೆಗಳು ಕಂಪನಿಗಳು (ಲೆಕ್ಕಪತ್ರಗಳು) ನಿಯಮಗಳು, 2014 ರ ನಿಯಮ 7 ರೊಂದಿಗೆ ಓದಲಾದ ಕಾಯಿದೆಯ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿವೆ.

(ಇ) ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಜೂನ್ 15, 2015 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ GSR 463 (ಇ) ಪ್ರಕಾರ ಸರ್ಕಾರಿ ಕಂಪನಿಯಾಗಿದ್ದು, ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 164(2) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

(ಎಫ್) ಕಂಪನಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ, ಈ ವರದಿಯ "ಅನುಬಂಧ 'ಸಿ' ಯಲ್ಲಿ ನಮ್ಮ ಪ್ರತ್ಯೇಕ ವರದಿಯನ್ನು ಪರಿಶೀಲಿಸಬಹುದು.

(ಜಿ) ಕಾಯಿದೆಯ ಸೆಕ್ಷನ್ 197(16) ಅಡಿಯಲ್ಲಿ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ:

ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು 15ನೇ ಜೂನ್ 2015 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ GSR 463 (E) ಪ್ರಕಾರ ಸರ್ಕಾರಿ ಕಂಪನಿಯಾಗಿರುವುದರಿಂದ, ಕಂಪನಿಗಳು ಕಾಯಿದೆ, 2013 ರ ಸೆಕ್ಷನ್ 197(16) ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

(ಹೆಚ್) ನಮ್ಮ ಅಭಿಪ್ರಾಯದಲ್ಲಿ ತಿದ್ದುಪಡಿ ಮಾಡಲಾದ ಕಂಪನಿಗಳು (ಆಡಿಟ್ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 ರ ನಿಯಮ 11 ರ ಪ್ರಕಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ನಮ್ಮ ಅತ್ಯುತ್ತಮ ಮಾಹಿತಿಯ ಪ್ರಕಾರ ಮತ್ತು ನನಗೆ/ನಮಗೆ ನೀಡಲಾದ ವಿವರಣೆಗಳ ಪ್ರಕಾರ:

i. ಕಂಪನಿಯ ತನ್ನ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಬಾಕಿ ವ್ಯಾಜ್ಯಗಳನ್ನು ಹೊಂದಿಲ್ಲ.

ii. ಕಂಪನಿಯು ಉತ್ಪನ್ನ ಒಪ್ಪಂದಗಳನ್ನು ಒಳಗೊಂಡಂತೆ ಯಾವುದೇ ದೀರ್ಘಾವಧಿಯ ಗುತ್ತಿಗೆಗಳನ್ನು ಹೊಂದಿಲ್ಲ, ಇದರಿಂದ ಕಂಪನಿಗೆ ಗಣನೀಯ ನಿರೀಕ್ಷಿತ ನಷ್ಟಗಳು ಸಂಭವಿಸಿಲ್ಲ.

iii. ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತಗಳಿರುವುದಿಲ್ಲ.

iv ಎ) ಆಡಳಿತ ಮಂಡಳಿಯು ತನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಯಾವುದೇ ಹಣವನ್ನು ಮುಂಗಡಗೊಳಿಸಲಾಗಿಲ್ಲ, ಇಲ್ಲವೇ ಸಾಲ ಅಥವಾ ಹೂಡಿಕೆ (ಎರವಲು ಪಡೆದ ನಿಧಿಗಳು, ಷೇರು ಪ್ರೀಮಿಯಂ ಅಥವಾ ಯಾವುದೇ ಇತರ ಮೂಲಗಳು ಅಥವಾ ರೀತಿಯ ನಿಧಿಗಳಿಂದ) ಎಂದು ಪ್ರತಿನಿಧಿಸುತ್ತದೆ. ಕಂಪನಿಯಿಂದ ಅಥವಾ ವಿದೇಶಿ ಘಟಕಗಳು ("ಮಧ್ಯವರ್ತಿಗಳು") ಸೇರಿದಂತೆ ಯಾವುದೇ ಇತರ ವ್ಯಕ್ತಿ(ಗಳು) ಅಥವಾ ಘಟಕ(ಗಳು) ತಿಳುವಳಿಕೆಯೊಂದಿಗೆ, ಲಿಖಿತವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ದಾಖಲಿಸಲಾಗಿದೆ. ಮಧ್ಯವರ್ತಿ ನೇರವಾಗಿ ಅಥವಾ ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಘಟಕಗಳಿಗೆ ಪರೋಕ್ಷವಾಗಿ ಸಾಲ ನೀಡಿ ಅಥವಾ ಹೂಡಿಕೆ ಮಾಡಿ ಅಥವಾ ಪರವಾಗಿ ಕಂಪನಿಯ (ಅಂತಿಮ ಫಲಾನುಭವಿಗಳು) ಅಥವಾ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಹಾಗೆ ಒದಗಿಸಿ ಅಂತಿಮ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ.

ಬಿ) ಕಂಪನಿಯು ತನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಿಗೆ, ವಿದೇಶಿ ಸಂಸ್ಥೆಗಳು ("ನಿಧಿ ಪಕ್ಷಗಳು") ಸೇರಿದಂತೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ ಯಾವುದೇ ಹಣವನ್ನು ಪಡೆದಿಲ್ಲ ಎಂದು ಆಡಳಿತ ಮಂಡಳಿಯು ಪ್ರತಿನಿಧಿಸಿದೆ. ಲಿಖಿತವಾಗಿ ಅಥವಾ ಬೇರೆ ರೀತಿಯಲ್ಲಿ ದಾಖಲಿಸಲ್ಪಟ್ಟಿದ್ದರೂ ಸಹ, ಕಂಪನಿಯು ನೇರವಾಗಿ ಅಥವಾ ಪರೋಕ್ಷವಾಗಿ, ನಿಧಿಸಂಗ್ರಹ ಪಕ್ಷದ ("ಅಂತಿಮ ಫಲಾನುಭವಿಗಳು") ಅಥವಾ ಪರವಾಗಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಸಾಲ ನೀಡಬಹುದು ಅಥವಾ ಹೂಡಿಕೆ ಮಾಡಬಹುದು ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹುದೇ ರೀತಿಯದ್ದನ್ನು ಒದಗಿಸಬಹುದು ಎಂಬ ತಿಳುವಳಿಕೆಯೊಂದಿಗೆ;

ಸಿ) ಸಂದರ್ಭಗಳಲ್ಲಿ ಸಮಂಜಸ ಮತ್ತು ಸೂಕ್ತವೆಂದು ಪರಿಗಣಿಸಲಾದ ಅಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಆಧಾರದ ಮೇಲೆ, ಉಪಬಂಧ (ಎ) ಮತ್ತು (ಬಿ) ಅಡಿಯಲ್ಲಿನ ಪ್ರಾತಿನಿಧ್ಯಗಳು ಯಾವುದೇ ಮಹತ್ವದ ತಪ್ಪು ಹೇಳಿಕೆಯನ್ನು ಹೊಂದಿವೆ ಎಂದು ನಮಗೆ ನಂಬಲು ಕಾರಣವಾದ ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

v. ಕಂಪನಿಯು ವರ್ಷದಲ್ಲಿ ಯಾವುದೇ ಲಾಭಾಂಶವನ್ನು ಘೋಷಿಸಿಲ್ಲ ಅಥವಾ ಪಾವತಿಸಿಲ್ಲ.

vi. ಕಂಪನಿಯು ತನ್ನ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಲು ಲೆಕ್ಕಪತ್ರ ತಂತ್ರಾಂಶವನ್ನು ಬಳಸಿದೆ, ಅದು ಆಡಿಟ್ ಟ್ರಯಲ್ (ಸಂಪಾದನೆ ಲಾಗ್) ಸೌಲಭ್ಯವನ್ನು ದಾಖಲಿಸುವ ವೈಶಿಷ್ಟವನ್ನು ಹೊಂದಿದೆ ಮತ್ತು ತಂತ್ರಾಂಶದಲ್ಲಿ ದಾಖಲಿಸಲಾದ ಎಲ್ಲಾ ನಿರ್ವಹಣೆಗಳಿಗೆ ವರ್ಷವಿಡೀ ಕಾರ್ಯನಿರ್ವಹಿಸುತ್ತಿವೆ ಮತ್ತು ದಾಖಲೆ ಧಾರಣಕ್ಕಾಗಿ ಕಂಪನಿಯು ಶಾಸನಬದ್ಧ ಅವಶ್ಯಕತೆಗಳ ಪ್ರಕಾರ ಆಡಿಟ್ ಟ್ರಯಲ್ ಅನ್ನು ಸಂರಕ್ಷಿಸಿದೆ.

**ಮೆಸ್ಸರ್ಸ್ ಬಿ. ಎನ್. ಪಿಎಐ & ಕೋ., ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ: 008851S

**ಸಹಿ/–**
(ಸಿಎ ಬಿ. ನಾಗೇಶ್ ಪಿಎಐ/ಎಂಜಿ)
ಪಾಲುದಾರ
ಸಿಎ. ಸದಸ್ಯತ್ವ ಸಂಖ್ಯೆ: 204014

ಸ್ಥಳ: ಬೆಂಗಳೂರು
ದಿನಾಂಕ: 1ನೇ ಡಿಸೆಂಬರ್ 2025
ಯುಡಿಐಎನ್ : 25204014MHWGE5918

# ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ 'ಅನುಬಂಧ – ಎ'

**(ನಮ್ಮ ಸಮ ದಿನಾಂಕ ವರದಿಯ ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ವರದಿ ವಿಭಾಗದ ಅಡಿಯಲ್ಲಿ ಕಂಡಿಕೆ 1 ರಲ್ಲಿ ಉಲ್ಲೇಖಿಸಲಾಗಿದೆ)**

**ಉಲ್ಲೇಖ:** ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ ("ಕಂಪನಿ") ದ ನಾವು ಕೋರಿದ ಮತ್ತು ಕಂಪನಿಯು ನೀಡಿದ ಮಾಹಿತಿ ಮತ್ತು ವಿವರಣೆಗಳು ಮತ್ತು ಸಾಮಾನ್ಯ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಪರಿಶೀಲಿಸಿದ ಲೆಕ್ಕಪತ್ರ ಪುಸ್ತಕಗಳು ಮತ್ತು ದಾಖಲೆಗಳ ಪ್ರಕಾರ ಮತ್ತು ನಮ್ಮ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ, ನಮ್ಮ ಹೇಳಿಕೆ ಈ ಕೆಳಕಂಡಂತಿದೆ:

(i) ಎ. (ಎ) ಯಾವುದೇ ಆಸ್ತಿ, ಸ್ಥಾವರ ಮತ್ತು ಸಲಕರಣೆಗಳು ಇಲ್ಲದಿರುವುದರಿಂದ, ಆದೇಶದ ಷರತ್ತು 3(i)(ಎ)(ಬಿ) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ.

(ಬಿ) ಕಂಪನಿಯು ಯಾವುದೇ ಅಮೂರ್ತ ಸ್ವತ್ತುಗಳನ್ನು ಹೊಂದಿಲ್ಲದ ಕಾರಣ, ಆದೇಶದ ಷರತ್ತು 3(i)(ಎ)(ಬಿ) ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

ಬಿ. ಕಂಪನಿಯು ಯಾವುದೇ ಆಸ್ತಿ, ಸ್ಥಾವರ ಮತ್ತು ಸಲಕರಣೆಗಳನ್ನು ಹೊಂದಿರದ ಕಾರಣ, ಆದೇಶದ ಷರತ್ತು 3(i)(ಬಿ) ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

ಸಿ. ಕಂಪನಿಯು ಯಾವುದೇ ಸ್ಥಿರ ಆಸ್ತಿಗಳನ್ನು ಹೊಂದಿಲ್ಲದ ಕಾರಣ, ಆದೇಶದ ಷರತ್ತು 3(i)(ಸಿ) ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

ಡಿ. ಕಂಪನಿಯು ಯಾವುದೇ ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಅಥವಾ ಅಮೂರ್ತ ಸ್ವತ್ತುಗಳನ್ನು ಹೊಂದಿಲ್ಲದ ಕಾರಣ, ಆದೇಶದ ಷರತ್ತು 3(i)(ಡಿ) ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

ಇ. ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಯ ಆಧಾರದ ಮೇಲೆ, ಕಂಪನಿಯ ಮೇಲೆ ಯಾವುದೇ ಕ್ರಮಗಳನ್ನು ಪ್ರಾರಂಭಿಸಲಾಗಿಲ್ಲ. ಬೇನಾಮಿ ಆಸ್ತಿ ವಹಿವಾಟು ನಿಷೇಧ ಕಾಯ್ದೆ, 1988 (2016 ರಲ್ಲಿ ತಿದ್ದುಪಡಿ ಮಾಡಿದಂತೆ) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ.

(ii) (ಎ) ವರ್ಷದಲ್ಲಿ ಯಾವುದೇ ಸಮಯದಲ್ಲಿ ಕಂಪನಿಯು ಯಾವುದೇ ದಾಸ್ತಾನು ಹೊಂದಿರದ ಕಾರಣ, ಆದೇಶದ ಷರತ್ತು 3(ii)(ಎ) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ.

(ಬಿ) ವರ್ಷದಲ್ಲಿ, ಕಂಪನಿಯು ವರ್ಷದ ಯಾವುದೇ ಸಮಯದಲ್ಲಿ, ಪ್ರಸ್ತುತ ಆಸ್ತಿಗಳ ಭದ್ರತೆಯ ಆಧಾರದ ಮೇಲೆ ಬ್ಯಾಂಕುಗಳಿಂದ ಒಟ್ಟಾರೆಯಾಗಿ ರೂ. 5 ಕೋಟಿಗಿಂತ ಹೆಚ್ಚಿನ ಕಾರ್ಯನಿರತ ಬಂಡವಾಳ ಮಿತಿಗಳನ್ನು ಮಂಜೂರು ಮಾಡಿಲ್ಲ. ಆದ್ದರಿಂದ ಆದೇಶದ ಷರತ್ತು 3(ii)(ಬಿ) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ.

(iii) ವರ್ಷದಲ್ಲಿ ಕಂಪನಿಯು ಹೂಡಿಕೆ ಮಾಡಿಲ್ಲ, ಸಾಲಗಳನ್ನು ಒದಗಿಸಿಲ್ಲ, ಸಾಲಗಳ ಸ್ವರೂಪದಲ್ಲಿ ಮುಂಗಡಗಳನ್ನು ನೀಡಿಲ್ಲ, ಸ್ಥಾಪಿತ ಖಾತರಿ ಅಥವಾ ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಯಾವುದೇ ಇತರ ಪಕ್ಷಗಳಿಗೆ ಭದ್ರತೆಯನ್ನು ಒದಗಿಸಿಲ್ಲ. ಆದ್ದರಿಂದ, ಆದೇಶದ ಷರತ್ತು 3(iii) ಅಡಿಯಲ್ಲಿ ವರದಿ ಮಾಡುವ ಅವಶ್ಯಕತೆ ಕಂಪನಿಗೆ ಅನ್ವಯಿಸುವುದಿಲ್ಲ.

(iv) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಕಂಪನಿ ಕಾಯ್ದೆ, 2013 ರ ಸೆಕ್ಷನ್ 185 ಮತ್ತು 186 ರ ನಿಬಂಧನೆಯು ಆಕರ್ಷಿಸುವ ಯಾವುದೇ ಸಾಲಗಳನ್ನು ನೀಡಿಲ್ಲ ಅಥವಾ ಯಾವುದೇ ಗ್ಯಾರಂಟಿಗಳನ್ನು ನೀಡಿಲ್ಲ ಅಥವಾ ಯಾವುದೇ ಭದ್ರತೆಯನ್ನು ನೀಡಿಲ್ಲ ಅಥವಾ ಯಾವುದೇ ಹೂಡಿಕೆಗಳನ್ನು ಮಾಡಿಲ್ಲ. ಆದ್ದರಿಂದ, ಆದೇಶದ ಷರತ್ತು 3(iv) ಅನ್ವಯಿಸುವುದಿಲ್ಲ.

(v) ಕಂಪನಿಯು ಕಾಯ್ದೆಯ ಸೆಕ್ಷನ್ 73 ರಿಂದ 76 ರ ಅರ್ಥದಲ್ಲಿ ಮತ್ತು ಕಂಪನಿಗಳು (ಠೇವಣಿಗಳ ಸ್ವೀಕಾರ) ನಿಯಮಗಳು, 2014 (ತಿದ್ದುಪಡಿ ಮಾಡಿದಂತೆ) ಯಾವುದೇ ಠೇವಣಿಯನ್ನು ಸ್ವೀಕರಿಸಿಲ್ಲ, ಆದ್ದರಿಂದ ಆದೇಶದ ಷರತ್ತು 3(v) ರ ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

(vi) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಗಳು (ವೆಚ್ಚ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, 2014 ರ ಪ್ರಕಾರ ವೆಚ್ಚ ದಾಖಲೆಗಳ ನಿರ್ವಹಣೆಯನ್ನು ಕೇಂದ್ರ ಸರ್ಕಾರವು ಕಂಪನಿ ಕಾಯ್ದೆ, 2013 ರ ಸೆಕ್ಷನ್ 148(1) ರ ಅಡಿಯಲ್ಲಿ ಕಂಪನಿಯು ನಡೆಸುವ ವ್ಯವಹಾರ ಚಟುವಟಿಕೆಗಳಿಗೆ ನಿರ್ದಿಷ್ಟಪಡಿಸಿಲ್ಲ. ಆದ್ದರಿಂದ, ಆದೇಶದ ಷರತ್ತು 3(vi) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ.

ಬ್ಯಾಲೆನ್ಸ್ ಶೀಟ್‌ನಲ್ಲಿರುವ ನಗದು ಮತ್ತು ಅಲ್ಪಾವಧಿಯ ಠೇವಣಿಗಳು ಬ್ಯಾಂಕುಗಳಲ್ಲಿ ಮತ್ತು ಕೈಯಲ್ಲಿರುವಂತಹ ನಗದು ಮತ್ತು ಮೂರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಅವಧಿಯ ಅಲ್ಪಾವಧಿಯ ಠೇವಣಿಗಳನ್ನು ಒಳಗೊಂಡಿರುತ್ತವೆ, ಇವು ಮೌಲ್ಯದಲ್ಲಿನ ಬದಲಾವಣೆಗಳ ಅತ್ಯಲ್ಪ ಅಪಾಯಕ್ಕೆ ಒಳಪಟ್ಟಿರುತ್ತವೆ.

ನಗದು ಹರಿವಿನ ಹೇಳಿಕೆಯ ಉದ್ದೇಶಗಳಿಗಾಗಿ, ನಗದು ಮತ್ತು ನಗದು ಸಮಾನಾರ್ಥಕಗಳು ಕೈಯಲ್ಲಿರುವಂತಹ ನಗದು, ಬ್ಯಾಂಕುಗಳಲ್ಲಿ ಮತ್ತು ಬೇಡಿಕೆ ಠೇವಣಿಗಳನ್ನು ಒಳಗೊಂಡಿರುತ್ತವೆ.

**(ಒ) ನಗದು ಹರಿವಿನ ಹೇಳಿಕೆ:**

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಬಳಸಿಕೊಂಡು ವರದಿ ಮಾಡಲಾಗುತ್ತದೆ, ಅಲ್ಲಿ ಅಸಾಧಾರಣ ವಸ್ತುಗಳು ಮತ್ತು ತೆರಿಗೆಗೆ ಮುಂಚಿನ ಲಾಭ / (ನಷ್ಟ) ನಗದುರಹಿತ ಸ್ವಭಾವದ ವಹಿವಾಟುಗಳ ಪರಿಣಾಮಗಳಿಗೆ ಮತ್ತು ಹಿಂದಿನ ಅಥವಾ ಭವಿಷ್ಯದ ನಗದು ರಶೀದಿಗಳು ಅಥವಾ ಪಾವತಿಗಳ ಯಾವುದೇ ಮುಂದೂಡುವಿಕೆಗಳು ಅಥವಾ ಸಂಚಯಗಳಿಗೆ ಸರಿಹೊಂದಿಸಲಾಗುತ್ತದೆ. ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ಚಟುವಟಿಕೆಗಳಿಂದ ಬರುವ ನಗದು ಹರಿವುಗಳನ್ನು ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಬೇರ್ಪಡಿಸಲಾಗುತ್ತದೆ.

**(ಪಿ) ಪ್ರತಿ ಷೇರಿಗೆ ಗಳಿಕೆ**

ಪ್ರತಿ ಷೇರಿಗೆ ಮೂಲ ಮತ್ತು ದುರ್ಬಲಗೊಳಿಸಿದ ಗಳಿಕೆಗಳನ್ನು ಈ ಅವಧಿಯಲ್ಲಿ ಬಾಕಿ ಇರುವ ಈಕ್ವಿಟಿ ಷೇರುಗಳ ತೂಕದ ಸರಾಸರಿ ಸಂಖ್ಯೆಯಿಂದ ಈಕ್ವಿಟಿ ಷೇರುದಾರರಿಗೆ ಕಾರಣವಾದ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು ಭಾಗಿಸುವ ಮೂಲಕ ಲೆಕ್ಕಹಾಕಲಾಗುತ್ತದೆ. ಈ ಅವಧಿಯಲ್ಲಿ ಕಂಪನಿಯು ಸಂಭಾವ್ಯವಾಗಿ ದುರ್ಬಲಗೊಳಿಸುವ ಇಕ್ವಿಟಿ ಷೇರುಗಳನ್ನು ಹೊಂದಿಲ್ಲ.

**(ಕ್ಯೂ) ನಿಬಂಧನೆಗಳು ಮತ್ತು ಆಕಸ್ಮಿಕಗಳು**

ಹಿಂದಿನ ಘಟನೆಯ ಪರಿಣಾಮವಾಗಿ ಕಂಪನಿಯು ಪ್ರಸ್ತುತ ಬಾಧ್ಯತೆಯನ್ನು ಹೊಂದಿರುವಾಗ ಒಂದು ನಿಬಂಧನೆಯನ್ನು ಗುರುತಿಸಲಾಗುತ್ತದೆ, ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಆರ್ಥಿಕ ಪ್ರಯೋಜನಗಳನ್ನು ಒಳಗೊಂಡಿರುವ ಸಂಪನ್ಮೂಲಗಳ ಹೊರಹರಿವು ಅಗತ್ಯವಿರುವ ಸಾಧ್ಯತೆಯಿದೆ ಮತ್ತು ಬಾಧ್ಯತೆಯ ಮೊತ್ತದ ವಿಶ್ವಾಸಾರ್ಹ ಅಂದಾಜನ್ನು ಮಾಡಬಹುದು. ನಿಬಂಧನೆಗಳನ್ನು ಅವುಗಳ ಪ್ರಸ್ತುತ ಮೌಲ್ಯಕ್ಕೆ ರಿಯಾಯಿತಿ ಮಾಡಲಾಗುವುದಿಲ್ಲ ಮತ್ತು ವರದಿ ಮಾಡುವ ದಿನಾಂಕದಂದು ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಅಗತ್ಯವಿರುವ ಅತ್ಯುತ್ತಮ ಅಂದಾಜಿನ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಈ ಅಂದಾಜುಗಳನ್ನು ಪ್ರತಿ ವರದಿ ಮಾಡುವ ದಿನಾಂಕದಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಪ್ರಸ್ತುತ ಅತ್ಯುತ್ತಮ ಅಂದಾಜುಗಳನ್ನು ಪ್ರತಿಬಿಂಬಿಸಲು ಸರಿಹೊಂದಿಸಲಾಗುತ್ತದೆ.

ಅನಿಶ್ಚಿತ ಹೊಣೆಗಾರಿಕೆಯು ಹಿಂದಿನ ಘಟನೆಗಳಿಂದ ಉದ್ಭವಿಸುವ ಸಂಭಾವ್ಯ ಬಾಧ್ಯತೆಯಾಗಿದ್ದು, ಅದರ ಅಸ್ತಿತ್ವವು ಕಂಪನಿಯ ನಿಯಂತ್ರಣಕ್ಕೆ ಮೀರಿದ ಒಂದು ಅಥವಾ ಹೆಚ್ಚಿನ ಅನಿಶ್ಚಿತ ಭವಿಷ್ಯದ ಘಟನೆಗಳ ಸಂಭವ ಅಥವಾ ಸಂಭವಿಸದಿರುವಿಕೆಯಿಂದ ದೃಢೀಕರಿಸಲ್ಪಡುತ್ತದೆ ಅಥವಾ ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಸಂಪನ್ಮೂಲಗಳ ಹೊರಹರಿವು ಅಗತ್ಯವಿರುವ ಸಾಧ್ಯತೆಯಿಲ್ಲದ ಕಾರಣ ಗುರುತಿಸಲ್ಪಡದ ಪ್ರಸ್ತುತ ಬಾಧ್ಯತೆಯಾಗಿದೆ. ವಿಶ್ವಾಸಾರ್ಹವಾಗಿ ಅಳೆಯಲಾಗದ ಕಾರಣ ಗುರುತಿಸಲಾಗದ ಹೊಣೆಗಾರಿಕೆ ಇರುವ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ಅನಿಶ್ಚಿತ ಹೊಣೆಗಾರಿಕೆಯೂ ಉದ್ಭವಿಸುತ್ತದೆ. ಕಂಪನಿಯು ಅನಿಶ್ಚಿತ ಹೊಣೆಗಾರಿಕೆಯನ್ನು ಗುರುತಿಸುವುದಿಲ್ಲ ಆದರೆ ಹಣಕಾಸು ಹೇಳಿಕೆಗಳಲ್ಲಿ ಅದರ ಅಸ್ತಿತ್ವವನ್ನು ಬಹಿರಂಗಪಡಿಸುತ್ತದೆ.

ಅನಿಶ್ಚಿತ ಸ್ವತ್ತುಗಳನ್ನು ಹಣಕಾಸು ಹೇಳಿಕೆಗಳಲ್ಲಿ ಗುರುತಿಸಲಾಗುವುದಿಲ್ಲ ಅಥವಾ ಬಹಿರಂಗಪಡಿಸಲಾಗುವುದಿಲ್ಲ.

**(ಆರ್) ಮಹತ್ವದ ಲೆಕ್ಕಪತ್ರ ತೀರ್ಪುಗಳು, ಅಂದಾಜುಗಳು ಮತ್ತು ಊಹೆಗಳು**

Ind AS ಗೆ ಅನುಗುಣವಾಗಿ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ನಿರ್ವಹಣೆಯು ಲೆಕ್ಕಪತ್ರ ನೀತಿಗಳ ಅನ್ವಯ ಮತ್ತು ವರದಿ ಮಾಡಲಾದ ಸ್ವತ್ತುಗಳು, ಹೊಣೆಗಾರಿಕೆಗಳು, ಆದಾಯ ಮತ್ತು ವೆಚ್ಚಗಳ ಮೊತ್ತದ ಮೇಲೆ ಪರಿಣಾಮ ಬೀರುವ ತೀರ್ಪುಗಳು, ಅಂದಾಜುಗಳು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆಯು ಭವಿಷ್ಯದ ಅವಧಿಗಳಲ್ಲಿ ಪರಿಣಾಮ ಬೀರುವ ಸ್ವತ್ತುಗಳು ಅಥವಾ ಹೊಣೆಗಾರಿಕೆಗಳ ಸಾಗಿಸುವ ಮೊತ್ತಕ್ಕೆ ಗಮನಾರ್ಹ ಹೊಂದಾಣಿಕೆಯ ಅಗತ್ಯವಿರುವ ಫಲಿತಾಂಶಗಳಿಗೆ ಕಾರಣವಾಗಬಹುದು.

ಅಂದಾಜುಗಳು ಮತ್ತು ಆಧಾರವಾಗಿರುವ ಊಹೆಗಳನ್ನು ಆವರ್ತಕ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ. ಲೆಕ್ಕಪತ್ರ ಅಂದಾಜುಗಳಿಗೆ ಪರಿಷ್ಕರಣೆಗಳನ್ನು ಅಂದಾಜುಗಳನ್ನು ಪರಿಷ್ಕರಿಸಿದ ಅವಧಿಯಲ್ಲಿ ಮತ್ತು ಪರಿಣಾಮ ಬೀರುವ ಯಾವುದೇ ಭವಿಷ್ಯದ ಅವಧಿಗಳಲ್ಲಿ ಗುರುತಿಸಲಾಗುತ್ತದೆ.

ಮುಂದಿನ ಹಣಕಾಸು ವರ್ಷದೊಳಗೆ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಸಾಗಿಸುವ ಮೊತ್ತಕ್ಕೆ ಗಮನಾರ್ಹ ಹೊಂದಾಣಿಕೆಯನ್ನು ಉಂಟುಮಾಡುವ ಗಮನಾರ್ಹ ಅಪಾಯವನ್ನು ಹೊಂದಿರುವ ವರದಿ ಮಾಡುವ ದಿನಾಂಕದಲ್ಲಿ ಭವಿಷ್ಯ ಮತ್ತು ಅಂದಾಜು ಅನಿಶ್ಚಿತತೆಯ ಇತರ ಪ್ರಮುಖ ಮೂಲಗಳಿಗೆ ಸಂಬಂಧಿಸಿದ ಪ್ರಮುಖ ಊಹೆಗಳನ್ನು ಕೆಳಗೆ ವಿವರಿಸಲಾಗಿದೆ. ಕಂಪನಿಯು ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಿದಾಗ ಲಭ್ಯವಿರುವ ನಿಯತಾಂಕಗಳ ಮೇಲೆ ತನ್ನ ಊಹೆಗಳು ಮತ್ತು ಅಂದಾಜುಗಳನ್ನು ಆಧರಿಸಿದೆ. ಆದಾಗ್ಯೂ, ಭವಿಷ್ಯದ ಬೆಳವಣಿಗೆಗಳ ಬಗ್ಗೆ ಅಸ್ತಿತ್ವದಲ್ಲಿರುವ ಸಂದರ್ಭಗಳು ಮತ್ತು ಊಹೆಗಳು, ಮಾರುಕಟ್ಟೆ ಬದಲಾವಣೆಗಳು ಅಥವಾ ಕಂಪನಿಯ ನಿಯಂತ್ರಣಕ್ಕೆ ಮೀರಿದ ಸಂದರ್ಭಗಳಿಂದಾಗಿ ಬದಲಾಗಬಹುದು. ಅಂತಹ ಬದಲಾವಣೆಗಳು ಸಂಭವಿಸಿದಾಗ ಊಹೆಗಳಲ್ಲಿ ಪ್ರತಿಫಲಿಸುತ್ತದೆ.

ಇತರ ಅಂದಾಜುಗಳು: ಹಣಕಾಸು ಹೇಳಿಕೆಗಳ ತಯಾರಿಕೆಯು ವರದಿಯಾದ ಸ್ವತ್ತುಗಳು, ಹೊಣೆಗಾರಿಕೆಗಳು, ಹಣಕಾಸು ಹೇಳಿಕೆಗಳ ದಿನಾಂಕದಂದು ಅನಿಶ್ಚಿತ ಹೊಣೆಗಾರಿಕೆಗಳ ಬಹಿರಂಗಪಡಿಸುವಿಕೆ ಮತ್ತು ವರದಿ ಮಾಡುವ ಅವಧಿಗೆ ವರದಿಯಾದ ಆದಾಯ ಮತ್ತು ವೆಚ್ಚಗಳ ಮೊತ್ತದ ಮೇಲೆ ಪರಿಣಾಮ ಬೀರುವ ಅಂದಾಜುಗಳು ಮತ್ತು ಊಹೆಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಕಂಪನಿಯು ಐತಿಹಾಸಿಕ ಪಾವತಿ ಮಾದರಿಗಳು, ಗ್ರಾಹಕರ ಸಾಂದ್ರತೆಗಳು, ಗ್ರಾಹಕರ ಕ್ರೆಡಿಟ್–ಯೋಗ್ಯತೆ ಮತ್ತು ಪ್ರಸ್ತುತ ಆರ್ಥಿಕ ಪ್ರವೃತ್ತಿಗಳನ್ನು ವಿಶ್ಲೇಷಿಸುವ ಮೂಲಕ ಸ್ವೀಕರಿಸಬಹುದಾದ ಲೆಕ್ಕಪತ್ರಗಳ ಸಂಗ್ರಹದ ಸಂಭವನೀಯತೆಯನ್ನು ಅಂದಾಜು ಮಾಡುತ್ತದೆ. ಗ್ರಾಹಕರ ಆರ್ಥಿಕ ಸ್ಥಿತಿ ಹದಗೆಟ್ಟರೆ, ಹೆಚ್ಚುವರಿ ಭತ್ಯೆಗಳು ಬೇಕಾಗಬಹುದು.

1. **ಪ್ರಸ್ತುತ ಅನುಪಾತ**

ಪ್ರಸ್ತುತ ಅನುಪಾತವು ಕಂಪನಿಯ ಒಟ್ಟಾರೆ ದ್ರವ್ಯತೆ ಸ್ಥಿತಿಯನ್ನು ಸೂಚಿಸುತ್ತದೆ. ಇದನ್ನು ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಕಾರ್ಯನಿರತ ಬಂಡವಾಳ ಸಾಲವನ್ನು ನೀಡುವ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ವ್ಯಾಪಕವಾಗಿ ಬಳಸುತ್ತಾರೆ.

2. **ಸಾಲ – ಇಕ್ವಿಟಿ ಅನುಪಾತ**

ಸಾಲ–ಇಕ್ವಿಟಿ ಅನುಪಾತವು ಕಂಪನಿಯ ಒಟ್ಟು ಸಾಲವನ್ನು ಷೇರುದಾರರ ಇಕ್ವಿಟಿಗೆ ಹೋಲಿಸುತ್ತದೆ.

3. **ಸಾಲ ಸೇವಾ ಅನುಪಾತ**

ಸಾಲ ಸೇವಾ ಅನುಪಾತವನ್ನು ಪ್ರಸ್ತುತ ಬಡ್ಡಿ ಮತ್ತು ಕಂತುಗಳನ್ನು ಪಾವತಿಸುವ ಸಂಸ್ಥೆಯ ಸಾಮರ್ಥ್ಯವನ್ನು ವಿಶ್ಲೇಷಿಸಲು ಬಳಸಲಾಗುತ್ತದೆ.

4. **ಈಕ್ವಿಟಿ ಮೇಲಿನ ಆದಾಯ** (ROE):

ಇದು ಕಂಪನಿಯಲ್ಲಿ ಹೂಡಿಕೆ ಮಾಡಿದ ಇಕ್ವಿಟಿ ನಿಧಿಗಳ ಲಾಭದಾಯಕತೆಯನ್ನು ಅಳೆಯುತ್ತದೆ. ಈ ಅನುಪಾತವು ಕಂಪನಿಯು ಈಕ್ವಿಟಿ–ಹೊಂದಿರುವವರ ನಿಧಿಗಳ ಲಾಭದಾಯಕತೆಯನ್ನು ಹೇಗೆ ಬಳಸಿಕೊಂಡಿದೆ ಎಂಬುದನ್ನು ಬಹಿರಂಗಪಡಿಸುತ್ತದೆ. ಇದು ಈಕ್ವಿಟಿ–ಹೊಂದಿರುವವರಿಗೆ ಉತ್ಪತ್ತಿಯಾಗುವ ಶೇಕಡಾವಾರು ಆದಾಯವನ್ನು ಸಹ ಅಳೆಯುತ್ತದೆ.

5. **ದಾಸ್ತಾನು ವಹಿವಾಟು ಅನುಪಾತ:**

ಈ ಅನುಪಾತವನ್ನು ಸ್ಟಾಕ್ ವಹಿವಾಟು ಅನುಪಾತ ಎಂದೂ ಕರೆಯಲಾಗುತ್ತದೆ ಮತ್ತು ಇದು ಅವಧಿಯಲ್ಲಿ ಮಾರಾಟವಾದ ಸರಕುಗಳ ಬೆಲೆ ಅಥವಾ ಅವಧಿಯಲ್ಲಿ ಮಾರಾಟ ಮತ್ತು ಅವಧಿಯಲ್ಲಿ ನಡೆದ ಸರಾಸರಿ ದಾಸ್ತಾನು ನಡುವಿನ ಸಂಬಂಧವನ್ನು ಸ್ಥಾಪಿಸುತ್ತದೆ.

**6. ವಹಿವಾಟು ಸ್ವೀಕೃತಿಗಳ ವಹಿವಾಟು ಅನುಪಾತ**

ಇದು ಸಂಸ್ಥೆಯು ಸ್ವೀಕೃತಿಗಳನ್ನು ನಿರ್ವಹಿಸುವ ದಕ್ಷತೆಯನ್ನು ಅಳೆಯುತ್ತದೆ. ನಿವ್ವಳ ಕ್ರೆಡಿಟ್ ಮಾರಾಟವು ಒಟ್ಟು ಕ್ರೆಡಿಟ್ ಮಾರಾಟವನ್ನು ಕಳೆದು ಮಾರಾಟದ ಆದಾಯವನ್ನು ಒಳಗೊಂಡಿರುತ್ತದೆ. ವಹಿವಾಟು ಸ್ವೀಕೃತಿಗಳು ವಿವಿಧ ಸಾಲಗಾರರು ಮತ್ತು ಬಿಲ್‌ಗಳ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ.

**7. ವಹಿವಾಟು ಪಾವತಿಗಳ ವಹಿವಾಟು:**

ಇದು ಒಂದು ಅವಧಿಯಲ್ಲಿ ವಿವಿಧ ಸಾಲಗಾರರಿಗೆ ಎಷ್ಟು ಬಾರಿ ಪಾವತಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ವಿವಿಧ ಸಾಲಗಾರರಿಗೆ ಪಾವತಿಸಲು ನಗದು ಅವಶ್ಯಕತೆಗಳನ್ನು ನಿರ್ಣಯಿಸಲು ಇದನ್ನು ಲೆಕ್ಕಹಾಕಲಾಗುತ್ತದೆ.

**8. ನಿವ್ವಳ ಬಂಡವಾಳ ವಹಿವಾಟು ಅನುಪಾತ**

ಇದು ಕಂಪನಿಯು ತನ್ನ ಕಾರ್ಯನಿರತ ಬಂಡವಾಳವನ್ನು ಬಳಸುವಲ್ಲಿ ಪರಿಣಾಮಕಾರಿತ್ವವನ್ನು ಸೂಚಿಸುತ್ತದೆ. ಕಾರ್ಯನಿರತ ಬಂಡವಾಳ ವಹಿವಾಟು ಅನುಪಾತವನ್ನು ಈ ಕೆಳಗಿನಂತೆ ಲೆಕ್ಕಹಾಕಲಾಗುತ್ತದೆ: ನಿವ್ವಳ ಮಾರಾಟವನ್ನು ಅದೇ ಅವಧಿಯಲ್ಲಿನ ಸರಾಸರಿ ಕಾರ್ಯನಿರತ ಬಂಡವಾಳದ ಮೊತ್ತದಿಂದ ಭಾಗಿಸಲಾಗಿದೆ.

**9. ನಿವ್ವಳ ಲಾಭ ಅನುಪಾತ**

ಇದು ವ್ಯವಹಾರದ ನಿವ್ವಳ ಲಾಭ ಮತ್ತು ಮಾರಾಟದ ನಡುವಿನ ಸಂಬಂಧವನ್ನು ಅಳೆಯುತ್ತದೆ. ನಿವ್ವಳ ಮಾರಾಟವನ್ನು ಒಟ್ಟು ಮಾರಾಟವನ್ನು ಕಳೆದು ಮಾರಾಟದ ಆದಾಯ ಎಂದು ಲೆಕ್ಕಹಾಕಲಾಗುತ್ತದೆ.

**10. ಬಳಸಿದ ಬಂಡವಾಳದ ಮೇಲಿನ ಆದಾಯ** (ROCE)

ಬಳಸಿದ ಬಂಡವಾಳದ ಮೇಲಿನ ಆದಾಯವು ಸಾಲಗಾರರು ಮತ್ತು ಇಕ್ವಿಟಿ ಹೊಂದಿರುವವರು ಇಬ್ಬರಿಗೂ ಆದಾಯವನ್ನು ಉತ್ಪಾದಿಸುವ ಕಂಪನಿಯ ನಿರ್ವಹಣೆಯ ಸಾಮರ್ಥ್ಯವನ್ನು ಸೂಚಿಸುತ್ತದೆ. ಅನುಪಾತ ಹೆಚ್ಚಾದಷ್ಟೂ, ಕಂಪನಿಯು ಆದಾಯವನ್ನು ಉತ್ಪಾದಿಸಲು ಬಳಸುತ್ತಿರುವ ಬಂಡವಾಳವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

**11. ಹೂಡಿಕೆಯ ಮೇಲಿನ ಆದಾಯ**

ಹೂಡಿಕೆಯ ಮೇಲಿನ ಆದಾಯ (ROI) ಎನ್ನುವುದು ಹೂಡಿಕೆದಾರರು ತಮ್ಮ ಹೂಡಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಪಡೆಯುವ ಲಾಭವನ್ನು ಲೆಕ್ಕಾಚಾರ ಮಾಡಲು ಬಳಸುವ ಹಣಕಾಸಿನ ಅನುಪಾತವಾಗಿದೆ. ಅನುಪಾತ ಹೆಚ್ಚಾದಷ್ಟೂ, ಗಳಿಸಿದ ಲಾಭ ಹೆಚ್ಚಾಗುತ್ತದೆ. ವ್ಯಾಪಕವಾಗಿ ಬಳಸಲಾಗುವ ವಿಧಾನವೆಂದರೆ ಸಮಯ ಆಧಾರಿತ ಆದಾಯದ ದರ (ಟೈಮ್ ವೇಟೆಡ್ ರಿಟರ್ನ್ ದರ) (TWRR) ಮತ್ತು ROI ಅನ್ನು ಲೆಕ್ಕಾಚಾರ ಮಾಡಲು ಅದನ್ನೇ ಅನುಸರಿಸಬೇಕು. ಇದು ಹೂಡಿಕೆ ನಗದು ಹರಿವಿನ ಸಮಯಕ್ಕೆ ಅನುಗುಣವಾಗಿ ಆದಾಯವನ್ನು ಸರಿಹೊಂದಿಸುತ್ತದೆ ಮತ್ತು ಅದರ ಸೂತ್ರ / ಲೆಕ್ಕಾಚಾರದ ವಿಧಾನವು ಸಾಮಾನ್ಯವಾಗಿ ಲಭ್ಯವಿದೆ.

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಎಲ್ಲಾ ಮೊತ್ತಗಳು ಭಾರತೀಯ ರೂ. ಸಾವಿರಗಳಲ್ಲಿ)

### 2. ನಗದು ಮತ್ತು ನಗದು ಸಮಾನತೆಗಳು

(ರೂ. ಸಾವಿರಗಳಲ್ಲಿ)

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ | ಏಪ್ರಿಲ್ 1, 2023 ರಂತೆ |
|---|---|---|---|
| ನಗದು ಮತ್ತು ನಗದು ಸಮಾನತೆಗಳು<br>ನಗದು–ಕೈಯಲ್ಲಿ<br>ಬ್ಯಾಂಕ್‌ಗಳೊಂದಿಗಿನ ಬ್ಯಾಲೆನ್ಸ್‌ಗಳು:<br>– ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳಲ್ಲಿ<br>–ಠೇವಣಿ ಖಾತೆಗಳಲ್ಲಿ<br>(3 ತಿಂಗಳಿಗಿಂತ ಕಡಿಮೆ ಅವಧಿಯ ಮುಕ್ತಾಯ) | 228.84<br>- | 825.60<br>- | 826.25<br>- |
| | **228.84** | **825.60** | **826.25** |

### 3. ಇತರ ಪ್ರಸ್ತುತ ಸ್ವತ್ತುಗಳು

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ | ಏಪ್ರಿಲ್ 1, 2023 ರಂತೆ |
|---|---|---|---|
| ಠೇವಣಿಗಳು | | | |
| ಭದ್ರತಾ ಠೇವಣಿಗಳು–NSDL | 10.00 | - | - |
| | **10.00** | **-** | **-** |

### 4. ಈಕ್ವಿಟಿ ಷೇರು ಬಂಡವಾಳ

| ವಿವರಗಳು | ಮಾರ್ಚ್ 31, 2025 ರಂತೆ | | ಮಾರ್ಚ್ 31, 2024 ರಂತೆ | | ಏಪ್ರಿಲ್ 1, 2023 ರಂತೆ | |
|---|---|---|---|---|---|---|
| | ಷೇರುಗಳ ಸಂಖ್ಯೆ | ಮೊತ್ತ (‘000ಗಳಲ್ಲಿ) | ಷೇರುಗಳ ಸಂಖ್ಯೆ | ಮೊತ್ತ (‘000ಗಳಲ್ಲಿ) | ಷೇರುಗಳ ಸಂಖ್ಯೆ | ಮೊತ್ತ (‘000ಗಳಲ್ಲಿ) |
| **(i) ಅಧಿಕೃತ ಷೇರು ಬಂಡವಾಳ:**<br>ಪ್ರತಿಯೊಂದಕ್ಕೂ ರೂ.10 ರ 1,00,000 ಈಕ್ವಿಟಿ ಷೇರುಗಳು | 1,00,000 | 1,000 | 1,00,000 | 1,000 | 1,00,000 | 1,000 |
| | **1,00,000** | **1,000** | **1,00,000** | **1,000** | **1,00,000** | **1,000** |
| **(ii) ನೀಡಲಾದ, ಚಂದಾದಾರರಾದ ಮತ್ತು ಸಂಪೂರ್ಣವಾಗಿ ಪಾವತಿಸಿದ ಷೇರುಗಳು:**<br>ಪ್ರತಿಯೊಂದಕ್ಕೂ ರೂ.10 ರ 1,00,000 ಈಕ್ವಿಟಿ ಷೇರುಗಳು | 1,00,000 | 1,000 | 1,00,000 | 1,000 | 1,00,000 | 1,000 |
| | **1,00,000** | **1,000** | **1,00,000** | **1,000** | **1,00,000** | **1,000** |
| **(iii) ಷೇರುಗಳು ಮತ್ತು ಷೇರು ಬಂಡವಾಳದ ಸಂಖ್ಯೆಗಳ ಸಮನ್ವಯ**<br>**ಆರಂಭಿಕ ಷೇರು ಬಂಡವಾಳ**<br>**ಸೇರಿಸು: ವರ್ಷದಲ್ಲಿ ನೀಡಲಾದ / ಚಂದಾದಾರರಾದ ಷೇರುಗಳು, ಷೇರು ಬಂಡವಾಳಗಳ ಸಂಖ್ಯೆ**<br>**ಮುಕ್ತ ಷೇರು ಬಂಡವಾಳ**<br>ಪ್ರತಿಯೊಂದಕ್ಕೂ ರೂ.10 ರ 1,00,000 ಈಕ್ವಿಟಿ ಷೇರುಗಳು | 1,00,000<br>- | 1,000<br>- | 1,00,000<br>- | 1,000<br>- | 1,00,000<br>- | 1,000<br>- |
| | **1,00,000** | **1,000** | **1,00,000** | **1,000** | **1,00,000** | **1,000** |
| **iv) 5 ಪ್ರತಿಶತಕ್ಕಿಂತ ಹೆಚ್ಚು ಷೇರುದಾರರು ಹೊಂದಿರುವ ಕಂಪನಿಯಲ್ಲಿ ಷೇರುಗಳು**<br>**ರೈಲ್ ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ)**<br>ಸೀಮಿತ (ಕೆ–ರೈಡ್) 99.994%<br>ಇತರರು: 0.006%* | 99,994<br><br>6 | 999.94<br><br>0.06 | 99,994<br><br>6 | 999.94<br><br>0.06 | 9,994<br><br>6 | 99.94<br><br>0.06 |

* **ಟಿಪ್ಪಣಿ:** ಕಂಪನಿಯ ದಾಖಲೆಗಳ ಪ್ರಕಾರ, ಅದರ ಸದಸ್ಯರ ನೋಂದಣಿ ಮತ್ತು ಲಾಭದಾಯಕ ಆಸಕ್ತಿಗೆ ಸಂಬಂಧಿಸಿದಂತೆ ಅವರಿಂದ ಸ್ವೀಕರಿಸಿದ ಇತರ ಘೋಷಣೆಗಳ ಪ್ರಕಾರ, ಮೇಲಿನ ಷೇರುಗಳು ಕೆ–ರೈಡ್ ಅನ್ನು ಪ್ರತಿನಿಧಿಸುವ ಷೇರುಗಳ ಕಾನೂನುಬದ್ಧ ಮತ್ತು ಲಾಭದಾಯಕ ಮಾಲೀಕತ್ವವನ್ನು ಪ್ರತಿನಿಧಿಸುತ್ತವೆ.

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಎಲ್ಲಾ ಮೊತ್ತಗಳು ಭಾರತೀಯ ರೂಪಾಯ ಸಾವಿರಗಳಲ್ಲಿ)

**(v) ವರ್ಷದ ಕೊನೆಯಲ್ಲಿ ಪ್ರವರ್ತಕರು ಹೊಂದಿರುವ ಷೇರುಗಳು**

| ಕ್ರ.ಸಂ. | ಪ್ರವರ್ತಕ ಹೆಸರು | ವರ್ಷದ ಅಂತ್ಯದಲ್ಲಿ ಷೇರುಗಳ ಸಂಖ್ಯೆ | ಒಟ್ಟು ಷೇರುಗಳ % | ವರ್ಷದ ಆರಂಭದಲ್ಲಿ ಷೇರುಗಳ ಸಂಖ್ಯೆ | % ವರ್ಷದ ಅವಧಿಯಲ್ಲಿ ಬದಲಾವಣೆ |
|---|---|---|---|---|---|
| 1 | M/s. ಕೆ–ರೈಡ್ | 99,994 | 100% | 99,994 | 0% |
| 2 | ಶ್ರೀ ಡಾ. ರಜನೀಶ್ ಗೋಯೆಲ್ # | - | 0% | 1 | -100% |
| 3 | ಶ್ರೀಮತಿ. ಡಾ. ಶಾಲಿನಿ ರಜನೀಶ್ # | 1 | 0% | - | 100% |
| 4 | ಶ್ರೀ ರಾಕೇಶ್ ಸಿಂಗ್ # | - | 0% | 1 | -100% |
| 5 | ಶ್ರೀ ಉಮಾಶಂಕರ್ ಎಸ್ಆರ್ # | 1 | 0% | - | 100% |
| 6 | ಶ್ರೀಮತಿ. ಡಾ. ಮಂಜುಳಾ ಎನ್ # | 1 | 0% | 1 | 0% |
| 7 | ಶ್ರೀ ಎನ್.ಎಸ್. ಶ್ರೀಧರಮೂರ್ತಿ # | - | 0% | 1 | -100% |
| 8 | ಶ್ರೀ ಎ.ಬಿ ಬಸವರಾಜು # | 1 | 0% | - | 100% |
| 9 | ಶ್ರೀ ಎಸ್.ಪಿ.ಎಸ್. ಗುಪ್ತಾ # | - | 0% | 1 | -100% |
| 10 | ಶ್ರೀ ಅಜಯ್ ಶರ್ಮಾ # | 1 | 0% | - | 100% |
| 11 | ಶ್ರೀ ಅಶುತೋಷ್ ಮಾಥೂರ್ # | 1 | 0% | 1 | 0% |
| | **ಒಟ್ಟು** | **1,00,000** | **100%** | **1,00,000** | **0%** |

**#ಟಿಪ್ಪಣಿ: ಮೆ। ಕೆ–ರೈಡ್ ಪರವಾಗಿ ಹೊಂದಿರುವ ಷೇರುಗಳನ್ನು ಸೂಚಿಸುತ್ತದೆ.**

**(vi) ಈಕ್ವಿಟಿ ಷೇರುಗಳಿಗೆ ಲಗತ್ತಿಸಲಾದ ನಿಯಮಗಳು/ಹಕ್ಕುಗಳು**

ಕಂಪನಿಯು ಕೇವಲ ಒಂದು ವರ್ಗದ ಷೇರುಗಳನ್ನು ಹೊಂದಿದೆ, ಅಂದರೆ ಪ್ರತಿ ಷೇರಿಗೆ ರೂ.10 ಮುಖಬೆಲೆಯ ಈಕ್ವಿಟಿ ಷೇರುಗಳು. ಈಕ್ವಿಟಿ ಷೇರು ಹೊಂದಿರುವ ಪ್ರತಿಯೊಬ್ಬರಿಗೂ ಪ್ರತಿ ಷೇರಿಗೆ ಒಂದು ಮತದ ಹಕ್ಕಿದೆ. ಕಂಪನಿಯ ದಿವಾಳಿಯ ಸಂದರ್ಭದಲ್ಲಿ, ಈಕ್ವಿಟಿ ಷೇರುಗಳನ್ನು ಹೊಂದಿರುವವರು ಎಲ್ಲಾ ಆದ್ಯತೆಯ ಸಾಲಗಾರರಿಗೆ ವಿತರಣೆಯ ನಂತರ ಕಂಪನಿಯ ಉಳಿದ ಸ್ವತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ವಿತರಣೆಯು ಷೇರುದಾರರು (ಅಥವಾ) ಪ್ರವರ್ತಕರು ಹೊಂದಿರುವ ಈಕ್ವಿಟಿ ಷೇರುಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ.

ಕಂಪನಿಯ ಸದಸ್ಯರ ನೋಂದಣಿ ಮತ್ತು ಅವರಿಂದ ಪಡೆದ ಇತರ ಘೋಷಣೆಗಳು ಸೇರಿದಂತೆ ಪ್ರಯೋಜನಕಾರಿ ಹಿತಾಸಕ್ತಿಗೆ ಸಂಬಂಧಿಸಿದಂತೆ, ಮೇಲಿನ ಷೇರು ಹೋಲ್ಡಿಂಗ್

ಕೆ–ರೈಡ್ ಅನ್ನು ಪ್ರತಿನಿಧಿಸುವ ಷೇರುಗಳ ಕಾನೂನು ಮತ್ತು ಪ್ರಯೋಜನಕಾರಿ ಮಾಲೀಕತ್ವವನ್ನು ಪ್ರತಿನಿಧಿಸುತ್ತದೆ.

1. **ಬ್ಯಾಲೆನ್ಸ್ ಶೀಟ್ ಸಿದ್ಧಪಡಿಸಿದ ದಿನಾಂಕಕ್ಕೆ ತಕ್ಷಣವೇ ಹಿಂದಿನ 5 ವರ್ಷಗಳ ಅವಧಿಯಲ್ಲಿ.**

   (i) ನಗದು ರೂಪದಲ್ಲಿ ಪಾವತಿಯನ್ನು ಸ್ವೀಕರಿಸದೆ ಒಪ್ಪಂದದ ಪ್ರಕಾರ ಯಾವುದೇ ವರ್ಗದ ಷೇರುಗಳನ್ನು ಸಂಪೂರ್ಣವಾಗಿ ಪಾವತಿಸಿದಂತೆ ಹಂಚಿಕೆ ಮಾಡಲಾಗಿಲ್ಲ.

   (ii) ನಗದು ಹೊರತುಪಡಿಸಿ ಇನಾವು (ಬೋನಸ್) ಷೇರುಗಳ ಮೂಲಕ ಸಂಪೂರ್ಣವಾಗಿ ಪಾವತಿಸಿದಂತೆ ಯಾವುದೇ ವರ್ಗದ ಷೇರುಗಳನ್ನು ಹಂಚಿಕೆ ಮಾಡಲಾಗಿಲ್ಲ.

   (iii) ಕಂಪನಿಯು ಮರಳಿ ಖರೀದಿಸಿದ ಷೇರುಗಳ ವರ್ಗವಿಲ್ಲ.

2. **ಪಾವತಿಸದ ಯಾವುದೇ ಕರೆಗಳಿಲ್ಲ.**
3. **ಮುಟ್ಟುಗೋಲು ಹಾಕಿಕೊಂಡ ಷೇರುಗಳಿಲ್ಲ.**

**5. ಇತರ ಷೇರುಗಳು**

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ | ಏಪ್ರಿಲ್ 1, 2023 ರಂತೆ |
|---|---|---|---|
| ಬಂಡವಾಳ ಮೀಸಲು | | | |
| ಉಳಿಸಿಕೊಂಡಿರುವ ಗಳಿಕೆಗಳು | | | |
| ಆರಂಭಿಕ ಬಾಕಿ | (356.22) | (217.27) | (68.75) |
| ಸೇರಿಸಿ: ಪ್ರಸ್ತುತ ವರ್ಷದ ಲಾಭ/(ನಷ್ಟ) | (424.64) | (138.95) | (148.53) |
| ಸೇರಿಸಿ: ವರ್ಷದ ಇತರ ಸಮಗ್ರ ಆದಾಯ | - | - | - |
| ಮುಕ್ತ ಬಾಕಿ | | | |
| **ಮುಕ್ತಾಯದ ಬಾಕಿ** | **(780.87)** | **(356.22)** | **(217.27)** |

**6. ವಹಿವಾಟು ಪಾವತಿಗಳು**

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ | ಏಪ್ರಿಲ್ 1, 2023 ರಂತೆ |
|---|---|---|---|
| (ಎ) ಸೂಕ್ಷ್ಮ ಉದ್ಯಮಗಳು ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಗಳು. | - | - | 17.56 |
| (ಬಿ) ಸೂಕ್ಷ್ಮ ಉದ್ಯಮಗಳು ಮತ್ತು ಸಣ್ಣ ಉದ್ಯಮಗಳನ್ನು ಹೊರತುಪಡಿಸಿ ಸಾಲಗಾರರ ಒಟ್ಟು ಬಾಕಿಗಳು. | - | - | - |
| ವಹಿವಾಟು ಪಾವತಿಗಳ ಬಾಕಿ ವಯಸ್ಸಾದ (ಏಜಿಂಗ್) ವೇಳಾಪಟ್ಟಿಗಾಗಿ ಟಿಪ್ಪಣಿ 5ಎ ಅನ್ನು ನೋಡಿ. | | | |
| | - | - | **17.56** |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
# ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಎಲ್ಲಾ ಮೊತ್ತಗಳು ಭಾರತೀಯ ರೂಪಾಯಿಯ ಸಾವಿರಗಳಲ್ಲಿ)

**7. ಇತರ ಪ್ರಸ್ತುತ ಹೊಣೆಗಾರಿಕೆಗಳು**

(ರೂ. ಸಾವಿರಗಳಲ್ಲಿ)

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ | ಏಪ್ರಿಲ್ 1, 2023 ರಂತೆ |
|---|---|---|---|
| **ಇತರ ಹೊಣೆಗಾರಿಕೆಗಳು** | 15.00 | 175.85 | **22.60** |
| **ಶಾಸನಬದ್ಧ ರೆಮಿಟೆನ್ಸ್ (ಪಾವತಿಗಳು)** | | | |
| ಮೂಲದಲ್ಲಿ ಕಡಿತಗೊಳಿಸಲಾದ ತೆರಿಗೆ ಪಾವತಿಸಬೇಕಾದದ್ದು | 3.27 | 3.10 | **1.20** |
| ಸರಕು ಮತ್ತು ಸೇವಾ ತೆರಿಗೆ ಪಾವತಿಸಬೇಕಾದದ್ದು | 1.44 | 2.88 | **2.16** |
| | **19.71** | **181.83** | **25.96** |

**8. ಇತರೆ ವೆಚ್ಚಗಳು**

| ವಿವರಗಳು | ಮಾರ್ಚ್ 31, 2025 ರಂತೆ | ಮಾರ್ಚ್ 31, 2024 ರಂತೆ |
|---|---|---|
| ಲೆಕ್ಕಪರಿಶೋಧನಾ ಶುಲ್ಕ | 15.00 | 10.00 |
| ಬ್ಯಾಂಕ್ ಶುಲ್ಕಗಳು | 2.18 | 0.65 |
| ನಿರ್ದೇಶಕರ ಸಭಾ ಭತ್ಯೆಗಳು | 35.40 | 40.12 |
| ಮುದ್ರಣ ಮತ್ತು ಲೇಖನ ಸಾಮಗ್ರಿಗಳು | 213.67 | 34.81 |
| ವೃತ್ತಿಪರ ಮತ್ತು ಸಲಹಾ ಸೇವೆಗಳು | 100.87 | 43.20 |
| ದರಗಳು ಮತ್ತು ತೆರಿಗೆಗಳು | 41.44 | 2.57 |
| ಕಂಪನಿಗಳ ನೊಂದಣಿ ಪ್ರಕ್ರಿಯೆ ಕಡತ ಸಲ್ಲಿಕೆ (ROC) ಫೈಲಿಂಗ್ ಶುಲ್ಕಗಳು | 6.80 | 7.60 |
| ಇತರ ಕಚೇರಿ ನಿರ್ವಹಣಾ ವೆಚ್ಚಗಳು | 9.28 | - |
| | **424.64** | **138.95** |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
## ಹಣಕಾಸು ಹೇಳಿಕೆಗಳ ಭಾಗವಾಗುವ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಎಲ್ಲಾ ಮೊತ್ತಗಳು ಭಾರತೀಯ ರೂಪಾಯಿಯ ಸಾವಿರಗಳಲ್ಲಿ)

**9. ಸಂಬಂಧಿತ ಸಂಸ್ಥೆಗಳ ಬಹಿರಂಗಪಡಿಸುವಿಕೆ**

Ind AS - 24, "ಸಂಬಂಧಿತ ಸಂಘ/ಸಂಸ್ಥೆ ಬಹಿರಂಗಪಡಿಸುವಿಕೆಗಳು" ನಿಂದ ಅಗತ್ಯವಿರುವ ಸಂಬಂಧಿತ ಸಂಘ/ಸಂಸ್ಥೆ ಬಹಿರಂಗಪಡಿಸುವಿಕೆಗಳನ್ನು ಕೆಳಗೆ ನೀಡಲಾಗಿದೆ:

| ಸಂಬಂಧದ ಸ್ವರೂಪ : | ಸಂಬಂಧಿತ ಸಂಘ/ಸಂಸ್ಥೆ ಹೆಸರು |
|---|---|
| ಹೋಲ್ಡಿಂಗ್ ಕಂಪನಿ : | ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಮಂಡಳಿ (ಕರ್ನಾಟಕ) ಲಿಮಿಟೆಡ್ (ಕೆ–ರೈಡ್) |
| ಪ್ರಮುಖ ಆಡಳಿತ ಮಂಡಳಿಯ ಅಧಿಕಾರಿ : | ಶ್ರೀ. ರಾಜೇಶ್ ಕೆ ಸಿಂಗ್<br>ಶ್ರೀ. ಅವಧೇಶ್ ಮೆಹ್ತಾ (27–06–2023 ರಿಂದ) |
| ನಾಮನಿರ್ದೇಶಿತ ನಿರ್ದೇಶಕರು: | ಶ್ರೀಮತಿ ಡಾ. ಶಾಲಿನಿ ರಜನೀಶ್<br>ಶ್ರೀಮತಿ ಡಾ. ಮಂಜುಳಾ ಎನ್<br>ಶ್ರೀ. ಗೌರವ್ ಗುಪ್ತಾ<br>ಶ್ರೀ. ಅಶುತೋಷ್ ಮಾಥುರ್<br>ಶ್ರೀಮತಿ ಅಪರ್ಣಾ ಎ ಪಾವಟೆ<br>ಶ್ರೀ. ಸಂಜೀವ್ ಕುಮಾರ್ ಗಾರ್ಗ್<br>ಶ್ರೀ. ಅಜಿತ್ ಕುಮಾರ್ ಝಾ<br>ಶ್ರೀ. ಅಂಜುಮ್ ಪರ್ವೇಜ್<br>ಶ್ರೀಮತಿ. ದೀಪಾ ಕೋಟ್ನಿಸ್<br>ಶ್ರೀ. ಮಹೇಶ್ವರ ರಾವ್<br>ಶ್ರೀ. ಉಮಾ ಶಂಕರ್ ಎಸ್ ಆರ್<br>ಶ್ರೀ. ಮೊಹಮ್ಮದ್ ಇಕ್ರಮುಲ್ಲಾ ಷರೀಫ್<br>ಶ್ರೀ. ಆನಂದ ಭಾರತಿ<br>ಶ್ರೀ. ಧನಂಜಯ ಸಿಂಗ್ |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಹಣಕಾಸು ಹೇಳಿಕೆಗಳ ಭಾಗವಾಗುವ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಎಲ್ಲಾ ಮೊತ್ತಗಳು ಭಾರತೀಯ ರೂಪಾಯಿಯ ಸಾವಿರಗಳಲ್ಲಿ)

**10. ವರ್ಷದಲ್ಲಿನ ವಹಿವಾಟುಗಳು**

| ಎಂಡಿ/ಡಬ್ಲ್ಯೂಟಿಡಿ ಹೊರತುಪಡಿಸಿ ನಾಮನಿರ್ದೇಶಿತ ನಿರ್ದೇಶಕರಿಗೆ ಸಭಾ ಭತ್ಯೆಗಳು | 31, ಮಾರ್ಚ್–2025ರಲ್ಲಿದ್ದಂತೆ | 31, ಮಾರ್ಚ್–2024ರಲ್ಲಿದ್ದಂತೆ |
|---|---|---|
| ಶ್ರೀಮತಿ ಡಾ.ಮಂಜುಳಾ ಎನ್ | 6.00 | 4.00 |
| ಶ್ರೀ. ಗೌರವ್ ಗುಪ್ತಾ | - | 4.00 |
| ಶ್ರೀ. ಅಶುತೋಷ್ ಮಾಥುರ್ | 6.00 | 8.00 |
| ಶ್ರೀಮತಿ. ಅಪರ್ಣಾ ಎ ಪಾವಟೆ | 2.00 | - |
| ಶ್ರೀ. ಸಂಜೀವ್ ಕುಮಾರ್ ಗಾರ್ಗ್ | 2.00 | - |
| ಶ್ರೀ. ಅಜಿತ್ ಕುಮಾರ್ ಝಾ | - | 2.00 |
| ಶ್ರೀ. ಅಂಜುಮ್ ಪರ್ವೇಜ್ | - | 2.00 |
| ಶ್ರೀಮತಿ. ದೀಪಾ ಕೋಟ್ನಿಸ್ | 6.00 | 6.00 |
| ಶ್ರೀ. ಮಹೇಶ್ವರ ರಾವ್ | 6.00 | - |
| ಶ್ರೀ. ಉಮಾ ಶಂಕರ್ ಎಸ್ ಆರ್ | 2.00 | - |
| ಶ್ರೀ. ಮೊಹಮ್ಮದ್ ಇಕ್ರಮುಲ್ಲಾ ಷರೀಫ್ | - | 2.00 |
| ಶ್ರೀ. ಆನಂದ್ ಭಾರತಿ | - | 2.00 |
| ಶ್ರೀ. ಧನಂಜಯ ಸಿಂಗ್ | - | 4.00 |

**11. ಆಕಸ್ಮಿಕ ಹೊಣೆಗಾರಿಕೆಗಳು ಮತ್ತು ಬದ್ಧತೆಗಳು (ಒದಗಿಸದ ಮಟ್ಟಿಗೆ)**

| ವಿವರಗಳು | 31–ಮಾರ್ಚ್–2025ರಲ್ಲಿದ್ದಂತೆ | 31–ಮಾರ್ಚ್–2024ರಲ್ಲಿದ್ದಂತೆ |
|---|---|---|
| **ಅನಿಶ್ಚಿತ ಹೊಣೆಗಾರಿಕೆಗಳು:** | | |
| **ಎ. ವಿವಿಧ ಸರ್ಕಾರಿ ಅಧಿಕಾರಿಗಳು ಮತ್ತು ಇತರರ ಪರವಾಗಿ ಬ್ಯಾಂಕುಗಳು ನೀಡಿದ ಖಾತರಿಗಳಿಗೆ ಸಂಬಂಧಿಸಿದಂತೆ ವಿವಿಧ ಬ್ಯಾಂಕುಗಳಿಗೆ ಬಾಕಿ ಇರುವ ಖಾತರಿಗಳು ಮತ್ತು ಪ್ರತಿ ಖಾತರಿಗಳು:**<br>i. ಅಂಗಸಂಸ್ಥೆಗಳ ಪರವಾಗಿ ಕಂಪನಿಯು ನೀಡಿದ ಖಾತರಿಗಳು.<br>ii. ಬಾಕಿ ಇರುವ ಇತರ ಖಾತರಿಗಳ ಒಟ್ಟು ಮೌಲ್ಯ | ಶೂನ್ಯ | ಶೂನ್ಯ |
| **ಬಿ. ಕಂಪನಿಯು ಆಕಸ್ಮಿಕ ಹೊಣೆಗಾರರಾಗಿರುವ ಇತರ ಹಣ.**<br>i. ಬ್ಯಾಂಕುಗಳೊಂದಿಗೆ ರಿಯಾಯಿತಿ ನೀಡಲಾದ ಬಿಲ್‌ಗಳಿಗೆ ಸಂಬಂಧಿಸಿದಂತೆ ಹೊಣೆಗಾರಿಕೆ (ಮೂರನೇ ವ್ಯಕ್ತಿಯ ಬಿಲ್‌ಗಳ ರಿಯಾಯಿತಿ ಸೇರಿದಂತೆ) | ಶೂನ್ಯ | ಶೂನ್ಯ |
| ಕಂಪನಿಯ ವಿರುದ್ಧದ ಹಕ್ಕುಗಳು, ಸಾಲಗಳಾಗಿ ಅಂಗೀಕರಿಸಲಾಗಿಲ್ಲ | ಶೂನ್ಯ | ಶೂನ್ಯ |
| **ಬದ್ಧತೆಗಳು:** | | |
| ಬಂಡವಾಳ ಖಾತೆಯಲ್ಲಿ ಕಾರ್ಯಗತಗೊಳಿಸಲು ಉಳಿದಿರುವ ಒಪ್ಪಂದಗಳ ಅಂದಾಜು ಮೊತ್ತ ಮತ್ತು ಅಂದಾಜಿಸಿರದ್ದು. | | |
| ಎ. ಸಂವೇದನಾಶೀಲ ಸ್ವತ್ತುಗಳು (ನೀಡಲಾದ ಗುತ್ತಿಗೆಗಳು ಮಾತ್ರ) | ಶೂನ್ಯ | ಶೂನ್ಯ |
| ಬಿ. ಅಮೂರ್ತ ಸ್ವತ್ತುಗಳು | ಶೂನ್ಯ | ಶೂನ್ಯ |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಹಣಕಾಸು ಹೇಳಿಕೆಗಳ ಭಾಗವಾಗುವ ಟಿಪ್ಪಣಿಗಳು

| 12. ಅನುಪಾತ ವಿಶ್ಲೇಷಣೆ: | | 2024-25 | % | 2023-24 | % | % ಶತಾಂಶ |
|---|---|---|---|---|---|---|
| (ಎ) ಪ್ರಸ್ತುತ ಅನುಪಾತ | ಪ್ರಸ್ತುತ ಆಸ್ತಿಗಳು | 238.84 | 12.12 | 825.60 | 4.54 | 167% |
| | ಪ್ರಸ್ತುತ ಹೊಣೆಗಾರಿಕೆಗಳು | 19.71 | | 181.83 | | |
| | | | | | | |
| (ಬಿ) ಸಾಲ–ಈಕ್ವಿಟಿ ಅನುಪಾತ | ಒಟ್ಟು ಸಾಲ | - | - | - | - | |
| | ಷೇರುದಾರರ ಇಕ್ವಿಟಿ | 1,000.00 | | 1,000.00 | | |
| | | | | | | |
| (ಸಿ) ಸಾಲ ಸೇವಾ ವ್ಯಾಪ್ತಿ ಅನುಪಾತ | EBITDA – ಕ್ಯಾಪೆಕ್ಸ್ | (424.64) | - | (138.95) | - | - |
| | ಬಡ್ಡಿ + ಮೂಲ | - | | - | | |
| | | | | | | |
| (ಡಿ) ಈಕ್ವಿಟಿ ಅನುಪಾತದ ಮೇಲಿನ ಆದಾಯ, (ROE) | ನಿವ್ವಳ ಆದಾಯ | (424.64) | (0.42) | (138.95) | (0.14) | 206% |
| | ಸರಾಸರಿ ಷೇರುದಾರರ ಇಕ್ವಿಟಿ | 1,000.00 | | 1,000.00 | | |
| | | | - | | | |
| (ಇ) ದಾಸ್ತಾನು ವಹಿವಾಟು ಅನುಪಾತ | COGS | - | | - | - | |
| | ಸರಾಸರಿ ದಾಸ್ತಾನು | - | | - | | |
| | | | | | | |
| (ಎಫ್) ವಹಿವಾಟು ಸ್ವೀಕೃತಿಗಳ ಅನುಪಾತ | ನಿವ್ವಳ ಕ್ರೆಡಿಟ್ ಮಾರಾಟ | - | - | - | | |
| | ಸ್ವೀಕರಿಸಬಹುದಾದ ಸರಾಸರಿ ಲೆಕ್ಕಗಳು | - | | - | | |
| | | | | | | |
| (ಜಿ) ಪಾವತಿಸಬೇಕಾದ ವಹಿವಾಟು ಅನುಪಾತ | ನಿವ್ವಳ ಕ್ರೆಡಿಟ್ ಖರೀದಿಗಳು | - | - | - | - | |
| | ಪಾವತಿಸಬೇಕಾದ ಸರಾಸರಿ ಖಾತೆಗಳು | - | | 8.78 | - | |
| | | | | | | |
| (ಎಚ್) ನಿವ್ವಳ ಬಂಡವಾಳ ವಹಿವಾಟು ಅನುಪಾತ | ನಿವ್ವಳ ಮಾರಾಟ | - | - | - | - | |
| | ಸರಾಸರಿ ಕಾರ್ಯನಿರತ ಬಂಡವಾಳ | 431.45 | | 713.25 | - | |
| | | | | | | |
| (ಐ) ನಿವ್ವಳ ಲಾಭ ಅನುಪಾತ | ನಿವ್ವಳ ಮಾರಾಟ | (424.64) | - | (138.95) | - | |
| | ಮಾರಾಟ | - | | - | - | |
| | | | | | | |
| (ಜೆ) ಉದ್ಯೋಗಿ ಬಂಡವಾಳದ ಮೇಲಿನ ಆದಾಯ | EBIT | (424.64) | (1.94) | (138.95) | (0.22) | 798% |
| | ಉದ್ಯೋಗಿಗಳ ಬಂಡವಾಳ | 219.13 | | 643.78 | | |
| | | | | | | |
| (ಕೆ) ಹೂಡಿಕೆಯ ಮೇಲಿನ ಆದಾಯ | ಆದಾಯ (ಲಾಭ) | (424.64) | (0.42) | (138.95) | (0.14) | 206% |
| | ಹೂಡಿಕೆ (ವೆಚ್ಚ) | 1,000.00 | | 1,000.00 | | |

| **ಅನುಪಾತ:** | **ಹಿಂದಿನ ವರ್ಷಕ್ಕೆ ಹೋಲಿಸಿದರೆ ಅನುಪಾತದಲ್ಲಿನ 25% ಶತಾಂಶದ ಬದಲಾವಣೆಗೆ ವಿವರಣೆ:** |
|---|---|
| (ಎ) ಪ್ರಸ್ತುತ ಅನುಪಾತ: | ಅನುಪಾತದಲ್ಲಿನ ಹೆಚ್ಚಳವು ಕೆ–ರೈಡ್‌ಗೆ ಪಾವತಿಸಬೇಕಾದ ಪ್ರಸ್ತುತ ಹೊಣೆಗಾರಿಕೆಗಳಲ್ಲಿನ ಇಳಿಕೆಯಿಂದಾಗಿ. |
| (ಡಿ) ಈಕ್ವಿಟಿ ಅನುಪಾತದ ಮೇಲಿನ ಆದಾಯ (ROE): | ಕಳೆದ ವರ್ಷಕ್ಕೆ ಹೋಲಿಸಿದರೆ ವೆಚ್ಚದ ಹೆಚ್ಚಳವು ROE ನಲ್ಲಿ ಇಳಿಕೆಗೆ ಕಾರಣವಾಗಿದೆ. |
| (ಜೆ) ಬಳಸಿದ ಬಂಡವಾಳದ ಮೇಲಿನ ಆದಾಯ: | ಕಳೆದ ವರ್ಷಕ್ಕೆ ಹೋಲಿಸಿದರೆ ವೆಚ್ಚದ ಹೆಚ್ಚಳವು ROCE ನಲ್ಲಿ ಇಳಿಕೆಗೆ ಕಾರಣವಾಗಿದೆ. |
| (ಕೆ) ಹೂಡಿಕೆಯ ಮೇಲಿನ ಆದಾಯ: | ಕಳೆದ ವರ್ಷಕ್ಕೆ ಹೋಲಿಸಿದರೆ ವೆಚ್ಚದ ಹೆಚ್ಚಳವು ROI ನಲ್ಲಿ ಇಳಿಕೆಗೆ ಕಾರಣವಾಗಿದೆ. |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಹಣಕಾಸು ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು

**13. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಕಾಯ್ದೆ 2006 (MSMED) ರ ಪ್ರಕಾರ ಬಹಿರಂಗಪಡಿಸುವಿಕೆ: ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಸಂಬಂಧಿಸಿದ ಮಾಹಿತಿ.**

| ವಿವರಗಳು | 2024-25 | 2023-24 |
|---|---|---|
| **ಯಾವುದೇ ಪೂರೈಕೆದಾರರಿಗೆ ಪಾವತಿಸಲು ಉಳಿದಿರುವ ಮೊತ್ತ:** | ಶೂನ್ಯ | ಶೂನ್ಯ |
| ಎ) ಅಸಲು ಮೊತ್ತ | ಶೂನ್ಯ | ಶೂನ್ಯ |
| ಬಿ) ಬಾಕಿ ಇರುವ ಬಡ್ಡಿ | ಶೂನ್ಯ | ಶೂನ್ಯ |
| ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006 ರ ಸೆಕ್ಷನ್ 16 ರ ಪ್ರಕಾರ ಪಾವತಿಸಬೇಕಾದ ಬಡ್ಡಿಯ ಮೊತ್ತ, ನಿಗದಿತ ದಿನವನ್ನು ಮೀರಿ ಪೂರೈಕೆದಾರರಿಗೆ ಪಾವತಿಸಿದ ಮೊತ್ತದೊಂದಿಗೆ. | ಶೂನ್ಯ | ಶೂನ್ಯ |
| ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಯನ್ನು ಸೇರಿಸದೆಯೇ ಪಾವತಿ ಮಾಡುವಲ್ಲಿ ವಿಳಂಬವಾದ ಅವಧಿಗೆ (ಬಿಲ್ಲುಗಳನ್ನು ಪಾವತಿಸಿದೆ, ಆದರೆ ಪಾವತಿಯು ನಿಗದಿತ ಅವಧಿಯನ್ನು ಮೀರಿದೆ) ಬಾಕಿ ಇರುವ ಮತ್ತು ಪಾವತಿಸಬೇಕಾದ ಬಡ್ಡಿಯ ಮೊತ್ತ. | ಶೂನ್ಯ | ಶೂನ್ಯ |
| ಸಂಚಿತ ಮತ್ತು ಪಾವತಿಸದ ಉಳಿದ ಬಡ್ಡಿಯ ಮೊತ್ತ. | ಶೂನ್ಯ | ಶೂನ್ಯ |
| ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006 ರ ಸೆಕ್ಷನ್ 23 ರ ಅಡಿಯಲ್ಲಿ ಕಳೆಯಬಹುದಾದ ವೆಚ್ಚವಾಗಿ ನಿರಾಕರಿಸುವ ಉದ್ದೇಶಕ್ಕಾಗಿ, ಮೇಲಿನ ಬಡ್ಡಿ ಬಾಕಿಗಳನ್ನು ವಾಸ್ತವವಾಗಿ ಸಣ್ಣ ಉದ್ಯಮಕ್ಕೆ ಪಾವತಿಸುವ ದಿನಾಂಕದವರೆಗೆ, ಮುಂದಿನ ವರ್ಷಗಳಲ್ಲಿ ಬಾಕಿ ಉಳಿದಿರುವ ಮತ್ತು ಪಾವತಿಸಬೇಕಾದ ಹೆಚ್ಚಿನ ಬಡ್ಡಿಯ ಮೊತ್ತ. | ಶೂನ್ಯ | ಶೂನ್ಯ |

**14. ಹಣಕಾಸು ಸಾಧನಗಳು**

**31 ಮಾರ್ಚ್ 2025 ರಂತೆ ವರ್ಗಗಳ ಪ್ರಕಾರ ಹಣಕಾಸು ಸಾಧನಗಳ ಪುಸ್ತಕ ಮೌಲ್ಯ ಮತ್ತು ನ್ಯಾಯಯುತ ನೈಜ ಮೌಲ್ಯವು ಈ ಕೆಳಗಿನಂತಿದೆ:**

| ವಿವರಗಳು | ಮಾರ್ಚ್ 31, 2025 ರಂತೆ | |
|---|---|---|
| | ಪುಸ್ತಕಗಳ ಮೌಲ್ಯ | ನೈಜ ಮೌಲ್ಯ |
| ಹಣಕಾಸು ಸ್ವತ್ತುಗಳು – ಭೋಗ್ಯ ವೆಚ್ಚ<br>ನಗದು ಮತ್ತು ನಗದು ಸಮಾನ | 228.84 | 228.84 |
| **ಒಟ್ಟು ಸ್ವತ್ತುಗಳು** | **228.84** | **228.84** |
| | | |
| ವಿವರಗಳು | ಮಾರ್ಚ್ 31, 2025 ರಂತೆ | |
| | ಪುಸ್ತಕಗಳ ಮೌಲ್ಯ | ನೈಜ ಮೌಲ್ಯ |
| ಹಣಕಾಸು ಹೊಣೆಗಾರಿಕೆಗಳು – ಭೋಗ್ಯ ವೆಚ್ಚ<br>ಇತರ ಪ್ರಸ್ತುತ ಹಣಕಾಸು ಹೊಣೆಗಾರಿಕೆಗಳು<br>ಪಾವತಿಸಬೇಕಾದ ವ್ಯಾಪಾರಗಳು | -<br>- | -<br>- |
| **ಒಟ್ಟು ಸ್ವತ್ತುಗಳು** | - | - |
| 31 ಮಾರ್ಚ್ 2024 ರಂತೆ ವರ್ಗಗಳ ಪ್ರಕಾರ ಹಣಕಾಸು ಸಾಧನಗಳ ಪುಸ್ತಕ ಮೌಲ್ಯ ಮತ್ತು ನ್ಯಾಯಯುತ ಮೌಲ್ಯವು ಈ ಕೆಳಗಿನಂತಿದೆ: | | |
| | | |
| ವಿವರಗಳು | ಮಾರ್ಚ್ 31, 2024 ರಂತೆ | |
| | ಪುಸ್ತಕಗಳ ಮೌಲ್ಯ | ನೈಜ ಮೌಲ್ಯ |
| ಹಣಕಾಸು ಸ್ವತ್ತುಗಳು – ಭೋಗ್ಯ ವೆಚ್ಚ<br>ನಗದು ಮತ್ತು ನಗದು ಸಮಾನ | 825.60 | 825.60 |
| **ಒಟ್ಟು ಸ್ವತ್ತುಗಳು** | **825.60** | **825.60** |
| | | |
| ವಿವರಗಳು | ಮಾರ್ಚ್ 31, 2024 ರಂತೆ | |
| | ವಾಹಕ ಮೌಲ್ಯ | ನ್ಯಾಯಯುತ ಮೌಲ್ಯ |
| ಹಣಕಾಸು ಹೊಣೆಗಾರಿಕೆಗಳು – ಭೋಗ್ಯ ವೆಚ್ಚ<br>ಇತರ ಪ್ರಸ್ತುತ ಹಣಕಾಸು ಹೊಣೆಗಾರಿಕೆಗಳು<br>ವಹಿವಾಟು ಪಾವತಿಗಳು | -<br>- | -<br>- |
| ಒಟ್ಟು ಸ್ವತ್ತುಗಳು | - | - |

ಆಡಳಿತ ಮಂಡಳಿಯು ನಗದು ಮತ್ತು ನಗದು ಸಮಾನತೆಗಳು, ಸಾಲಗಳು ಮತ್ತು ವ್ಯಾಪಾರ ಪಾವತಿಗಳ ನ್ಯಾಯಯುತ ಮೌಲ್ಯವು ಈ ಸಾಧನಗಳ ಅಲ್ಪಾವಧಿಯ ಮುಕ್ತಾಯಗಳಿಂದಾಗಿ ಅವುಗಳ ಪುಸ್ತಕದ ಮೌಲ್ಯವನ್ನು ಅಂದಾಜು ಮಾಡಲಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ನ್ಯಾಯಯುತ ಮೌಲ್ಯವನ್ನು ಬಲವಂತದ ಅಥವಾ ದಿವಾಳಿ ಮಾರಾಟದಲ್ಲಿ ಹೊರತುಪಡಿಸಿ, ಇಚ್ಛಿಸಿದ ವ್ಯಕ್ತಿಯ ನಡುವಿನ ಪ್ರಸ್ತುತ ವಹಿವಾಟಿನಲ್ಲಿ ವಿನಿಮಯ ಮಾಡಿಕೊಳ್ಳಬಹುದಾದ ಮೊತ್ತದಲ್ಲಿ ಸೇರಿಸಲಾಗಿದೆ.

### 15. ಹಣಕಾಸಿನ ಅಪಾಯ ನಿರ್ವಹಣೆ

ಕಂಪನಿಯ ನಿರ್ದೇಶಕರ ಮಂಡಳಿಯು ಅದರ ಅಪಾಯ ನಿರ್ವಹಣಾ ಚೌಕಟ್ಟಿನ ಸ್ಥಾಪನೆ ಮತ್ತು ಮೇಲ್ವಿಚಾರಣೆಗೆ ಒಟ್ಟಾರೆ ಜವಾಬ್ದಾರಿಯನ್ನು ಹೊಂದಿದೆ. ಕಂಪನಿಯ ಪ್ರಮುಖ ಹಣಕಾಸು ಹೊಣೆಗಾರಿಕೆಗಳು, ಸಾಲಗಳು, ವ್ಯಾಪಾರ ಮತ್ತು ಇತರ ಪಾವತಿಸಬೇಕಾದವುಗಳನ್ನು ಒಳಗೊಂಡಿವೆ. ಕಂಪನಿಯು ಪ್ರಮುಖ ಹಣಕಾಸು ಸ್ವತ್ತುಗಳು ನಗದು ಮತ್ತು ಇತರ ಸ್ವತ್ತುಗಳನ್ನು ಒಳಗೊಂಡಿವೆ.

ಕಂಪನಿಯ ಚಟುವಟಿಕೆಗಳು ಅದನ್ನು ವಿವಿಧ ಹಣಕಾಸಿನ ಅಪಾಯಗಳಿಗೆ ಒಡ್ಡುತ್ತವೆ: ಮಾರುಕಟ್ಟೆ ಅಪಾಯ, ಕ್ರೆಡಿಟ್ ಅಪಾಯ ಮತ್ತು ದ್ರವ್ಯತೆ ಅಪಾಯ. ನಿರ್ದೇಶಕರ ಮಂಡಳಿಯು ಈ ಪ್ರತಿಯೊಂದು ಅಪಾಯಗಳನ್ನು ನಿರ್ವಹಿಸಲು ನೀತಿಗಳನ್ನು ಪರಿಶೀಲಿಸುತ್ತದೆ ಮತ್ತು ಒಪ್ಪುತ್ತದೆ, ಇವುಗಳನ್ನು ಕೆಳಗೆ ಸಂಕ್ಷೇಪಿಸಲಾಗಿದೆ:

#### i. ಮಾರುಕಟ್ಟೆ ಅಪಾಯ

ಮಾರುಕಟ್ಟೆ ಬೆಲೆಗಳಲ್ಲಿನ ಬದಲಾವಣೆಗಳಿಂದಾಗಿ ಹಣಕಾಸು ಸಾಧನದ ಭವಿಷ್ಯದ ನಗದು ಹರಿವಿನ ನ್ಯಾಯಯುತ ಮೌಲ್ಯವು ಏರಿಳಿತಗೊಳ್ಳುವ ಅಪಾಯವಾಗಿದೆ. ಮಾರುಕಟ್ಟೆ ಅಪಾಯವು ಮೂರು ರೀತಿಯ ಅಪಾಯವನ್ನು ಒಳಗೊಂಡಿದೆ: ಬಡ್ಡಿದರದ ಅಪಾಯ, ಕರೆನ್ಸಿ ಅಪಾಯ ಮತ್ತು ಈಕ್ವಿಟಿ ಬೆಲೆ ಅಪಾಯ ಮತ್ತು ಸರಕು ಅಪಾಯದಂತಹ ಇತರ ಬೆಲೆ ಅಪಾಯ. ಮಾರುಕಟ್ಟೆ ಅಪಾಯದಿಂದ ಪ್ರಭಾವಿತವಾದ ಹಣಕಾಸು ಸಾಧನಗಳಲ್ಲಿ ಸಾಲಗಳು ಸೇರಿವೆ.

#### ii. ಬಡ್ಡಿದರದ ಅಪಾಯ

ಮಾರುಕಟ್ಟೆ ಬಡ್ಡಿದರಗಳಲ್ಲಿನ ಬದಲಾವಣೆಗಳಿಂದಾಗಿ ಹಣಕಾಸು ಸಾಧನದ ನ್ಯಾಯಯುತ ಮೌಲ್ಯ ಅಥವಾ ಭವಿಷ್ಯದ ನಗದು ಹರಿವು ಏರಿಳಿತಗೊಳ್ಳುವ ಅಪಾಯ.

ಬಡ್ಡಿದರದ ಅಪಾಯವು ಪ್ರಾಥಮಿಕವಾಗಿ ವಿವಿಧ ಸುತ್ತುತ್ತಿರುವ ಮತ್ತು ಇತರ ಸಾಲ ಮಾರ್ಗಗಳನ್ನು ಒಳಗೊಂಡಂತೆ ತೇಲುವ ದರ ಸಾಲದಿಂದ ಉಂಟಾಗುತ್ತದೆ.

ಕಂಪನಿಯ ಸಾಲಗಳು ಪ್ರಾಥಮಿಕವಾಗಿ ಸ್ಥಿರ ದರದ ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತವೆ, ಅದು ಅದನ್ನು ಗಮನಾರ್ಹ ಬಡ್ಡಿದರದ ಅಪಾಯಕ್ಕೆ ಒಡ್ಡಿಕೊಳ್ಳುವುದಿಲ್ಲ.

ಸಾಲಗಳು ಸ್ಥಿರ ದರದ ಸಾಲಗಳ ಸ್ವರೂಪದಲ್ಲಿರುವುದರಿಂದ ಮತ್ತು ಅಲ್ಪಾವಧಿಯ ಸಾಲವು ಬಡ್ಡಿರಹಿತವಾಗಿರುವುದರಿಂದ ಬಡ್ಡಿದರದ ಸೂಕ್ಷ್ಮತೆಯ ವಿಶ್ಲೇಷಣೆಯನ್ನು ಬಹಿರಂಗಪಡಿಸಲಾಗುವುದಿಲ್ಲ.

#### iii. ವಿದೇಶಿ ಹಣ (ಕರೆನ್ಸಿ) ಅಪಾಯ

ಕಂಪನಿಯು ಯಾವುದೇ ವಿದೇಶಿ ಕರೆನ್ಸಿ ವಹಿವಾಟುಗಳನ್ನು ಹೊಂದಿಲ್ಲ ಮತ್ತು ಆದ್ದರಿಂದ ಹಣ (ಕರೆನ್ಸಿ) ಅಪಾಯಕ್ಕೆ ಒಳಗಾಗುವುದಿಲ್ಲ.

#### iv. ಸಾಲದ (ಕ್ರೆಡಿಟ್) ಅಪಾಯ

ಒಬ್ಬ ಗ್ರಾಹಕ ಅಥವಾ ಹಣಕಾಸು ಸಾಧನದ ವ್ಯಕ್ತಿ/ಸಂಸ್ಥೆಯು ತನ್ನ ಗುತ್ತಿಗೆ ಬಾಧ್ಯತೆಗಳನ್ನು ಪೂರೈಸಲು ವಿಫಲವಾದರೆ ಮತ್ತು ಮುಖ್ಯವಾಗಿ ಕಂಪನಿಯ ನಗದು ಮತ್ತು ನಗದು ಸಮಾನ ಮತ್ತು ಇತರ ಸ್ವತ್ತುಗಳಿಂದ ಉದ್ಭವಿಸಿದರೆ ಕಂಪನಿಗೆ ಹಣಕಾಸಿನ ನಷ್ಟದ ಅಪಾಯವೇ ಕ್ರೆಡಿಟ್ ಅಪಾಯ.

ಹಣಕಾಸಿನ ಸ್ವತ್ತುಗಳ ಪುಸ್ತಕದ ಮೌಲ್ಯವು ಮೊತ್ತವು ಗರಿಷ್ಠ ಕ್ರೆಡಿಟ್ ಮಾನ್ಯತೆಯನ್ನು ಪ್ರತಿನಿಧಿಸುತ್ತದೆ.

#### ನಗದು ಮತ್ತು ನಗದು ಸಮಾನ

ಕಂಪನಿಯು ಸಾಮಾನ್ಯವಾಗಿ ಹೆಚ್ಚಿನ ಕ್ರೆಡಿಟ್ ರೇಟಿಂಗ್‌ಗಳನ್ನು ಹೊಂದಿರುವ ಬ್ಯಾಂಕುಗಳೊಂದಿಗೆ ವಹಿವಾಟು ನಡೆಸುವುದರಿಂದ ನಗದು ಮತ್ತು ನಗದು ಸಮಾನ ಮೇಲಿನ ಕ್ರೆಡಿಟ್ ಅಪಾಯ ಸೀಮಿತವಾಗಿರುತ್ತದೆ.

#### v. ದ್ರವ್ಯತೆ (ಲಿಕ್ವಿಡಿಟಿ ರಿಸ್ಕ್) ಹಣದ ಹರಿವಿನ ಅಪಾಯ

ಕಂಪನಿಯು ತನ್ನ ಹಣಕಾಸಿನ ಬಾಧ್ಯತೆಗಳನ್ನು ಬಾಕಿ ಇರುವಾಗ ಪೂರೈಸಲು ಸಾಧ್ಯವಾಗದ ಅಪಾಯವಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ, ಬಾಕಿ ಇರುವಾಗ ತನ್ನ ಹೊಣೆಗಾರಿಕೆಗಳನ್ನು ಪೂರೈಸಲು ಸಾಕಷ್ಟು ದ್ರವ್ಯತೆ ಇರುತ್ತದೆ ಎಂದು ಖಚಿತಪಡಿಸಿಕೊಳ್ಳುವ ಮೂಲಕ ಕಂಪನಿಯು ತನ್ನ ಹಣದ ಹರಿವಿನ ಅಪಾಯವನ್ನು ನಿರ್ವಹಿಸುತ್ತದೆ. ಕಂಪನಿಯ ಕಾರ್ಪೊರೇಟ್ ಖಜಾನೆ ಇಲಾಖೆಯು ದ್ರವ್ಯತೆ, ಹಣಕಾಸು ಮತ್ತು ವಸಾಹತು ನಿರ್ವಹಣೆಗೆ ಕಾರಣವಾಗಿದೆ. ಹೆಚ್ಚುವರಿಯಾಗಿ, ಅಂತಹ ಅಪಾಯಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಮತ್ತು ನೀತಿಗಳನ್ನು ಹಿರಿಯ ಆಡಳಿತ ವರ್ಗವು ನೋಡಿಕೊಳ್ಳುತ್ತದೆ.

ನಿರೀಕ್ಷಿತ ನಗದು ಹರಿವಿನ ಆಧಾರದ ಮೇಲೆ ಕಂಪನಿಯ ದ್ರವ್ಯತೆ ಸ್ಥಿತಿಯ ರೋಲಿಂಗ್ ಮುನ್ಸೂಚನೆಗಳನ್ನು ಮಂಡಳಿಯು ಮೇಲ್ವಿಚಾರಣೆ ಮಾಡುತ್ತದೆ.

ಕೆಳಗಿನ ಕೋಷ್ಟಕವು ಮಾರ್ಚ್ 31, 2025 ರಂತೆ ಗಮನಾರ್ಹ ಹಣಕಾಸಿನ ಹೊಣೆಗಾರಿಕೆಗಳ ಒಪ್ಪಂದದ ಮುಕ್ತಾಯಗಳ ಕುರಿತು ವಿವರಗಳನ್ನು ಒದಗಿಸುತ್ತದೆ:

**ಕೆಳಗಿನ ಕೋಷ್ಟಕವು ಮಾರ್ಚ್ 31, 2024 ರಂತೆ ಗಮನಾರ್ಹ ಹಣಕಾಸು ಹೊಣೆಗಾರಿಕೆಗಳ ಒಪ್ಪಂದದ ಮುಕ್ತಾಯಗಳ ಕುರಿತು ವಿವರಗಳನ್ನು ಒದಗಿಸುತ್ತದೆ:**

| ವಿವರಗಳು | ಮಾರ್ಚ್ 31, 2025 ರಂತೆ | | |
|---|---|---|---|
| | 1 ವರ್ಷಕ್ಕಿಂತ ಕಡಿಮೆ | 1–2 ವರ್ಷಗಳು | 2 ವರ್ಷಗಳು ಮತ್ತು ಮೇಲ್ಪಟ್ಟು |
| ಇತರ ಪ್ರಸ್ತುತ ಹಣಕಾಸು ಹೊಣೆಗಾರಿಕೆಗಳು | - | - | - |
| **ವಹಿವಾಟು ಪಾವತಿಗಳು** | - | - | - |

**1 ವರ್ಷಕ್ಕಿಂತ ಕಡಿಮೆ 1–2 ವರ್ಷಗಳು 2 ವರ್ಷಗಳು ಮತ್ತು ಮೇಲ್ಪಟ್ಟ ಅವಧಿ ಕೆಳಗಿನ ಕೋಷ್ಟಕವು ಮಾರ್ಚ್ 31, 2024 ರಂತೆ ಗಮನಾರ್ಹ ಹಣಕಾಸಿನ ಹೊಣೆಗಾರಿಕೆಗಳ ಒಪ್ಪಂದದ ಮುಕ್ತಾಯದ ಕುರಿತು ವಿವರಗಳನ್ನು ಒದಗಿಸುತ್ತದೆ:**

| ವಿವರಗಳು | ಮಾರ್ಚ್ 31, 2025 ರಂತೆ | | |
|---|---|---|---|
| | 1 ವರ್ಷಕ್ಕಿಂತ ಕಡಿಮೆ | 1–2 ವರ್ಷಗಳು | 2 ವರ್ಷಗಳು ಮತ್ತು ಮೇಲ್ಪಟ್ಟು |
| ಇತರ ಪ್ರಸ್ತುತ ಹಣಕಾಸು ಹೊಣೆಗಾರಿಕೆಗಳು | - | - | - |
| **ವಹಿವಾಟು ಪಾವತಿಗಳು** | - | - | - |

**ಬಂಡವಾಳ ನಿರ್ವಹಣೆ:**

ಹೂಡಿಕೆದಾರ, ಸಾಲದಾತ ಮತ್ತು ಮಾರುಕಟ್ಟೆ ವಿಶ್ವಾಸವನ್ನು ಕಾಪಾಡಿಕೊಳ್ಳಲು ಮತ್ತು ವ್ಯವಹಾರದ ಭವಿಷ್ಯದ ಅಭಿವೃದ್ಧಿಯನ್ನು ಉಳಿಸಿಕೊಳ್ಳಲು ಬಲವಾದ ಬಂಡವಾಳ ನೆಲೆಯನ್ನು ಕಾಯ್ದುಕೊಳ್ಳುವುದು ಕಂಪನಿಯ ನೀತಿಯಾಗಿದೆ. ಕಂಪನಿಯು ಬಂಡವಾಳದ ಮೇಲಿನ ಲಾಭವನ್ನು ಹಾಗೂ ಅದರ ಈಕ್ವಿಟಿ ಷೇರುಗಳ ಮೇಲಿನ ಲಾಭಾಂಶದ ಮಟ್ಟವನ್ನು ಮೇಲ್ವಿಚಾರಣೆ ಮಾಡುತ್ತದೆ. ಬಂಡವಾಳವನ್ನು ನಿರ್ವಹಿಸುವಾಗ ಕಂಪನಿಯ ಉದ್ದೇಶವು ಷೇರುದಾರರ ಮೌಲ್ಯವನ್ನು ಗರಿಷ್ಠಗೊಳಿಸಲು ಸೂಕ್ತ ರಚನೆಯನ್ನು ಕಾಯ್ದುಕೊಳ್ಳುವುದು.

ಕಂಪನಿಯು ತನ್ನ ಮಾಲೀಕರಿಂದ ಈಕ್ವಿಟಿ ಮತ್ತು ನಿಯಂತ್ರಣ (ಹೋಲ್ಡಿಂಗ್) ಕಂಪನಿಯಿಂದ ಸಾಲ ಪಡೆಯುವ ಮೂಲಕ ತನ್ನ ನಿಧಿಯ ಅವಶ್ಯಕತೆಗಳನ್ನು ನಿರ್ವಹಿಸುತ್ತದೆ.

**16. ನ್ಯಾಯಯುತ ಮೌಲ್ಯ ಶ್ರೇಣಿ:**

| **ವರ್ಗದ ಪ್ರಕಾರ ಹಣಕಾಸು ಸಾಧನಗಳು** | | | |
|---|---|---|---|
| | **ಹಂತ** | **ಮಾರ್ಚ್ 31-2025** | **ಮಾರ್ಚ್ 31-2024** |
| **ನ್ಯಾಯಯುತ ಮೌಲ್ಯದಲ್ಲಿ ಅಳೆಯಲಾದ ಹಣಕಾಸು ಸ್ವತ್ತುಗಳು** | | | |
| **ಕಂತು ಆಧಾರಿತ ವೆಚ್ಚದಲ್ಲಿ** | | | |
| ಹಣಕಾಸು ಸ್ವತ್ತುಗಳು | | | |
| ವಹಿವಾಟು ಸ್ವೀಕೃತಿಗಳು | ಹಂತ 3 | - | - |
| ನಗದು ಮತ್ತು ನಗದು ಸಮಾನತೆಗಳು | ಹಂತ 3 | **228.84** | **825.60** |
| **ಒಟ್ಟು ಹಣಕಾಸು ಸ್ವತ್ತುಗಳು** | | **228.84** | **825.60** |
| **ಹಣಕಾಸು ಹೊಣೆಗಾರಿಕೆಗಳು** | | | |
| ಎರವಲುಗಳು | ಹಂತ 3 | - | - |
| ವಹಿವಾಟು ಪಾವತಿಸಬೇಕಾದವುಗಳು | ಹಂತ 3 | - | - |
| ಇತರ ಹಣಕಾಸು ಹೊಣೆಗಾರಿಕೆಗಳು | ಹಂತ 3 | - | - |
| **ಒಟ್ಟು ಹಣಕಾಸು ಹೊಣೆಗಾರಿಕೆಗಳು** | | - | - |

**ಹಂತ 1 –** ಒಂದೇ ರೀತಿಯ ಸ್ವತ್ತುಗಳು ಅಥವಾ ಹೊಣೆಗಾರಿಕೆಗಳಿಗಾಗಿ ಸಕ್ರಿಯ ಮಾರುಕಟ್ಟೆಗಳಲ್ಲಿ ಉಲ್ಲೇಖಿಸಲಾದ ಬೆಲೆಗಳು (ಹೊಂದಾಣಿಕೆ ಮಾಡದ).

**ಹಂತ 2 –** ಹಂತ 1 ರೊಳಗೆ ಸೇರಿಸಲಾದ ಉಲ್ಲೇಖಿಸಲಾದ ಬೆಲೆಗಳನ್ನು ಹೊರತುಪಡಿಸಿ, ಆಸ್ತಿ ಅಥವಾ ಹೊಣೆಗಾರಿಕೆಗೆ ಗಮನಿಸಬಹುದಾದ, ನೇರವಾಗಿ (ಅಂದರೆ ಬೆಲೆಗಳಾಗಿ) ಅಥವಾ ಪರೋಕ್ಷವಾಗಿ (ಅಂದರೆ ಬೆಲೆಗಳಿಂದ ಪಡೆಯಲಾಗಿದೆ).

**ಹಂತ 3 –** ಗಮನಿಸಬಹುದಾದ ಮಾರುಕಟ್ಟೆ ಡೇಟಾವನ್ನು ಆಧರಿಸಿರದ ಸ್ವತ್ತುಗಳು ಅಥವಾ ಹೊಣೆಗಾರಿಕೆಗಳಿಗೆ ಇನ್‌ಪುಟ್‌ಗಳು (ಗಮನಿಸಲಾಗದ ಇನ್‌ಪುಟ್‌ಗಳು).

**17. ವಿಭಾಗೀಯ ವರದಿ ಮಾಡುವಿಕೆ (ಸೆಗ್‌ಮೆಂಟ್ ರಿಪೋರ್ಟಿಂಗ್)**

ಕಂಪನಿಯು ಮೂಲಸೌಕರ್ಯ ಯೋಜನಾ ಅಭಿವೃದ್ಧಿ ಕಂಪನಿಯಾಗಿದ್ದು, ಕರ್ನಾಟಕದ ಬೆಂಗಳೂರಿನಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಕೈಗೊಳ್ಳಲು ಮಾತ್ರ ರಚಿಸಲಾಗಿದೆ.

ಕಂಪನಿಯು ಪ್ರಸ್ತುತ ಕರ್ನಾಟಕದೊಳಗೆ ಕಾರ್ಯನಿರ್ವಹಿಸುತ್ತದೆ ಮತ್ತು ವಿಭಿನ್ನ ಅಪಾಯಗಳು ಮತ್ತು ಆದಾಯದೊಂದಿಗೆ ಆರ್ಥಿಕ ಪರಿಸರಗಳಲ್ಲಿ ಕಾರ್ಯಾಚರಣೆಗಳು/ ಯೋಜನೆಗಳನ್ನು ಹೊಂದಿಲ್ಲ. ಆದ್ದರಿಂದ ಇದನ್ನು ಒಂದೇ ಭೌಗೋಳಿಕ ವಿಭಾಗ ಮತ್ತು ಕಾರ್ಯಾಚರಣೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಪರಿಗಣಿಸಲಾಗುತ್ತದೆ.

ಅದರಂತೆ, ಹಣಕಾಸು ಹೇಳಿಕೆಗಳಲ್ಲಿ ಕಂಡುಬರುವ ಮೊತ್ತಗಳು ಕಂಪನಿಯ ಒಂದೇ ವ್ಯವಹಾರ ವಿಭಾಗಕ್ಕೆ ಸಂಬಂಧಿಸಿವೆ.

**18. ಪೂರ್ವ ಪಾವತಿ (ಪ್ರಿಪೇಯ್ಡ್) ವಸ್ತುಗಳು:**

ರೂ.5,000/- ಕ್ಕಿಂತ ಹೆಚ್ಚಿನ ಪ್ರಿಪೇಯ್ಡ್ ವೆಚ್ಚಗಳ ವೈಯಕ್ತಿಕ ವಸ್ತುಗಳನ್ನು ಗುರುತಿಸಲಾಗುತ್ತದೆ.

**19. ಬೇನಾಮಿ ವಹಿವಾಟುಗಳು**

ಬೇನಾಮಿ ವಹಿವಾಟು (ನಿಷೇಧ) ಕಾಯ್ದೆ, 1988 (1988 ರ 45) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಯಾವುದೇ ಬೇನಾಮಿ ಆಸ್ತಿಯನ್ನು ಹೊಂದಿದ್ದಕ್ಕಾಗಿ ಕಂಪನಿಯ ವಿರುದ್ಧ ಯಾವುದೇ ಕ್ರಮಗಳು ಪ್ರಾರಂಭವಾಗಿಲ್ಲ ಅಥವಾ ಬಾಕಿ ಉಳಿದಿಲ್ಲ.

**20. ಸ್ಥಗಿತಗೊಳಿಸಿದ ಕಂಪನಿ**

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 248 ರ ಅಡಿಯಲ್ಲಿ ಸ್ಥಗಿತಗೊಳಿಸಲಾದ ಕಂಪನಿಗಳೊಂದಿಗೆ ಯಾವುದೇ ವಹಿವಾಟುಗಳನ್ನು ಹೊಂದಿಲ್ಲ.

**21. ಬಹಿರಂಗಪಡಿಸದ ಆದಾಯ**

ಕಂಪನಿಯು ಯಾವುದೇ ವಹಿವಾಟುಗಳನ್ನು ಹೊಂದಿಲ್ಲ, ಆದ್ದರಿಂದ ಆದಾಯ ತೆರಿಗೆ ಕಾಯ್ದೆ, 1961 ರ ಅಡಿಯಲ್ಲಿ ತೆರಿಗೆ ಮೌಲ್ಯಮಾಪನಗಳಲ್ಲಿ (ಶೋಧನೆ ಅಥವಾ ಸಮೀಕ್ಷೆ ಅಥವಾ ಆದಾಯ ತೆರಿಗೆ ಕಾಯ್ದೆ, 1961 ರ ಯಾವುದೇ ಇತರ ಸಂಬಂಧಿತ ನಿಬಂಧನೆಗಳಂತಹ) ವರ್ಷದಲ್ಲಿ ಶರಣಾಗತ ಅಥವಾ ಆದಾಯವಾಗಿ ಬಹಿರಂಗಪಡಿಸಲಾದ ಲೆಕ್ಕ ಪತ್ರಗಳ ಪುಸ್ತಕಗಳಲ್ಲಿ ದಾಖಲಾಗಿಲ್ಲ.

**22. ಕ್ರಿಪ್ಟೋ ಹಣ (ಕರೆನ್ಸಿ) ಅಥವಾ ವರ್ಚುವಲ್ ಕರೆನ್ಸಿ**

ಕಂಪನಿಯು ಹಣಕಾಸು ವರ್ಷದಲ್ಲಿ ಕ್ರಿಪ್ಟೋ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿಯಲ್ಲಿ ವ್ಯಾಪಾರ ಮಾಡಿಲ್ಲ ಅಥವಾ ಹೂಡಿಕೆ ಮಾಡಿಲ್ಲ.

**23.** ಮಾರ್ಚ್ 31, 2024 ರಂತೆ, ಕಂಪನಿಯು ಭದ್ರತೆಯ ಆಧಾರದ ಮೇಲೆ ಬ್ಯಾಂಕುಗಳು / ಹಣಕಾಸು ಸಂಸ್ಥೆಗಳಿಂದ 5 ಕೋಟಿ ರೂ.ಗಳಿಗಿಂತ ಹೆಚ್ಚಿನ ಸಾಲಗಳಿಗೆ ಯಾವುದೇ ಅನುಮೋದಿತ ಕಾರ್ಯ ಬಂಡವಾಳ ಮಿತಿಯನ್ನು ಹೊಂದಿಲ್ಲ ಮತ್ತು ಅದಕ್ಕೆ ಅನುಗುಣವಾಗಿ, ಯಾವುದೇ ಬ್ಯಾಂಕ್ / ಹಣಕಾಸು ಸಂಸ್ಥೆಗೆ ತ್ರೈಮಾಸಿಕ ಸಲ್ಲಿಕೆ (ರಿಟರ್ನ್‌ಗಳು) ಗಳನ್ನು ಸಲ್ಲಿಸುವುದು ಉದ್ಭವಿಸುವುದಿಲ್ಲ ಆದ್ದರಿಂದ, ಅಂತಹ ತ್ರೈಮಾಸಿಕ ಸಲ್ಲಿಕೆಗಳು (ರಿಟರ್ನ್‌ಗಳು) ಮೇಲೆ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು ಅನ್ವಯಿಸುವುದಿಲ್ಲ.

**24. ಬ್ಯಾಲೆನ್ಸ್ ಶೀಟ್ ದಿನಾಂಕದ ನಂತರ ಸಂಭವಿಸುವ ಘಟನೆಗಳು**

ಬ್ಯಾಲೆನ್ಸ್ ಶೀಟ್ ದಿನಾಂಕದ ನಂತರ ಸಂಭವಿಸುವ ಯಾವುದೇ ಅಂಶಗಳು ಘಟಿಸಿರುವುದಿಲ್ಲ. ಆದ್ದರಿಂದ ಇದನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ.

**25.** ಮಂಡಳಿಯ ಅಭಿಪ್ರಾಯದಲ್ಲಿ, ಪ್ರಸ್ತುತ ಆಸ್ತಿಗಳು, ಸಾಲಗಳು ಮತ್ತು ಮುಂಗಡಗಳು ಸಾಮಾನ್ಯ ವ್ಯವಹಾರದ ಸಂದರ್ಭದಲ್ಲಿ ಅರಿತುಕೊಂಡರೆ ಲೆಕ್ಕಪತ್ರಗಳಲ್ಲಿ ಹೇಳಲಾದ ಮೌಲ್ಯಕ್ಕಿಂತ ಕಡಿಮೆಯಿಲ್ಲ.

**26.** ಎಲ್ಲಾ ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗಾಗಿ ಕಂಪನಿಯು ಲೆಕ್ಕಪತ್ರ ತಂತ್ರಾಂಶ (ಸಾಫ್ಟ್‌ವೇರ್) ಅನ್ನು ಬಳಸಿದೆ. ಲೆಕ್ಕಪತ್ರ ಸಾಫ್ಟ್‌ವೇರ್‌ಗಾಗಿ ಅರ್ಜಿ ಮಟ್ಟದಲ್ಲಿ ಪರಿಶೋಧನಾ ಜಾಡು (ಆಡಿಟ್ ಟ್ರಯಲ್) (ದಾಖಲೆಗಳನ್ನು ಸಂಪಾದಿಸಿ) ಸಾಫ್ಟ್‌ವೇರ್‌ನಲ್ಲಿ ದಾಖಲಿಸಲಾದ ಎಲ್ಲಾ ಸಂಬಂಧಿತ ವಹಿವಾಟುಗಳಿಗೆ ಕಾರ್ಯನಿರ್ವಹಿಸುತ್ತಿತ್ತು.

**27.** ಆಗಸ್ಟ್ 5, 2022 ರಂದು ತಿದ್ದುಪಡಿ ಮಾಡಲಾದ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014 ರ ನಿಯಮ 3 ರ ಪ್ರಕಾರ, ಎಲೆಕ್ಟ್ರಾನಿಕ್ ಲೆಕ್ಕಗಳ ಎಲೆಕ್ಟ್ರಾನಿಕ್ ಪುಸ್ತಕಗಳು ಮತ್ತು ಇತರ ಸಂಬಂಧಿತ ಪುಸ್ತಕಗಳು ಮತ್ತು ಪತ್ರಿಕೆಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಭಾರತದಲ್ಲಿ ಎಲ್ಲಾ ಸಮಯದಲ್ಲೂ ಪ್ರವೇಶಿಸಬಹುದು, ಆದಾಗ್ಯೂ ಎಲೆಕ್ಟ್ರಾನಿಕ್ ಮೋಡ್‌ನಲ್ಲಿ ನಿರ್ವಹಿಸಲಾದ ಲೆಕ್ಕಪತ್ರಗಳ ಪುಸ್ತಕಗಳು ಮತ್ತು ಇತರ ಪುಸ್ತಕಗಳು ಮತ್ತು ಪತ್ರಿಕೆಗಳ ಆಧಾರ (ಬ್ಯಾಕಪ್) ವನ್ನು ಭಾರತದಲ್ಲಿ ಭೌತಿಕವಾಗಿ ನೆಲೆಗೊಂಡಿರುವ ಸರ್ವರ್‌ಗಳಲ್ಲಿ ದೈನಂದಿನ ಆಧಾರದ ಮೇಲೆ ನಿರ್ವಹಿಸಲಾಗಿಲ್ಲ.

**28.** ಪ್ರಸ್ತುತ ವರ್ಷದ ವರ್ಗೀಕರಣದೊಂದಿಗೆ ದೃಢೀಕರಿಸಲು ಅಗತ್ಯವಿರುವಲ್ಲೆಲ್ಲಾ ಹಿಂದಿನ ವರ್ಷದ ಅಂಕಿಅಂಶಗಳನ್ನು ಮರುಸಂಘಟಿಸಲಾಗಿದೆ/ಮರುವರ್ಗೀಕರಿಸಲಾಗಿದೆ.

**ನಮ್ಮ ವರದಿಯಲ್ಲಿ ಲಗತ್ತಿಸಲಾದ ವಿವರದಂತೆ**

**ಬಿ.ಎನ್. ಪೈ & ಕಂಪನಿ ಪರವಾಗಿ,**
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆ ನೋಂದಣಿ ಸಂಖ್ಯೆ 008851-S

**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ನಿಯಮಿತದ**
**ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ ಮತ್ತು ಪರವಾಗಿ**

**ಸಹಿ/–**
**ಅಂ ಬಿ. ನಾಗೇಶ್ ಪೈ**
ಪಾಲುದಾರ
ಸದಸ್ಯತ್ವ ಸಂ: 204014

**ಸಹಿ/–**
**ರಾಜೇಶ್ ಕುಮಾರ್ ಸಿಂಗ್**
ನಿರ್ದೇಶಕರು
ಡಿಐಎನ್: 08601529

**ಸಹಿ/–**
**ಅವಧೇಶ್ ಮೆಹ್ತಾ**
ನಿರ್ದೇಶಕರು
ಡಿಐಎನ್: 09564884

ಸ್ಥಳ: ಬೆಂಗಳೂರು
ದಿನಾಂಕ: 06.10.2025
ಯುಡಿಐಎನ್ ಸಂಖ್ಯೆ: 25204014BMHWDU6086

ಸ್ಥಳ: ಬೆಂಗಳೂರು
ದಿನಾಂಕ: 06.10.2025

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
## ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ ಎಲ್ಲಾ ಮೊತ್ತಗಳು ಭಾರತೀಯ ರೂಪಾಯಿಯ ಲಕ್ಷಗಳಲ್ಲಿ)

**ಟಿಪ್ಪಣಿ: 5ಎ: ವಹಿವಾಟು ಪಾವತಿಗಳು**

(ರೂ. ಲಕ್ಷಗಳಲ್ಲಿ)

| ವಿವರಗಳು | ಮಾರ್ಚ್ 31, 2025 ರಂತೆ | | | | | |
|---|---|---|---|---|---|---|
| | ಬಾಕಿ ಉಳಿದಿಲ್ಲ | 1 ವರ್ಷಕ್ಕಿಂತ ಕಡಿಮೆ | 1–2 ವರ್ಷಗಳು | 2–3 ವರ್ಷಗಳು | 3 ವರ್ಷಗಳಿಗಿಂತ ಹೆಚ್ಚು | ಒಟ್ಟು |
| **ವ್ಯಾಪಾರ ಪಾವತಿಗಳು:** | | | | | | |
| (i) ಎಂಎಸ್ಎಂಇ ಯ ಒಟ್ಟು ಬಾಕಿ ಬಾಕಿಗಳು | - | - | - | - | - | - |
| (ii) ಎಂಎಸ್ಎಂಇ ಹೊರತುಪಡಿಸಿ ಇತರ ಸಾಲಗಾರರ ಒಟ್ಟು ಬಾಕಿ ಬಾಕಿಗಳು | - | - | - | - | - | - |
| (iii) ವಿವಾದಿತ ಬಾಕಿಗಳು – ಎಂಎಸ್ಎಂಇ | - | - | - | - | - | - |
| (iv) ವಿವಾದಿತ ಬಾಕಿಗಳು+ ಇತರೆ | - | - | - | - | - | - |

| ವಿವರಗಳು | ಮಾರ್ಚ್ 31, 2024 ರಂತೆ | | | | | |
|---|---|---|---|---|---|---|
| | ಬಾಕಿ ಉಳಿದಿಲ್ಲ | 1 ವರ್ಷಕ್ಕಿಂತ ಕಡಿಮೆ | 1–2 ವರ್ಷಗಳು | 2–3 ವರ್ಷಗಳು | 3 ವರ್ಷಗಳಿಗಿಂತ ಹೆಚ್ಚು | ಒಟ್ಟು |
| **ವ್ಯಾಪಾರ ಪಾವತಿಗಳು:** | | | | | | |
| (i) ಎಂಎಸ್ಎಂಇ ಯ ಒಟ್ಟು ಬಾಕಿ ಬಾಕಿಗಳು | - | - | - | - | - | - |
| (ii) ಎಂಎಸ್ಎಂಇ ಹೊರತುಪಡಿಸಿ ಇತರ ಸಾಲಗಾರರ ಒಟ್ಟು ಬಾಕಿ ಬಾಕಿಗಳು | - | - | - | - | - | - |
| (iii) ವಿವಾದಿತ ಬಾಕಿಗಳು – ಎಂಎಸ್ಎಂಇ | - | - | - | - | - | - |
| (iv) ವಿವಾದಿತ ಬಾಕಿಗಳು+ ಇತರೆ | - | - | - | - | - | - |

| ವಿವರಗಳು | ಮಾರ್ಚ್ 31, 2023 ರಂತೆ | | | | | |
|---|---|---|---|---|---|---|
| | ಇನ್ನೂ ಬಾಕಿ ಉಳಿದಿಲ್ಲ | 1 ವರ್ಷಕ್ಕಿಂತ ಕಡಿಮೆ | 1–2 ವರ್ಷಗಳು | 2–3 ವರ್ಷಗಳು | 3 ವರ್ಷಗಳಿಗಿಂತ ಹೆಚ್ಚು | ಒಟ್ಟು |
| **ವ್ಯಾಪಾರ ಪಾವತಿಗಳು:** | | | | | | |
| (i) ಎಂಎಸ್ಎಂಇ ಯ ಒಟ್ಟು ಬಾಕಿ ಬಾಕಿಗಳು | **17.56** | - | - | - | - | **17.56** |
| (ii) ಎಂಎಸ್ಎಂಇ ಹೊರತುಪಡಿಸಿ ಇತರ ಸಾಲಗಾರರ ಒಟ್ಟು ಬಾಕಿ ಬಾಕಿಗಳು | - | - | - | - | - | - |
| (iii) ವಿವಾದಿತ ಬಾಕಿಗಳು – ಎಂಎಸ್ಎಂಇ | - | - | - | - | - | - |
| (iv) ವಿವಾದಿತ ಬಾಕಿಗಳು+ ಇತರೆ | - | - | - | - | - | - |

## ಅನುಬಂಧ - I

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಹಣಕಾಸು ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು

(ಬೇರೆ ರೀತಿಯಲ್ಲಿ ಹೇಳಿದ್ದನ್ನು ಹೊರತುಪಡಿಸಿ ಎಲ್ಲಾ ಮೊತ್ತಗಳು ಭಾರತೀಯ ರೂಪಾಯಿಗಳಲ್ಲಿ)

### Ind AS ಅನ್ನು ಮೊದಲ ಬಾರಿಗೆ ಅಳವಡಿಸಿಕೊಳ್ಳಲಾಗಿದೆ

ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷಕ್ಕೆ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತದ ಈ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು IND AS ಗೆ ಅನುಗುಣವಾಗಿ ತಯಾರಿಸಲಾಗಿದೆ. ಇದು IND AS ಗೆ ಅನುಗುಣವಾಗಿ ಕಂಪನಿಯ ಮೊದಲ ಹಣಕಾಸು ಹೇಳಿಕೆಗಳ ಸೆಟ್ ಆಗಿದೆ. IND AS ಗೆ ಪರಿವರ್ತನೆಯ ಉದ್ದೇಶಕ್ಕಾಗಿ, ಕಂಪನಿಯು IND AS 101 ರಲ್ಲಿ ಸೂಚಿಸಲಾದ ಮಾರ್ಗದರ್ಶನವನ್ನು ಅನುಸರಿಸಿದೆ– ಏಪ್ರಿಲ್ 1, 2023 ಅನ್ನು ಪರಿವರ್ತನೆ ದಿನಾಂಕವಾಗಿ ಮತ್ತು IGAAP ಅನ್ನು ಹಿಂದಿನ GAAP ಆಗಿ ಮೊದಲ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿದೆ.

IND AS ಗೆ ಪರಿವರ್ತನೆಯು ಹಣಕಾಸು ಹೇಳಿಕೆಗಳ ಪ್ರಸ್ತುತಿ, ಟಿಪ್ಪಣಿಗಳಲ್ಲಿನ ಬಹಿರಂಗಪಡಿಸುವಿಕೆಗಳು ಮತ್ತು ಲೆಕ್ಕಪತ್ರ ನೀತಿಗಳು ಮತ್ತು ತತ್ವಗಳಲ್ಲಿ ಬದಲಾವಣೆಗಳಿಗೆ ಕಾರಣವಾಗಿದೆ. ಟಿಪ್ಪಣಿ–1 ರಲ್ಲಿ ನಿಗದಿಪಡಿಸಿದ ಲೆಕ್ಕಪತ್ರ ನೀತಿಗಳು ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷಕ್ಕೆ.

ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ಮತ್ತು ತುಲನಾತ್ಮಕ ಮಾಹಿತಿಯನ್ನು ಅನ್ವಯಿಸಲಾಗಿದೆ. ಹಿಂದಿನ GAAP ನಿಂದ IND AS ಗೆ ಪರಿವರ್ತನೆಯು ಕಂಪನಿಯ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ಕೆಳಗೆ ಉಲ್ಲೇಖಿಸಿದಂತೆ IND AS 101 ಗೆ ಅನುಗುಣವಾಗಿ ಪಡೆದÀ IND AS ಅನ್ನು ಮೊದಲ ಬಾರಿಗೆ ಅಳವಡಿಸಿಕೊಳ್ಳುವಲ್ಲಿ ಹೇಗೆ ಪರಿಣಾಮ ಬೀರಿದೆ ಎಂಬುದರ ವಿವರಣೆ.

### ಸಮನ್ವಯಗಳು

IGAAP ನಿಂದ Ind AS ಗೆ ಪರಿವರ್ತನೆಯ ಪರಿಣಾಮವನ್ನು ಈ ಕೆಳಗಿನ ಸಮನ್ವಯಗಳು ಒದಗಿಸುತ್ತವೆ:

ಎ. ಏಪ್ರಿಲ್ 1, 2023 ಮತ್ತು ಮಾರ್ಚ್ 31, 2024 ರಂತೆ ಇಕ್ವಿಟಿ

ಬಿ. ಮಾರ್ಚ್ 31, 2024 ಕ್ಕೆ ಕೊನೆಗೊಂಡ ವರ್ಷದ ಒಟ್ಟು ಸಮಗ್ರ ಆದಾಯ

ಸಿ. ಏಪ್ರಿಲ್ 1, 2023 ಮತ್ತು ಮಾರ್ಚ್ 31, 2024 ರಂತೆ ಒಟ್ಟು ಇಕ್ವಿಟಿ

ಡಿ. ಮಾರ್ಚ್ 31, 2024 ಕ್ಕೆ ಕೊನೆಗೊಂಡ ವರ್ಷದ ನಿವ್ವಳ ಲಾಭ

**(ಎ) ಇಕ್ವಿಟಿ ಸಮನ್ವಯ**

| ವಿವರಗಳು | ಮಾರ್ಚ್ 31, 2024 ರಂತೆ | ಮಾರ್ಚ್ 31, 2023 ರಂತೆ |
|---|---|---|
| ಹಿಂದಿನ GAAP ಅಡಿಯಲ್ಲಿ ವರದಿ ಮಾಡಲಾದ ಇಕ್ವಿಟಿ | 6,43,777 | 7,82,726 |
| Ind AS ಹೊಂದಾಣಿಕೆಗಳು | - | - |
| **ನ್ಯಾಯೋಚಿತ ಮೌಲ್ಯ ಹೊಂದಾಣಿಕೆಗಳು:** | - | - |
| **Ind AS ಪ್ರಕಾರ ಈಕ್ವಿಟಿ** | **6,43,777** | **7,82,726** |

**(ಬಿ) ಮಾರ್ಚ್ 31, 2024 ಕ್ಕೆ ಕೊನೆಗೊಂಡ ವರ್ಷ/ಅವಧಿಗೆ ಒಟ್ಟು ಸಮಗ್ರ ಆದಾಯ**

| ವಿವರಗಳು | ಮಾರ್ಚ್ 31, 2024 ರಂತೆ |
|---|---|
| ಹಿಂದಿನ GAAP ಪ್ರಕಾರ ತೆರಿಗೆ ನಂತರದ ಲಾಭ | (1,38,950) |
| Ind AS ಹೊಂದಾಣಿಕೆಗಳು | - |
| **ನ್ಯಾಯಯುತ ಮೌಲ್ಯ ಹೊಂದಾಣಿಕೆಗಳು:** | - |
| Ind AS ಪ್ರಕಾರ ತೆರಿಗೆ ನಂತರದ ನಿವ್ವಳ ಲಾಭ | (1,38,950) |
| ಇತರ ಸಮಗ್ರ ಆದಾಯ (ತೆರಿಗೆಯ ನಿವ್ವಳ) | - |
| **Ind AS ಪ್ರಕಾರ ಒಟ್ಟು ಸಮಗ್ರ ಆದಾಯ** | **(1,38,950)** |

**ಹಿಂದಿನ GAAP ಮತ್ತು Ind AS ನಡುವಿನ ಸಮನ್ವಯಗಳಿಗೆ ಟಿಪ್ಪಣಿಗಳು:**

**ವಸ್ತು ಮರುಸಂಘಟನೆ**

ಈ ಹಣಕಾಸು ಹೇಳಿಕೆಗಳಲ್ಲಿ, ಅಗತ್ಯವಿರುವಲ್ಲೆಲ್ಲಾ, ಆದಾಯ, ವೆಚ್ಚಗಳು, ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಅನುಗುಣವಾದ ವಸ್ತುಗಳನ್ನು ಮರುವರ್ಗೀಕರಿಸುವ ಮೂಲಕ, ಅವುಗಳನ್ನು Ind AS ನ ಅವಶ್ಯಕತೆಗಳಿಗೆ ಅನುಗುಣವಾಗಿ ತರಲು ಸೂಕ್ತ ಹೊಂದಾಣಿಕೆಗಳನ್ನು ಮಾಡಲಾಗಿದೆ.

Ind AS ಗೆ ಅನುಗುಣವಾಗಿ ನಿಜವಾದ ಮತ್ತು ನ್ಯಾಯಯುತ ನೋಟವನ್ನು ನೀಡಲು ಹಿಂದಿನ GAAP ಅಡಿಯಲ್ಲಿ ಆಡಿಟ್ ಮಾಡಲಾದ ಹಣಕಾಸು ಹೇಳಿಕೆಗಳಿಗೆ ಅಗತ್ಯವಾದ Ind AS ಹೊಂದಾಣಿಕೆಗಳನ್ನು ಮಾಡಿದ ನಂತರ ಹಣಕಾಸು ಹೇಳಿಕೆಗಳಲ್ಲಿ ನೀಡಲಾದ ತುಲನಾತ್ಮಕಗಳನ್ನು ಸಂಕಲಿಸಲಾಗಿದೆ.

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಹಣಕಾಸು ಹೇಳಿಕೆಗಳ ಭಾಗವಾಗಿ ರೂಪಿಸುವ ಟಿಪ್ಪಣಿಗಳು

**IGAAP** ಅಡಿಯಲ್ಲಿ ಹಿಂದೆ ವರದಿ ಮಾಡಲಾದ ಇಕ್ವಿಟಿಯನ್ನು IND AS ಗೆ ಸಮನ್ವಯಗೊಳಿಸುವುದು.

| ವಿವರಗಳು | 31.3.24 ಕ್ಕೆ ಕೊನೆಗೊಳ್ಳುವ ವರ್ಷದ ಹಿಂದಿನ GAAP | ಹೊಂದಾಣಿಕೆಗಳು | 31.3.24 ಕ್ಕೆ ಕೊನೆಗೊಳ್ಳುವ IND AS | 31.3.23 ಕ್ಕೆ ಕೊನೆಗೊಳ್ಳುವ ವರ್ಷದ ಹಿಂದಿನ GAAP | ಹೊಂದಾಣಿಕೆಗಳು | 31.3.23 ಕ್ಕೆ ಕೊನೆಗೊಳ್ಳುವ ವರ್ಷದ ಹಿಂದಿನ IND AS |
|---|---|---|---|---|---|---|
| **ಸ್ವತ್ತುಗಳು** | | | | | | |
| ಪ್ರಸ್ತುತವಲ್ಲದ ಸ್ವತ್ತುಗಳು | | | | | | |
| (ಎ) ಆಸ್ತಿ, ಸ್ಥಾವರ ಮತ್ತು ಉಪಕರಣಗಳು | | - | | | - | |
| (ಬಿ) ಪ್ರಗತಿಯಲ್ಲಿರುವ ಬಂಡವಾಳ ಕೆಲಸ | | - | | | - | |
| (ಸಿ) ಬಳಕೆಯ ಹಕ್ಕು ಸ್ವತ್ತುಗಳು | | - | | | - | |
| (ಡಿ) ಇತರ ಅಮೂರ್ತ ಸ್ವತ್ತುಗಳು | | - | | | - | |
| (ಇ) ಅಭಿವೃದ್ಧಿಯಲ್ಲಿರುವ ಅಮೂರ್ತ ಸ್ವತ್ತುಗಳು | | - | | | | |
| (ಇ) ಹಣಕಾಸು ಸ್ವತ್ತುಗಳು | | | | | | |
| (ಐ) ಹೂಡಿಕೆಗಳು | | - | | | - | |
| i) ಇತರ ಹಣಕಾಸು ಸ್ವತ್ತುಗಳು | | - | | | - | |
| (ಎಫ್) ಮುಂದೂಡಲ್ಪಟ್ಟ ತೆರಿಗೆ ಸ್ವತ್ತುಗಳು (ನಿವ್ವಳ) | | - | | | - | |
| (ಜಿ) ಇತರ ಪ್ರಸ್ತುತವಲ್ಲದ ಸ್ವತ್ತುಗಳು | | - | | | - | |
| **ಒಟ್ಟು** | - | - | - | - | - | - |
| **ಪ್ರಸ್ತುತ ಸ್ವತ್ತುಗಳು** | | | | | | |
| (ಎ) ದಾಸ್ತಾನುಗಳು | | - | | | - | |
| (ಬಿ) ಹಣಕಾಸು ಸ್ವತ್ತುಗಳು | | | | | | |
| (i) ವಹಿವಾಟು ಸ್ವೀಕೃತಿಗಳು | | - | | | - | |
| (ii) ನಗದು ಮತ್ತು ನಗದು ಸಮಾನತೆಗಳು | **825.60** | **-** | **825.60** | **826.25** | **-** | **826.25** |
| (iii) ಇತರ ಬ್ಯಾಂಕ್ ಬ್ಯಾಲೆನ್ಸ್‌ಗಳು | | - | | | - | |
| (iv) ಇತರ ಹಣಕಾಸು ಸ್ವತ್ತುಗಳು | | - | | | - | |
| (ಸಿ) ಪ್ರಸ್ತುತ ತೆರಿಗೆ ಸ್ವತ್ತುಗಳು (ನಿವ್ವಳ) | | - | | | - | |
| (ಡಿ) ಇತರ ಪ್ರಸ್ತುತ ಸ್ವತ್ತುಗಳು | | - | | | - | |
| **ಒಟ್ಟು** | **825.60** | **-** | **825.60** | **826.25** | **-** | **826.25** |
| **ಒಟ್ಟು ಆಸ್ತಿಗಳು** | 825.60 | - | 825.60 | 826.25 | - | 826.25 |
| II. ಇಕ್ವಿಟಿ ಮತ್ತು ಹೊಣೆಗಾರಿಕೆಗಳು | | | | | | |
| (1) ಇಕ್ವಿಟಿ | | | | | | |
| (ಎ) ಇಕ್ವಿಟಿ ಷೇರು ಬಂಡವಾಳ | 1,000.00 | - | 1,000.00 | 1,000.00 | - | 1,000.00 |
| (ಬಿ) ಇತರ ಇಕ್ವಿಟಿ | (356.22) | - | (356.22) | (217.27) | - | (217.27) |
| **ಒಟ್ಟು ಇಕ್ವಿಟಿ** | 643.78 | - | 643.78 | 782.73 | - | 782.73 |
| (2) ಹೊಣೆಗಾರಿಕೆಗಳು | | | | | | |
| (i) ಪ್ರಸ್ತುತವಲ್ಲದ ಹೊಣೆಗಾರಿಕೆಗಳು | | | | | | |
| (ಎ) ಹಣಕಾಸಿನ ಹೊಣೆಗಾರಿಕೆಗಳು | | | | | | |
| (i) ಸಾಲಗಳು | | - | | | - | |
| (ii) ಗುತ್ತಿಗೆ ಹೊಣೆಗಾರಿಕೆಗಳು | | - | | | - | |
| (iii) ಇತರ ಹಣಕಾಸು ಹೊಣೆಗಾರಿಕೆಗಳು | | - | | | - | |
| (ಬಿ) ಇತರ ಪ್ರಸ್ತುತವಲ್ಲದ ಹೊಣೆಗಾರಿಕೆಗಳು | | - | | | - | |
| (ಸಿ) ನಿಬಂಧನೆಗಳು – ಪ್ರಸ್ತುತವಲ್ಲದ | | - | | | - | |
| **ಒಟ್ಟು** | - | - | - | - | - | - |
| (ii) ಪ್ರಸ್ತುತ ಹೊಣೆಗಾರಿಕೆಗಳು | | | | | | |
| (ಎ) ಹಣಕಾಸಿನ ಹೊಣೆಗಾರಿಕೆಗಳು | | | | | | |
| (i) ಸಾಲಗಳು | | - | | | - | |
| (ii) ಗುತ್ತಿಗೆ ಹೊಣೆಗಾರಿಕೆಗಳು | | - | | | - | |
| (iii) ವಹಿವಾಟು ಪಾವತಿಗಳು | | | | | - | |
| – ಎಂಎಸ್‌ಎಂಇ ಯ ಒಟ್ಟು ಬಾಕಿ ಬಾಕಿಗಳು | | - | | | - | |
| – ಎಂಎಸ್‌ಎಂಇ ಹೊರತುಪಡಿಸಿ ಇತರ ಸಾಲಗಾರರ ಒಟ್ಟು ಬಾಕಿ ಬಾಕಿಗಳು | | - | | 17.56 | - | 17.56 |
| (ಬಿ) ಇತರ ಪ್ರಸ್ತುತ ಹೊಣೆಗಾರಿಕೆಗಳು | 181.83 | - | 181.83 | 25.96 | - | 25.96 |
| (ಸಿ) ನಿಬಂಧನೆಗಳು – ಪ್ರಸ್ತುತ | | - | | | - | |
| **ಒಟ್ಟು** | **181.83** | **-** | **181.83** | **43.52** | **-** | **43.52** |
| ಒಟ್ಟು ಇಕ್ವಿಟಿ ಮತ್ತು ಹೊಣೆಗಾರಿಕೆಗಳು | **825.60** | **-** | **825.60** | **826.25** | **-** | **826.25** |

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
# ಹಣಕಾಸು ಹೇಳಿಕೆಗಳ ಭಾಗವಾಗಿ ರೂಪಿಸುವ ಟಿಪ್ಪಣಿಗಳು

**ಲಾಭ ಮತ್ತು ನಷ್ಟದ ಹೇಳಿಕೆಯ ಮೇಲಿನ ಪರಿಣಾಮಕ್ಕಾಗಿ ಹಿಂದಿನ GAAP ಮತ್ತು IND AS ನಡುವಿನ ಸಮನ್ವಯ.**

| ವಿವರಗಳು | ಟಿಪ್ಪಣಿ ಸಂಖ್ಯೆ. | 31.3.24 ಕ್ಕೆ ಕೊನೆಗೊಳ್ಳುವ ವರ್ಷದ ಹಿಂದಿನ GAAP | ಹೊಂದಾಣಿಕೆಗಳು | 31.3.24 ಕ್ಕೆ ಕೊನೆಗೊಳ್ಳುವ ವರ್ಷದ IND AS |
|---|---|---|---|---|
| **ಆದಾಯ:** | | | | |
| ಕಾರ್ಯಾಚರಣೆಗಳಿಂದ ಬರುವ ಆದಾಯ | | - | - | - |
| ಇತರ ಆದಾಯ | | - | - | - |
| **ಒಟ್ಟು ಆದಾಯ** | | - | - | - |
| | | | | |
| **ವೆಚ್ಚಗಳು:** | | | | |
| ಕಾರ್ಯಾಚರಣಾ ವೆಚ್ಚಗಳು | | | - | |
| ನೌಕರರ ಸೌಲಭ್ಯ ವೆಚ್ಚಗಳು | | | - | |
| ಹಣಕಾಸು ವೆಚ್ಚಗಳು | | | - | |
| ಸವಕಳಿ ಮತ್ತು ಭೋಗ್ಯ ವೆಚ್ಚಗಳು | | | - | |
| ಇತರ ವೆಚ್ಚಗಳು | 8 | 138.95 | (0.00) | 138.95 |
| **ಒಟ್ಟು ವೆಚ್ಚಗಳು** | | **138.95** | **(0.00)** | **138.95** |
| | | | | |
| ಅಸಾಧಾರಣ ವಸ್ತುಗಳು ಮತ್ತು ತೆರಿಗೆಗೆ ಮುಂಚಿನ ಲಾಭ | | (138.95) | 0.00 | (138.95) |
| ಅಸಾಧಾರಣ ವಸ್ತುಗಳು | | | | - |
| ತೆರಿಗೆಗೆ ಮುಂಚಿನ ಲಾಭ | | **(138.95)** | **0.00** | **(138.95)** |
| **ತೆರಿಗೆ ವೆಚ್ಚಗಳು:** | | | | |
| (1) ಪ್ರಸ್ತುತ ತೆರಿಗೆ | | | | - |
| (2) ಮುಂದೂಡಲ್ಪಟ್ಟ ತೆರಿಗೆ | | | - | |
| ತೆರಿಗೆ ನಂತರದ ಲಾಭ | | **(138.95)** | **0.00** | **(138.95)** |
| | | | | |
| **ಇತರ ಸಮಗ್ರ ಆದಾಯ/(ನಷ್ಟ)** | | - | - | |
| ಎ. (i) ಲಾಭ ಅಥವಾ ನಷ್ಟಕ್ಕೆ ಮರುವರ್ಗೀಕರಿಸದ ವಸ್ತುಗಳು | | | | - |
| (ii) ಲಾಭ ಅಥವಾ ನಷ್ಟಕ್ಕೆ ಮರುವರ್ಗೀಕರಿಸದ ವಸ್ತುಗಳಿಗೆ ಸಂಬಂಧಿಸಿದ ಆದಾಯ ತೆರಿಗೆ | | | | - |
| ಬಿ. ಲಾಭ ಅಥವಾ ನಷ್ಟಕ್ಕೆ ಮರುವರ್ಗೀಕರಿಸಲಾಗುವ ವಸ್ತುಗಳು | | - | - | - |
| **ಒಟ್ಟು ಇತರ ಸಮಗ್ರ ಆದಾಯ/ (ನಷ್ಟ)** | | **-** | **-** | **(138.95)** |
| **ವರ್ಷದ ಒಟ್ಟು ಸಮಗ್ರ ಆದಾಯ** | | | | |

# ಕಂಪನಿಯ ಅಧಿನಿಯಮ 2013, ಕಾಲಂ 143 (6)(ಬಿ)ರ ಅಡಿಯಲ್ಲಿ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಬಿ–ರೈಡ್) ನ ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳ ಕುರಿತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ನೀಡಿರುವ ಕಾಮೆಂಟ್‌ಗಳು (ಟಿಪ್ಪಣಿಗಳು)

ಕಂಪನಿ ಕಾಯ್ದೆ, 2013 (ಆಕ್ಟ್) ಅಡಿಯಲ್ಲಿ ನಿಗದಿಪಡಿಸಲಾದ ಹಣಕಾಸು ವರದಿ ಚೌಕಟ್ಟಿನ ಪ್ರಕಾರ, ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷಕ್ಕೆ **ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ** (ಬಿ–ರೈಡ್) ನ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ಮಂಡಳಿಯ  ಜವಾಬ್ದಾರಿಯಾಗಿದೆ. ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲರು ನೇಮಕ ಮಾಡಿದ ಶಾಸನಬದ್ಧ ಲೆಕ್ಕಪರಿಶೋಧಕರು, ಕಾಯ್ದೆಯ ಸೆಕ್ಷನ್ 143(10ರ ಅಡಿಯಲ್ಲಿ ನಿಗದಿಪಡಿಸಲಾದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಕಾಯ್ದೆಯ ಸೆಕ್ಷನ್ 143 ರ ಅಡಿಯಲ್ಲಿ ಹಣಕಾಸು ಹೇಳಿಕೆಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇದನ್ನು ಅವರು ಡಿಸೆಂಬರ್ 01, 2025 ರ ದಿನಾಂಕದ ಅವರ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ಮಾಡಿದ್ದಾರೆ ಎಂದು ಹೇಳಲಾಗಿದೆ, ಇದು ಅವರ ಹಿಂದಿನ ಅಕ್ಟೋಬರ್ 06, 2025 ರ ದಿನಾಂಕದ ಲೆಕ್ಕಪರಿಶೋಧನಾ ವರದಿಯನ್ನು ಬದಲಾಯಿಸುತ್ತದೆ.

ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲರ (ಸಿ&ಎಜಿ) ಪರವಾಗಿ, ನಾನು ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷಕ್ಕೆ **ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ,** ಬೆಂಗಳೂರು (ಬೈ–ರೈಡ್) ನ ಹಣಕಾಸು ಹೇಳಿಕೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕಾಯಿದೆಯ ಸೆಕ್ಷನ್ 143(6)(ಎ) ರ ಅಡಿಯಲ್ಲಿ ನಡೆಸಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯ ಪತ್ರ (ವರ್ಕಿಂಗ್ ಪೇಪರ್ಸ್)ಗಳಿಗೆ ಪ್ರವೇಶವಿಲ್ಲದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಇದು ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಕಂಪನಿ ಸಿಬ್ಬಂದಿಗಳ ವಿಚಾರಣೆಗಳು ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ದ ಪರೀಕ್ಷೆಗೆ ಸೀಮಿತವಾಗಿದೆ.

**ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿ ಮಾಡಲಾದ ಪರಿಷ್ಕರಣೆಗಳನ್ನು ಗಮನದಲ್ಲಿಟ್ಟುಕೊಂಡು;** ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಎತ್ತಲಾದ ನನ್ನ ಕೆಲವು ಲೆಕ್ಕಪರಿಶೋಧನಾ ಅವಲೋಕನಗಳನ್ನು ಜಾರಿಗೆ ತರಲು, ಕಾಯಿದೆಯ ಸೆಕ್ಷನ್ 143(6)(ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಕುರಿತು ನಾನು ಯಾವುದೇ ಹೆಚ್ಚಿನ ಕಾಮೆಂಟ್‌ಗಳನ್ನು ನೀಡಲು ಅಥವಾ ಪೂರಕಗೊಳಿಸಲು ಸಾಧ್ಯವಿಲ್ಲ.

**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಪರವಾಗಿ,**

**ಸಹಿ/–**

**(ಅಶೋಕ್ ಸಿನ್ಹಾ)**

ಪ್ರಿನ್ಸಿಪಲ್ ಅಕೌಂಟೆಂಟ್ ಜನರಲ್ (ಆಡಿಟ್–II)

ಕರ್ನಾಟಕ, ಬೆಂಗಳೂರು

ಸ್ಥಳ: ಬೆಂಗಳೂರು

ದಿನಾಂಕ: 19.12.2025

## ಕಾರಿಡಾರ್ – 4 ರ ಹೀಲಲಿಗೆಯಿಂದ ರಾಜಾನುಕುಂಟೆಗೆ ಕನಕಮಾರ್ಗ ನಿರ್ಮಾಣದ ಕಾಮಗಾರಿ ಪ್ರಗತಿಗಳು



ಕಾಸ್ಟಿಂಗ್ ಯಾರ್ಡ್‌ನಲ್ಲಿ ಬ್ಯಾಚಿಂಗ್ ಪ್ಲಾಂಟ್ ನಿರ್ಮಾಣ, ಸಣ್ಣ ಸೇತುವೆಗಳ ನಿರ್ಮಾಣ, ಕಾರಿಡಾರ್–4 ರಲ್ಲಿನ ಭೂಮಿ ಕಾಮಗಾರಿಗಳು ಪ್ರಗತಿಯಲ್ಲಿವೆ.

## SEMU - ಕಾರಿಡಾರ್ –2 ಮತ್ತು ಕಾರಿಡಾರ್ – 4 ಕಾಮಗಾರಿ ಪ್ರಗತಿಗಳು






ವಿಶ್ವ ಏಡ್ಸ್ ದಿನದ ಜಾಗೃತಿ ಕಾರ್ಯಾಗಾರ, ರಕ್ತದಾನ ಶಿಬಿರ, ಮಾಸಿಕ SHE ಸಭೆ ಮತ್ತು MESA ಆಡಿಟ್ ಚಟುವಟಿಕೆಗಳ ದೃಶ್ಯಾವಳಿಗಳು.

**4ನೇ ವಾರ್ಷಿಕ ವರದಿ 2024–25**

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ




## ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

**ನೋಂದಾಯಿತ ಕಚೇರಿ:** ಸಂಪರ್ಕ ಸೌಧ, ಮೊದಲನೇ ಮಹಡಿ, ಸರ್ವೆ ಸಂಖ್ಯೆ 8 (ಬಿ.ಇ.ಪಿ. ಕಟ್ಟಡ)
ಒರಾಯಿನ್ ಮಾಲ್ ಎದುರು, ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು – 560 010